ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶೈಕ್ಷಣಿಕ ಪ್ರವಾಸಗಳ ಈ ಋತುಮಾನದಲ್ಲಿ ಪ್ರಯಾಸ ಪಡದೆ ಪ್ರಯೋಜನ ಪಡೆಯುವುದು ಹೇಗೆ?

ಮಾಯಾವತಿ ಉತ್ತರಾಧಿಕಾರಿ ಆಕಾಶ್ 9
ಕೃಷಿ ಸರಕು ರಫ್ತು 18 ಲಕ್ಷ ಟನ್‌ಗೆ ಇಳಿಕೆ 8
ಆಳ-ಅಗಲ
ಪ್ರಶ್ನೆಗಾಗಿ ಕಾಸು ಪ್ರಕರಣ: ಶಿಫಾರಸು ಇದ್ದರೂ ತನಿಖೆ ಇಲ್ಲ
ಬೇಡಿಕೆ ಈಡೇರಿಕೆಗೆ ಈಡಿಗರ ಶಕ್ತಿ ಪ್ರದರ್ಶನ 5

ಬುಡಕಟ್ಟು ಸಮುದಾಯದ ನಾಯಕನಿಗೆ ಉನ್ನತ ಹುದ್ದೆ • ಒಂದೆರಡು ದಿನಗಳಲ್ಲಿ ಪ್ರಮಾಣ

ಛತ್ತೀಸಗಢ: ಸಾಯ್ ಹೊಸ ಸಿ.ಎಂ

ಪ್ರಜಾವಾಣಿ ವಾರ್ತೆ

ಭೋಪಾಲ್: ಛತ್ತೀಸಗಢದ ನೂತನ ಮುಖ್ಯಮಂತ್ರಿಯಾಗಿ ಬುಡಕಟ್ಟು ಸಮುದಾಯದ ಪ್ರಭಾವಿ ನಾಯಕ, ಕೇಂದ್ರದ ಮಾಜಿ ಸಚಿವ ವಿಷ್ಣುದೇವ್ ಸಾಯ್ ಅವರು ಆಯ್ಕೆಯಾಗಿದ್ದಾರೆ. ವರಿಷ್ಠರು ನೇಮಕ ಮಾಡಿದ ವೀಕ್ಷಕರ ಸಮ್ಮುಖದಲ್ಲಿ, ಬಿಜೆಪಿ ಶಾಸಕಾಂಗ ಪಕ್ಷದ ಸಭೆ ರಾಯಪುರದಲ್ಲಿ ಭಾನುವಾರ ನಡೆಯಿತು. ಈ ಸಭೆಯ ನಂತರ ಸಾಯ್ ಹೆಸರನ್ನು ಪ್ರಕಟಿಸಲಾಯಿತು.

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಆಗುತ್ತಿದ್ದಂತೆಯೇ ಸಾಯ್ ಅವರು ರಾಜಭವನಕ್ಕೆ ತೆರಳಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಸರ್ಕಾರ ರಚಿಸುವಂತೆ ರಾಜ್ಯಪಾಲರು ಸಾಯ್ ಅವರಿಗೆ ಆಹ್ವಾನ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮಯ ಲಭ್ಯತೆ ಆಧರಿಸಿ, ಮಂಗಳವಾರ ಅಥವಾ ಬುಧವಾರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಆಗಿ ಆಯ್ಕೆಯಾದ ವಿಷ್ಣುದೇವ್ ಸಾಯ್ ಅವರಿಗೆ ಬಿಜೆಪಿ ಮುಖಂಡರಾದ ಸರ್ವಾನಂದ ಸೋನೊವಾಲ್ ಮತ್ತು ದುಷ್ಯಂತ್ ಕುಮಾರ್ ಗೌತಮ್ ಅವರು ಹೂವಿನ ಹಾರ ಹಾಕಿ ಅಭಿನಂದಿಸಿದರು –ಪಿಟಿಐ ಚಿತ್ರ

ಸಾಯ್ ಅವರು ಕುಂಕುರಿ ಮೀಸಲು ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದಾರೆ. ಅಲ್ಲಿ ಅವರು ಕಾಂಗ್ರೆಸ್ಸಿನ ಯು.ಡಿ. ಮಿಂಜ್ ಅವರನ್ನು 25 ಸಾವಿರಕ್ಕೂ ಹೆಚ್ಚು ಮತಗಳಿಂದ ಸೋಲಿಸಿದ್ದಾರೆ. ಸರಗುಜಾ ಪ್ರದೇಶದಲ್ಲಿ ಬಿಜೆಪಿ ಅಷ್ಟೂ ಸ್ಥಾನಗಳನ್ನು (14) ಗೆದ್ದಿರುವ ಕಾರಣ, ಸಾಯ್ ಅವರ ಹೆಸರು ಮುಖ್ಯಮಂತ್ರಿ ಹುದ್ದೆಗೆ ಪ್ರಬಲವಾಗಿ ಕೇಳಿಬಂದಿತ್ತು.

9ನೇ ಪುಟ ನೋಡಿ

ಮಧ್ಯಪ್ರದೇಶ: ಕುತೂಹಲಕ್ಕೆ ಇಂದು ತೆರೆ?

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಸೋಮವಾರ ನಡೆಯಲಿದ್ದು, ಮುಂದಿನ ಮುಖ್ಯಮಂತ್ರಿ ಯಾರಾಗುವರು ಎಂಬ ಕುತೂಹಲಕ್ಕೆ ತೆರೆಬೀಳಬಹುದು ಎಂದು ನಿರೀಕ್ಷಿಸಲಾಗಿದೆ.

‘ಶಾಸಕಾಂಗ ಪಕ್ಷದ ಸಭೆ ಸಂಜೆ 4ಕ್ಕೆ ಆರಂಭವಾಗಲಿದ್ದು, ಸಂಜೆ 7ರ ವೇಳೆಗೆ ನೂತನ ಮುಖ್ಯಮಂತ್ರಿಯ ಹೆಸರು ಪ್ರಕಟಗೊಳ್ಳುವ ಸಾಧ್ಯತೆಯಿದೆ’ ಎಂದು ಶಾಸಕರೊಬ್ಬರು ಹೇಳಿದರು. ಶಿವರಾಜ್ ಸಿಂಗ್ ಚೌಹಾಣ್, ಪ್ರಹ್ಲಾದ್ ಪಟೇಲ್, ನರೇಂದ್ರ ಸಿಂಗ್ ತೋಮರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ, ಮಧ್ಯಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ. ಶರ್ಮ ಅಲ್ಲದೆ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸಿ.ಎಂ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ವಸುಂಧರಾ ಭೇಟಿಯಾದ ಶಾಸಕರು

ಜೈಪುರ (ಪಿಟಿಐ): ರಾಜಸ್ಥಾನದ ಮುಂದಿನ ಮುಖ್ಯಮಂತ್ರಿ ಯಾರಾಗುವರು ಎಂಬ ಕುತೂಹಲ ಮುಂದುವರಿದಿದೆ. ಈ ನಡುವೆ, ಬಿಜೆಪಿಯ ಕೆಲವು ಶಾಸಕರು ಪಕ್ಷದ ಪ್ರಭಾವಿ ನಾಯಕಿ ವಸುಂಧರಾ ರಾಜೇ ಅವರನ್ನು ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಕೇಂದ್ರ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಮೂವರು ವೀಕ್ಷಕರನ್ನು ನೇಮಿಸಿದ್ದರೂ ಸಭೆಯ ದಿನಾಂಕ ಪ್ರಕಟಿಸಿಲ್ಲ. 10 ಶಾಸಕರು ರಾಜೇ ಅವರನ್ನು ಸಿವಿಲ್ ಲೈನ್ಸ್‌ನಲ್ಲಿರುವ ಅವರ ನಿವಾಸದಲ್ಲಿ ಭೇಟಿಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಟ್ರಕ್ ಚಾಲಕರಿಗೆ ಎ.ಸಿ ಕ್ಯಾಬಿನ್ ಕಡ್ಡಾಯ

ನವದೆಹಲಿ (ಪಿಟಿಐ): ದೇಶದಲ್ಲಿ 2025ರ ಅ.1ರಿಂದ ತಯಾರಾಗುವ ಎಲ್ಲ ಟ್ರಕ್‌ಗಳ ಚಾಲಕರ ಕ್ಯಾಬಿನ್ ಕಡ್ಡಾಯವಾಗಿ ಹವಾನಿಯಂತ್ರಿತ ಆಗಿರಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ.

ಚಾಲಕರು ಅತಿಯಾದ ತಾಪಮಾನದಲ್ಲಿ ಟ್ರಕ್‌ಗಳನ್ನು ಚಲಾಯಿಸುತ್ತಾರೆ. ಹಾಗಾಗಿ, ಅವರ ಆರೋಗ್ಯ ಹಾಗೂ ಸುರಕ್ಷತೆ ದೃಷ್ಟಿಯಿಂದ ಸಚಿವಾಲಯವು ಈ ನಿರ್ಧಾರ ಕೈಗೊಂಡಿದೆ.

3.5 ಟನ್‌ನಿಂದ 12 ಟನ್‌ನಷ್ಟು ಸರಕು ಸಾಗಣೆ ಮಾಡುವ ವಾಹನಗಳು (ಎನ್‌2) ಹಾಗೂ 12 ಟನ್‌ಗೂ ಹೆಚ್ಚು ಸರಕು ಸಾಗಣೆ ಮಾಡುವ ವಾಹನಗಳಿಗೆ (ಎನ್‌3) ಈ ನಿಯಮ ಅನ್ವಯಿಸಲಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ. ಹವಾನಿಯಂತ್ರಿತ ಕ್ಯಾಬಿನ್‌ನ ಕಾರ್ಯಕ್ಷಮತೆ ಪರೀಕ್ಷೆಯು ಸಚಿವಾಲಯವು ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಮಾನದಂಡದ (ಐಎಸ್ 14618:2022) ಪ್ರಕಾರವೇ ಇರಬೇಕು ಎಂದು ಸ್ಪಷ್ಟಪಡಿಸಿದೆ.

ಈ ವ್ಯವಸ್ಥೆ ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆಗೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಜುಲೈನಲ್ಲಿ ಒಪ್ಪಿಗೆ ನೀಡಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸುಳ್ಳು ಸುದ್ದಿ ಪತ್ತೆಗೆ ಐದು ಸಂಸ್ಥೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮ ಹಾಗೂ ಜಾಲತಾಣಗಳ ಮೂಲಕ ಸುಳ್ಳು ಸುದ್ದಿ ಹರಡುವವರ ಪತ್ತೆಗಾಗಿ ರಾಜ್ಯ ಸರ್ಕಾರದಿಂದ ‘ಮಾಹಿತಿ ತಿರುಚುವಿಕೆ ಪತ್ತೆ ಘಟಕ’ (ಐಡಿಟಿಯು) ರಚಿಸಲಾಗುತ್ತಿದ್ದು, ಘಟಕದ ಕೆಲಸಕ್ಕಾಗಿ ಐದು ಸಂಸ್ಥೆಗಳು ಆಯ್ಕೆ ಆಗಿವೆ.

ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ (ಐಟಿ-ಬಿಟಿ) ಇಲಾಖೆ ಅಧೀನದಲ್ಲಿ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ನೇತೃತ್ವದಲ್ಲಿ ಐಡಿಟಿಯು ಕೆಲಸ ಮಾಡಲಿದ್ದು, ಸದ್ಯದಲ್ಲೇ ಕಾರ್ಯಾಚರಣೆ ಆರಂಭಿಸಲಿದೆ.

ಐಡಿಟಿಯು ಜೊತೆ ಕೆಲಸ ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ದೇಶದ ಹಲವು ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು. ಈ ಪೈಕಿ ಐದು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.

ಗೌರಿ ಮೀಡಿಯಾ ಟ್ರಸ್ಟ್, ಲಾಜಿಕಲಿ ಇನ್ಫೊಮೀಡಿಯಾ ಪ್ರೈವೆಟ್ ಲಿ., ಟ್ರೈಲೈಕ್ ಟೆಕ್ನಾಲಜಿ ಲಿ., ನ್ಯೂಸ್ ಪ್ಲಸ್ ಕಮ್ಯೂನಿಕೇಷನ್ಸ್ ಹಾಗೂ ಒಡಬ್ಲ್ಯು ಡಾಟಾ ಲೀಡ್ಸ್ ಆಯ್ಕೆ ಆಗಿವೆ.

8ನೇ ಪುಟ ನೋಡಿ

ಕರ್ನಾಟಕ ಸರ್ಕಾರ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ
ತಿಂಗಳು 6 ಸಾಧನೆಗಳು ಹಲವಾರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ನುಡಿದಂತೆ ನಡೆಯುತ್ತಿರುವ ಗ್ಯಾರಂಟಿ ಸರ್ಕಾರ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು”.
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಾದ ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್‌ರನ್ನು ಅಭಿನಂದಿಸುತ್ತಿರುವುದು.

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg | ಗೃಹಲಕ್ಷ್ಮಿ – ₹2000 | ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ಅಲ್ಪಸಂಖ್ಯಾತರ ನಿರ್ದೇಶನಾಲಯ

- **ಸಂಖ್ಯಾಬಲ ದ್ವಿಗುಣ:–** 2023–24ನೇ ಸಾಲಿನಿಂದ 50 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿಗಳನ್ನು ದ್ವಿಗುಣಗೊಳಿಸಲಾಗಿದೆ. ಇದರಿಂದಾಗಿ ಸದರಿ ಶಾಲೆಗಳಲ್ಲಿ ಹೆಚ್ಚುವರಿಯಾಗಿ 2196 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುತ್ತಾರೆ.
- **ಸಂಯೋಜಿತ ಶಾಲೆಗಳು:–** 2023–24ನೇ ಸಾಲಿನಿಂದ ರಾಜ್ಯದ 62 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು 6ನೇ ತರಗತಿಯಿಂದ 12ನೇ ತರಗತಿಯವರೆಗೆ ಸಂಯೋಜಿತ ಶಾಲೆಗಳನ್ನಾಗಿ ಉನ್ನತೀಕರಿಸಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ಶಾಲೆಗಳಲ್ಲಿ ಹೆಚ್ಚುವರಿಯಾಗಿ 1191 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುತ್ತಾರೆ.
- **ಹುದ್ದೆಗಳ ಮಂಜೂರಾತಿ:–** ಉನ್ನತೀಕರಣಗೊಂಡ 62 ವಸತಿ ಶಾಲೆಗಳ ಗ್ರೂಪ್–ಬಿ ವೃಂದದ ಪ್ರಾಂಶುಪಾಲರ ಹುದ್ದೆಗಳನ್ನು ಗ್ರೂಪ್–ಎ ವೃಂದದ ಪ್ರಾಂಶುಪಾಲರ ಹುದ್ದೆಗೆ ಉನ್ನತೀಕರಿಸಲಾಗಿದೆ. ದ್ವಿಗುಣಗೊಳಿಸಿದ & ಉನ್ನತೀಕರಣಗೊಂಡ ಶಾಲೆಗಳಿಗೆ 908 ಬೋಧಕ/ಬೋಧಕೇತರ ಹುದ್ದೆಗಳನ್ನು ಸೃಜಿಸಲಾಗಿದೆ.
- **ಜೈನ್ ಹಾಗೂ ಸಿಖ್ ಪ್ರಮುಖ ಕ್ಷೇತ್ರಗಳ ಅಭಿವೃದ್ಧಿ:–** ಜೈನ್ ಹಾಗೂ ಸಿಖ್ ಪ್ರಮುಖ ಕ್ಷೇತ್ರಗಳ ಅಭಿವೃದ್ಧಿಯ ಸಹಾಯಧನಕ್ಕಾಗಿ 30 ಕೋಟಿ ರೂ.ಗಳನ್ನು ಮೀಸಲಿರಿಸಿ ಈಗಾಗಲೇ ಶ್ರವಣಬೆಳಗೊಳ ಜೈನ ಪುಣ್ಯಕ್ಷೇತ್ರ ಸಮಗ್ರ ಅಭಿವೃದ್ಧಿಗೆ 9.25 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.
- **ಕೌಶಲ್ಯ ತರಬೇತಿ:–** ಪ್ರಸಕ್ತ ಸಾಲಿನಿಂದ ಅಲ್ಪಸಂಖ್ಯಾತರ ಕೌಶಲ್ಯಾಭಿವೃದ್ಧಿ ಯೋಜನೆಯಡಿ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ಈಗಾಗಲೇ ತರಬೇತಿಯನ್ನು ಪ್ರಾರಂಭಿಸಲಾಗಿದೆ ಹಾಗೂ ಸೇನಾ ತರಬೇತಿ, Technical & Non-Technical ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- **ಐ.ಎ.ಎಸ್/ಕೆ.ಎ.ಎಸ್ ತರಬೇತಿ:–** 400 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಹಜ್ ಭವನದಲ್ಲಿ ಐ.ಎ.ಎಸ್ ಮತ್ತು ಕೆ.ಎ.ಎಸ್ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದೆ. ಹಾಗೂ 60 ವಿದ್ಯಾರ್ಥಿಗಳಿಗೆ ಪದವಿಯೊಂದಿಗೆ ಐ.ಎ.ಎಸ್ ಮತ್ತು ಕೆ.ಎ.ಎಸ್ ತರಬೇತಿಯನ್ನು ಸಂಯೋಜಿತ ಕೋರ್ಸ್ ಮೂಲಕ ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯ ಔಕಾಫ್ ಮಂಡಳಿ

- **ವಕ್ಫ್ ಆಸ್ತಿಗಳ ಸಂರಕ್ಷಣೆ ಯೋಜನೆ:–** ವಕ್ಫ್ ಸಂಸ್ಥೆಗಳ ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ ರೂ.28.34 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
- **ಪೇಶ್ ಇಮಾಮ್ ಮತ್ತು ಮೌಜನ್‌ಗಳಿಗೆ ಗೌರವ ಧನ ನೀಡುವ ಯೋಜನೆ:–** ಮಂಡಳಿಯಲ್ಲಿ ನೋಂದಾಯಿತ ಮಸೀದಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೇಶ್ ಇಮಾಮ್ ಮತ್ತು ಮೌಜನ್‌ಗಳಿಗೆ ಒಟ್ಟು ರೂ.55.00 ಕೋಟಿ ಅನುದಾನ ಮಂಜೂರು ಮಾಡಲಾಗಿದ್ದು, 7593 ಪೇಶ್ ಇಮಾಮ್ ಮತ್ತು 7569 ಮೌಜನ್ಸ್‌ಗಳಿಗೆ ಒಟ್ಟು ರೂ.36.67 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
- **ತಸ್ತಿಕ್ ಮತ್ತು ವರ್ಷಾಸನ:–** ಒಟ್ಟು 868 ಹಿಂದುಯೇತರ ಸಂಸ್ಥೆಗಳಿಗೆ ತಸ್ತಿಕ್–ವರ್ಷಾಸನ ಪರಿಹಾರ ಪಾವತಿಸಲು ರೂ.3.28 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
- **ಪ್ರಕರಣ–52 ಮತ್ತು ಪ್ರಕರಣ–54ರ ಅಡಿಯಲ್ಲಿ:–** ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಪ್ರಕರಣ–52ರ ಅಡಿಯಲ್ಲಿ 21 ಪ್ರಕರಣಗಳನ್ನು ಹಾಗೂ ಪ್ರಕರಣ–54ರ ಅಡಿಯಲ್ಲಿ 419 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ.

ಕರ್ನಾಟಕ ರಾಜ್ಯ ಹಜ್ ಸಮಿತಿ

- ಕರ್ನಾಟಕ ರಾಜ್ಯದಿಂದ ಹಜ್–2023ರ ಹಜ್ ಯಾತ್ರೆಗೆ ಸುಮಾರು 7138 ಯಾತ್ರಿಕರು ಪ್ರಯಾಣ ಮಾಡಿರುತ್ತಾರೆ. ಬೆಂಗಳೂರಿನ ಎಂಬಾರ್ಕೇಷನ್‌ನಿಂದ ಸುಮಾರು 6146 ಯಾತ್ರಿಕರು ಹಜ್ ಯಾತ್ರೆಗೆ ಪ್ರಯಾಣ ಮಾಡಿರುತ್ತಾರೆ. (ಕರ್ನಾಟಕ, ಆಂಧ್ರಪ್ರದೇಶ ಹಾಗೂ ಇನ್ನಿತರೇ ರಾಜ್ಯದ ಯಾತ್ರಿಕರು ಸೇರಿದಂತೆ)

ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು

- 2023–24ನೇ ಸಾಲಿನಲ್ಲಿ ವಕ್ಫ್ ಆಸ್ತಿ/ಸಂಸ್ಥೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಶಾದಿಮಹಲ್/ವಾಣಿಜ್ಯ ಸಂಕೀರ್ಣ/ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕಾಗಿ ಸಾಲವಾಗಿ ಮತ್ತು ಇತರ ಖರ್ಚುಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.22.99 ಲಕ್ಷಗಳನ್ನು ವ್ಯಯಿಸಲಾಗಿದ್ದು ರೂ.118.97 ಲಕ್ಷಗಳನ್ನು ವಸೂಲು ಮಾಡಲಾಗಿರುತ್ತದೆ.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ

- 2023–24ನೇ ಸಾಲಿನಲ್ಲಿ 360 ಮುಸ್ಲಿಂ ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಆರೋಗ್ಯ ಪರಿಹಾರವಾಗಿ ಮತ್ತು ಇತರೆ ಖರ್ಚುಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.197.42 ಲಕ್ಷಗಳನ್ನು ವ್ಯಯಿಸಲಾಗಿರುತ್ತದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

- **ಡಿಜಿಟಲ್ ಸಾಲ ಮರುಪಾವತಿ ವ್ಯವಸ್ಥೆ:–** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸಾರ್ವಜನಿಕರಿಂದ ತನ್ನ ಸಾಲಗಳನ್ನು ಮರುಪಡೆಯಲು ಡಿಜಿಟಲ್ ಪಾವತಿ ಗೇಟ್‌ವೇ ಅನ್ನು ಪ್ರಾರಂಭಿಸಿರುತ್ತದೆ.
- **ಅರಿವು ವಿದ್ಯಾಭ್ಯಾಸ ಸಾಲ ಯೋಜನೆ:–** ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಾಲ ನೀಡುವ ಸಲುವಾಗಿ ರೂ.1000.00 ಲಕ್ಷಗಳ ಮೊತ್ತವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಾರ್ಪಸ್ ಫಂಡ್ ರೂಪದಲ್ಲಿ ನೀಡಲಾಗಿದೆ.
- **ವಿದೇಶಿ ವಿದ್ಯಾಭ್ಯಾಸ ಸಾಲ ಯೋಜನೆ:–** ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ವಿದೇಶ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡಲು ಅನುಕೂಲವಾಗುವಂತೆ ರೂ.20.00 ಲಕ್ಷದವರೆಗೆ ಸಾಲವನ್ನು ನೀಡಲಾಗುತ್ತಿದೆ.
- **ಮಹಿಳೆಯರಿಗಾಗಿ ವಿಶೇಷ ಶ್ರಮಶಕ್ತಿ ಯೋಜನೆ:–** ಅಲ್ಪಸಂಖ್ಯಾತ ಸಮುದಾಯದ ವಿಧವೆ, ಅವಿವಾಹಿತೆ, ವಿಚ್ಛೇದಿತ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ, ನಿಗಮದಿಂದ ರೂ.0.50 ಲಕ್ಷ ಮೊತ್ತದಲ್ಲಿ ಸಾಲ ಮತ್ತು ಸಹಾಯಧನವನ್ನು ನೀಡಲಾಗುತ್ತಿದೆ.
- **ಸಾಂತ್ವನ ಯೋಜನೆ:–** ರಾಜ್ಯದಲ್ಲಿ ಕೋಮು ಗಲಭೆ ಮತ್ತು ಕೋಮು ಹಿಂಸಾಚಾರದ ಸಂದರ್ಭಗಳಲ್ಲಿ ಹಾಗೂ ಪರಿಸರ ವಿಕೋಪಗಳಿಂದ ವ್ಯಾಪಾರ ಕೇಂದ್ರಗಳು ಹಾಗೂ ವಾಸದ ಮನೆಗಳು ನಾಶ ಅಥವಾ ಹಾನಿಗೊಳಗಾಗಿದ್ದರೆ ಅಂತಹ ಪ್ರಕರಣಗಳಲ್ಲಿ ರೂ.5.00 ಲಕ್ಷದವರೆಗೆ ನಿಗಮದಿಂದ ಸಾಲ / ಸಹಾಯಧನ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.
- **ಬಡ್ಡಿ ಸಹಾಯಧನ ಯೋಜನೆ:–** ಅಲ್ಪಸಂಖ್ಯಾತ ಸಮುದಾಯದ ಉದ್ಯಮಿಗಳಿಗೆ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ 10 ಕೋಟಿ ರೂ.ಗಳವರೆಗಿನ ಸಾಲಕ್ಕೆ ಶೇ.6ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದೆ.

ಶ್ರೀ ಮನೋಜ್ ಜೈನ್, ಐ.ಎ.ಎಸ್
ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ

ಶ್ರೀ ಮೊಹಮದ್ ನಜೀರ್
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

ಶ್ರೀ ಜೀಲಾನಿ. ಹೆಚ್. ಮೊಕಾಶಿ
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

‘ಸಮಗ್ರ ಚಿಕಿತ್ಸಾ ಪದ್ಧತಿ ಪರಿಚಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಜ್ಞಾನಶಾಸ್ತ್ರಗಳ ಏಕೀಕೃತಗೊಂಡ ಔಷಧ ಪದ್ಧತಿ ಅಗತ್ಯವಾಗಿದ್ದು, ಆಯುರ್ವೇದ ವಿಜ್ಞಾನದ ಸಹಾಯದಿಂದ ಸಮಗ್ರ ಚಿಕಿತ್ಸಾ ಪದ್ಧತಿ ಪರಿಚಯಿಸಬೇಕು’ ಎಂದು ಕಠ್ಮಂಡುವಿನ ವೈದ್ಯಕೀಯ ಕಾಲೇಜಿನ ಔಷಧಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸಮೋದ ಆಚಾರ್ಯ ತಿಳಿಸಿದರು.



ಡಾ. ಸಮೋದ ಆಚಾರ್ಯ

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕೆ.ಟಿ. ಅಪ್ಪಣ್ಣ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ‘ಆಯುರ್ವೇದ ಶಾಸ್ತ್ರದ ಐತಿಹಾಸಿಕ ಹಿನ್ನೆಲೆಯಲ್ಲಿ ಜ್ವರದ ನಿರ್ವಹಣೆ’ ಎಂಬ ವಿಷಯದ ಕುರಿತು ಮಾತನಾಡಿದರು.

‘ಸರಸ್ವತಿ ನದಿಯ ಸ್ವರೂಪ’ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ವಿದ್ವಾಂಸೆ ಸುವ್ರತಾ ವಿನೋದ್, ‘ವೇದ ಕಾಲೀನ ಜನರು ತಾವು ರಚಿಸಿದ ಸಾಹಿತ್ಯದಲ್ಲಿ ತಮ್ಮ ಪ್ರದೇಶದ ಎಲ್ಲ ನದಿಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಅದರಲ್ಲೂ ಸರಸ್ವತಿ ನದಿಗೆ ಅತ್ಯುನ್ನತವಾದ ಸ್ಥಾನಮಾನ ನೀಡಿದ್ದಾರೆ’ ಎಂದರು.

ದಿ ಮಿಥಿಕ್ ಸೊಸೈಟಿಯ ಆಡಳಿತ ಮಂಡಳಿ ಸದಸ್ಯ ಎಂ.ಆರ್. ಪ್ರಸನ್ನ ಕುಮಾರ್, ಎಸ್. ರವಿ, ಜೈನ್ ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ಕೇಂದ್ರದ ಸಂಶೋಧಕ ಸುದರ್ಶನ್ ಮತ್ತು ಶಸ್ತ್ರಚಿಕಿತ್ಸಕ ಡಾ. ಅಶ್ವಥ್ ಭಾಗವಹಿಸಿದ್ದರು.

ಸಾರ್ವಜನಿಕ ಸೂಚನೆ

ಎಂ/ಸ್. ಸತ್ತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇ ನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 179 (P), 182/1 ಮತ್ತು 182/2, ಕಗ್ಗಲೀಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು, ಇಲ್ಲಿ ಉದ್ದೇಶಿತ ವಸತಿ ಸಾಲು ಮನೆಗಳ ನಿರ್ಮಾಣಕ್ಕಾಗಿ ಪರಿಸರ ಅನುಮತಿ ಯನ್ನು ನೀಡಿದೆ. ಫೈಲ್ ನಂಬರ್ SEIAA 185 CON 2023, ದಿನಾಂಕ: 29/11/2023, ಅನುಮತಿ ಪಾತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ http://environmentclearance.nic.in ವೆಬ್ಸೈಟ್ ನಲ್ಲಿ ಕಾಣಬಹುದು.

1. ‘ನಮ್ಮ ಜಾತ್ರೆ’ಯಲ್ಲಿ ಯಕ್ಷಗಾನ ವೇಷಧಾರಿಗಳು ಗಮನ ಸೆಳೆದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್; 2. ಲಂಬಾಣಿ ನೃತ್ಯ ಪ್ರದರ್ಶನ ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್; 3. ಆಕರ್ಷಿಸಿದ ವೀರಗಾಸೆ ಕಲಾವಿದರ ಪ್ರದರ್ಶನ

‘ನಮ್ಮ ಜಾತ್ರೆ’ಗೆ ರಂಗು ತುಂಬಿದ ಕಲಾತಂಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ನಡೆದ ‘ನಮ್ಮ ಜಾತ್ರೆ’ಯಲ್ಲಿ ನಾಡಿನ ಕಲಾತಂಡಗಳ ಸಂಗಮವೇ ಆಗಿತ್ತು. ಸಂಭ್ರಮ ಮೇಳೈಸುವ ಜೊತೆಗೆ ಕಲಾತಂಡಗಳ ಪ್ರದರ್ಶನ ಆಕರ್ಷಿಸಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕಲಾತಂಡಗಳು, ಜಾನಪದ ಸಂಭ್ರಮವನ್ನು ಕಳೆಗಟ್ಟುವಂತೆ ಮಾಡಿದವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ‘ಕರ್ನಾಟಕ ಸಂಭ್ರಮ–50’ರ ಅಂಗವಾಗಿ ಅನ್ ಬಾಕ್ಸಿಂಗ್ ಬೆಂಗಳೂರು ಭಾಗವಾಗಿ ವಿಧಾನಸೌಧ ಮೆಟ್ಟಿಲು ಬಳಿ ಆಯೋಜಿಸಿದ್ದ ‘ನಮ್ಮ ಜಾತ್ರೆ’ ಮೆರವಣಿಗೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಚಾಲನೆ ನೀಡಿದರು.

ನೂರಾರು ಕಲಾವಿದರು ಮೆರವಣಿಗೆಯ ಉದ್ದಕ್ಕೂ ಪ್ರದರ್ಶನ ನೀಡಿದರು. ವಿಧಾನಸೌಧದ ಆವರಣದಿಂದ ಆರಂಭವಾದ ಮೆರವಣಿಗೆ ಮಧ್ಯಾಹ್ನ 12ರ ವೇಳೆಗೆ ರವೀಂದ್ರ ಕಲಾಕ್ಷೇತ್ರ ತಲುಪಿತು.

ಮೆರವಣಿಗೆಯಲ್ಲಿ ‘ನಮ್ಮ ಜಾತ್ರೆ’ಯ ಫಲಕ ಹೊತ್ತು ಆನೆ ಸಾಗಿತು. ಕಹಳೆ, ಡೊಳ್ಳು, ಮಂಗಳ ವಾದ್ಯ, ಎತ್ತಿನ ಗಾಡಿಗಳು, ಹಗಲು ವೇಷಧಾರಿಗಳು, ಲಂಬಾಣಿ ನೃತ್ಯ, ನಂದಿ ಧ್ವಜ, ವೀರಗಾಸೆ, ಪಟ ಕುಣಿತ, ಹಲಗೆ, ಕೀಲು ಕುದುರೆ, ಮರಗಾಲು ಕುಣಿತ ಗಮನ ಸೆಳೆಯಿತು. ನೂರಾರು ಯುವತಿಯರು ಪೂರ್ಣಕುಂಭ ಹಿಡಿದು ಸಾಗಿದರು. ತಮಟೆಯ ಅಬ್ಬರಕ್ಕೆ ಯುವಕ–ಯುವತಿಯರು ಹೆಜ್ಜೆ ಹಾಕಿದರು.

ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಭಾನುವಾರ ನಡೆದ ‘ಓಪನ್ ಸ್ಟ್ರೀಟ್ ಫೆಸ್ಟಿವಲ್’ನಲ್ಲಿ ಗಮನ ಸೆಳೆದ ಡೊಳ್ಳು ಕುಣಿತ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಕರಕುಶಲ ವಸ್ತುಗಳ ಮಾರಾಟ, ಪ್ರದರ್ಶನ ಮಳಿಗೆ ಸ್ಥಾಪಿಸಲಾಗಿತ್ತು. ಖಾದಿ ಬಟ್ಟೆ, ಕರಕುಶಲ ವಸ್ತುಗಳು, ಕಡಲೇಕಾಯಿ, ಮಂಡ್ಯದ ಬೆಲ್ಲ, ಕೊಡಗಿನ ಜೇನು ಹಾಗೂ ವೈನ್... ಹೀಗೆ ನಾನಾ ಪದಾರ್ಥಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಜಾತ್ರೆಗೆ ಬಂದವರು ಉತ್ತರ ಕರ್ನಾಟಕದ ಊಟ ಸವಿಯಲು ಅವಕಾಶವಿದ್ದು ಸೋಮವಾರ ಸಹ ನಮ್ಮ ಜಾತ್ರೆ ನಡೆಯಲಿದೆ.

ವೇದಿಕೆ ಸಮಾರಂಭದಲ್ಲಿ ನಟಿ ಪೂಜಾ ಗಾಂಧಿ ಮಾತನಾಡಿ, ‘ಪ್ರತಿನಿತ್ಯ ಕನ್ನಡ ಜಾತ್ರೆ ನಡೆಯಬೇಕು. ಕನ್ನಡ ಭಾಷೆಯೆಂದರೆ ಸೌಂದರ್ಯ ಹಾಗೂ ಸೊಗಸು. ರಾಜ್ಯದಲ್ಲಿ ನೆಲೆಸಿರುವ ಅನ್ಯಭಾಷಿಕರೂ ಕನ್ನಡ ಕಲಿಯುವಂತೆ ಆಗಬೇಕು. ಕನ್ನಡ ನನಗೆ ಬದುಕು ಕೊಟ್ಟಿದೆ. ಕನ್ನಡದಿಂದ ನಾನು ಚಿತ್ರರಂಗದಲ್ಲಿ ಇದ್ದೇನೆ’ ಎಂದರು.

ತಮ್ಮ ಮಾತಿನಲ್ಲಿ ಬಸವೇಶ್ವರರ ವಚನವನ್ನು ಉಲ್ಲೇಖಿಸಿದ ಅವರು, ಕನ್ನಡ ನಾಡಿನಲ್ಲಿರುವ ಪ್ರತಿಯೊಬ್ಬರು ಕನ್ನಡದ ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಮಾತನಾಡಿ, ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವದ ಅಂಗವಾಗಿ 12 ತಿಂಗಳು ಇಂತಹ ದೊಡ್ಡ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಗಿದೆ. ನಾಲ್ಕು ಕಂದಾಯ ವಿಭಾಗಗಳಲ್ಲಿಯೂ ಮುಂದಿನ ನಾಲ್ಕು ತಿಂಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು. ಆ ನಂತರ, ಬೆಂಗಳೂರಿನಲ್ಲಿ ದೊಡ್ಡ ಮಟ್ಟದಲ್ಲಿ ಮತ್ತೊಂದು ಸುವರ್ಣ ಸಂಭ್ರಮ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಕನ್ನಡ ನಾಡಿನ ಭಾಷೆ ಮತ್ತು ಸಂಸ್ಕೃತಿ ಎಲ್ಲರನ್ನು ಆಕರ್ಷಿಸುವಂತಹದ್ದು. ಆದರೆ, ನಾವು ಬೆಂಗಳೂರಿನಲ್ಲಿ ಕನ್ನಡ ಭಾಷಾ ಬಳಕೆಯನ್ನು ಕಡಿಮೆ ಮಾಡಿದ್ದೇವೆ. ಅನ್ಯ ಭಾಷೆಯ ವ್ಯಾಮೋಹ ಬಿಡದೆ ಇದ್ದರೆ ಬೆಂಗಳೂರಿನಲ್ಲಿ ಕನ್ನಡದ ಬೆಳವಣಿಗೆ ಆಗಲಾರದು ಎಂದು ಎಚ್ಚರಿಸಿದರು.

ದೂರದ ಪಂಜಾಬಿನಿಂದ ಬಂದಿರುವ ನಟಿ ಪೂಜಾ ಗಾಂಧಿ ಅವರು ಕನ್ನಡ ಕಲಿತಿದ್ದಾರೆ. ಅವರಂತೆಯೇ ಕನ್ನಡ ಸಿನಿಮಾದಲ್ಲಿ ನಟಿಸುವ ಅನ್ಯಭಾಷೆಯ ಕಲಾವಿದರೂ ಕನ್ನಡ ಕಲಿಯಬೇಕು ಎಂದು ಮನವಿ ಮಾಡಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಕಾದಂಬರಿ ಟ್ರಸ್ಟ್ ಸಂಸ್ಥಾಪಕರಾದ ಚಂದ್ರಜೈನ್ ಇದ್ದರು.

‘ಅರ್ಜುನನ ಕಾಲಿಗೆ ಗುಂಡೇಟು ಬಿದ್ದಿಲ್ಲ’

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ ಜಿಲ್ಲೆ): ‘ಆನೆ ಅರ್ಜುನನ ಕಾಲಿಗೆ ಗುಂಡೇಟು ಬಿದ್ದಿಲ್ಲ. ನಮ್ಮ ಕಾರ್ಯಾಚರಣೆ ತಂಡದ ಯಾರ ಬಳಿಯೂ ಬಂದೂಕು ಇರಲಿಲ್ಲ. ಅರ್ಜನನ ಕಾಲಿಗೆ ಕೂಳೆ ಚುಚ್ಚಿ ಗಾಯ ಆಗಿತ್ತು. ಅದನ್ನು ಮಾವುತ ವಿನು ಅಲ್ಲಿಯೇ ಗಮನಿಸಿದ್ದಾನೆ. ಕಾರ್ಯಾಚರಣೆ ವೇಳೆ ಯಾವುದೇ ಲೋಪ ಆಗಿಲ್ಲ’ ಎಂದು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಅರಿವಳಿಕೆ ತಜ್ಞ ಡಾ. ರಮೇಶ್ ಹೇಳಿದರು.

‘ಜ್ಞಾನ, ಸತತ ಪರಿಶ್ರಮದಿಂದ ಯಶಸ್ಸು ಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನ, ಕೌಶಲ, ಆತ್ಮಸ್ಥೈರ್ಯ, ಪರಿಶ್ರಮಗಳಿದ್ದರೆ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಐಐಪಿಎಂ ಅಧ್ಯಕ್ಷರೂ ಆಗಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಎಲ್. ಸತ್ಯ ಶ್ರೀನಿವಾಸ್ ಹೇಳಿದರು.

ಜ್ಞಾನಭಾರತಿ ಆವರಣದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಶನ್ ಮ್ಯಾನೇಜ್‌ಮೆಂಟ್ (ಐಐಪಿಎಂ)ನಲ್ಲಿ ಆಯೋಜಿಸಿದ್ದ ಪ್ರದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಐಐಪಿಎಂ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸುತ್ತಿದೆ. ಕೃಷಿ ಹಾಗೂ ಇದರ ಉತ್ಪನ್ನಗಳ ವಿಭಾಗದಲ್ಲಿ ಬೆಳವಣಿಗೆ ಸಾಧಿಸಲು ಇಲ್ಲಿ ಅವಕಾಶ ನೀಡಲಾಗುತ್ತಿದೆ ಎಂದು ವಿವರಿಸಿದರು.

ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಮನೀಷ್ ಶಾ ಮಾತನಾಡಿ, ‘ಕೃಷಿ ಮತ್ತು ಹೈನುಗಾರಿಕೆ ನಡುವೆ ಅಂತರ್ ಸಂಬಂಧವಿದೆ. ಕೃಷಿ ಇಲ್ಲದೇ ಜಾನುವಾರುಗಳಿಲ್ಲ ಜಾನುವಾರುಗಳಿಂದ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಗ್ರಾಮೀಣ ಅಭಿವೃದ್ಧಿಯಾಗಬೇಕಿದ್ದರೆ, ಅಲ್ಲಿನ ಉತ್ಪಾದನೆಗಳಿಗೆ ಉತ್ತಮ ಮಾರುಕಟ್ಟೆ ಸಿಗಬೇಕು’ ಎಂದರು.

ಐಐಪಿಎಂನಲ್ಲಿ ಕಲಿತ ಎಲ್ಲ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಕ್ಕಿರುವುದು ಈ ಕೋರ್ಸ್‌ನ ಮಹತ್ವವನ್ನು ತೋರಿಸುತ್ತದೆ ಎಂದು ಐಐಪಿಎಂ ನಿರ್ದೇಶಕ ರಾಕೇಶ್ ಮೋಹನ್ ಜೋಶಿ ತಿಳಿಸಿದರು.

293 ಪದವೀಧರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪಿಜಿಡಿಎಂ–ಎಬಿಪಿಎಂ, ಎಇಬಿಪಿ, ಎಫ್‌ಪಿಬಿಎಂ ಕೋರ್ಸ್‌ಗಳಲ್ಲಿ 9 ವಿದ್ಯಾರ್ಥಿಗಳು ಚಿನ್ನದ ಪದಕ, ಆರು ವಿದ್ಯಾರ್ಥಿಗಳು ಸರ್ವತೋಮುಖ ಸಾಧನೆ ಪ್ರಶಸ್ತಿಗಳನ್ನು ಪಡೆದರು.

‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್’ನ ವಿವಿಧ ವಿಭಾಗಗಳಲ್ಲಿ ಮೊದಲ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ಜೊನ್ನ ಗುಣದೀಪ್ (ಎಇಬಿಎಂ), ಅಪರ್ಣ ಕುಮಾರಿ (ಎಫ್.ಬಿ.ಪಿ.ಎಂ), ರೀಬಾ ಯೆಲ್ಸ ಥಾಮಸ್ (ಎಫ್.ಪಿ.ಬಿ.ಎಂ), ಸಿಂಧೂ ಪಿ. (ಎಫ್.ಪಿ.ಬಿ.ಎಂ), ಕಿಶೋರ್ ಕುಮಾರ್ ಕೊಂಡೇತಿ (ಎಬಿಪಿಎಂ), ಶೋಭನಾ ರೌಟ್ (ಎಬಿಪಿಎಂ), ಸುಶಾಂತ್ ಬಿ.ಎಸ್ (ಎಇಬಿಎಂ) ಮತ್ತು ಬೆಕ್ಕಂ ಪೀಸಾ ರೈ ವೆಂಕಟ ಪವನ್ ಕುಮಾರ್ ರೆಡ್ಡಿ (ಎಇಬಿಎಂ) ಅವರು ಪರಸ್ಪರ ಅಭಿನಂದಿಸಿ, ಸಂಭ್ರಮಿಸಿದ ಕ್ಷಣ –ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಗವಿಪುರಕ್ಕೆ ಸಂಪರ್ಕ ಕಲ್ಪಿಸುವ ಅಕ್ಕಮಹಾದೇವಿ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

‘ರಸ್ತೆ ಗುಂಡಿಗಳನ್ನು ಮುಚ್ಚಿ’

ಬಸವನಗುಡಿ ವಿಧಾನಸಭೆ ಕ್ಷೇತ್ರದ ಹನುಮಂತನಗರದ ಗವಿಪುರಕ್ಕೆ ಸಂಪರ್ಕ ಕಲ್ಪಿಸುವ ಅಕ್ಕಮಹಾದೇವಿ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ. ಸುಮಾರು ಮೂರು ತಿಂಗಳಿಂದ ಈ ಸಮಸ್ಯೆ ಹೆಚ್ಚಾಗಿದ್ದು, ಸಾರ್ವಜನಿಕರ ಓಡಾಟಕ್ಕೂ ಅನನುಕೂಲವಾಗಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಈ ಭಾಗದಲ್ಲಿ ಆಟೊ, ಕ್ಯಾಬ್‌ಗಳು ಬರಲು ಹಿಂದೇಟು ಹಾಕುತ್ತಿವೆ. ಬಂದರೂ ಹೆಚ್ಚಿನ ಬಾಡಿಗೆ ಕೇಳುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ರಸ್ತೆ ದುರಸ್ತಿಗೊಳಿಸುವ ಕಾರ್ಯಕ್ಕೆ ಮುಂದಾಗಿಲ್ಲ. ಬಿಬಿಎಂಪಿ ಕೂಡಲೇ ರಸ್ತೆ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಬಿ.ಆರ್. ಸುರೇಶ್, ಸ್ಥಳೀಯ ನಿವಾಸಿ



ಲಕ್ಷ್ಮೀನಾರಾಯಣಪುರದ 4ನೇ ಮುಖ್ಯರಸ್ತೆಯ ದುಃಸ್ಥಿತಿ.

‘ಅರ್ಧಕ್ಕೆ ನಿಂತ ರಸ್ತೆ ಕಾಮಗಾರಿ’

ರಾಜಾಜಿನಗರ ವಿಧಾನಸಭೆ ಕ್ಷೇತ್ರದ ವಾರ್ಡ್ ಸಂಖ್ಯೆ 97ರ ಲಕ್ಷ್ಮೀನಾರಾಯಣಪುರದ 4ನೇ ಮುಖ್ಯರಸ್ತೆಯಲ್ಲಿ ಒಂದು ವರ್ಷದಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ರಸ್ತೆ ನಿರ್ಮಿಸುವ ಉದ್ದೇಶದಿಂದ ಜಲ್ಲಿಕಲ್ಲು ಹಾಕಿ ಹಾಗೆಯೇ ಬಿಡಲಾಗಿದೆ. ಇದರಿಂದ, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಇದರಿಂದ ದೂಳಿನ ಸಮಸ್ಯೆ ಹೆಚ್ಚಾಗಿ, ವೃದ್ಧರು ಸೇರಿದಂತೆ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಏನು ಪ್ರಯೋಜನವಾಗುತ್ತಿಲ್ಲ. ಕೂಡಲೇ ರಸ್ತೆ ಕಾಮಗಾರಿ ಪ್ರಾರಂಭಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಗೋಕುಲರಾಜ್ ಜಿ., ಸ್ಥಳೀಯ ನಿವಾಸಿ

‘ರಸ್ತೆಯಲ್ಲಿ ಹರಿಯುವ ತ್ಯಾಜ್ಯ ನೀರು’

ಹಡ್ಸನ್ ವೃತ್ತದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ, ಕ್ಯಾಂಟೀನ್‌ಗೆ ಬರುವ ಗ್ರಾಹಕರು ಮೂಗು ಮುಚ್ಚಿಕೊಂಡು ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಈ ಪ್ರದೇಶದಲ್ಲಿ ಬಿಬಿಎಂಪಿಯ ಕಸ ತುಂಬಿಕೊಂಡಿರುವ ವಾಹನಗಳು ನಿಲ್ಲುತ್ತವೆ. ಈ ವಾಹನಗಳಲ್ಲಿ ತುಂಬಿರುವ ಕಸದಿಂದ ಉತ್ಪತ್ತಿಯಾಗುವ ಕೊಳಚೆ ನೀರು ಸಹ ಇದೇ ರಸ್ತೆಯಲ್ಲಿ ಹರಿಯುತ್ತಿದೆ. ಹಡ್ಸನ್ ವೃತ್ತದ ಪಕ್ಕದಲ್ಲಿ ಅನೇಕ ಶಾಲಾ–ಕಾಲೇಜುಗಳಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇದರ ಪಕ್ಕದಲ್ಲಿರುವ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಭೇಟಿ ನೀಡುವ ಗ್ರಾಹಕರು ತೊಂದರೆ ಅನುಭವಿಸುತ್ತಿದ್ದಾರೆ.

ಬಾಲಕೃಷ್ಣ ಎ., ಸ್ಥಳೀಯ ನಿವಾಸಿ

ಹಡ್ಸನ್ ವೃತ್ತದಲ್ಲಿ ರಸ್ತೆಯಲ್ಲಿ ಹರಿಯುತ್ತಿರುವ ತ್ಯಾಜ್ಯ ನೀರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED ACCOUNTS Assistant with Tally Knowledge B.Com Below 40 years Known Kannada, English, Hindi in and around Rajajinagar Contact: 9108458798/ 080 -23384085

Graphic Designers

WANTED GRAPHIC Designer Expireinced in Corel Draw in and around Rajajinagar Contact: 9108458798/ 080 -23384085

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

VISHNARAM, 6498089K, SEP, Vill- Ramrawas Kallan, Bhopalgarh, Jodhpur, Rajasthan, changed Son's name VIKARAM to VIKRAM, 08/12/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

EDUCATION CORNER

ACADAMIS Knowledge and IT innovation
ERP Solution for SCHOOLS & COLLEGES
COMPREHENSIVE, USER FRIENDLY
Module Based Customized Application
Parent App
Teacher App
GET IT ON Google Play
Download on the App Store
Founder Dr K Chandrasekhar
Proud To Be ASSOCIATED WITH NATIONAL PUBLIC SCHOOLS NAFL TISB
Contact Now
G V Suresh +91 9886200223
Shruthi S +91 9986642131
E-Mail info@acadamis.in
Scan here to visit our Website
https://www.acadamis.in/

REAL ESTATE SELLING

Farm House/ Land/ Resorts

Multiple Locations

NANDI HILLS rd 1/2 acre converted ekhata gated 15 furnished AC rooms sale 9Cr Ph:7019346409

DH Classifieds More value, more impact ಪ್ರಜಾವಾಣಿ EDUCATION
The perfect medium for all educational related ads!
www.dhclassifieds.com
Book your ad with us now. BOOK NOW
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ದೇವಾಂಗ ಸಂಘದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ. ಪರಮೇಶ್ವರ

‘ಅಧಿಕಾರ, ಆಸ್ತಿ ಬಲಿಷ್ಠ ವರ್ಗಗಳಿಗೆ ಸೀಮಿತ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ದೇವಾಂಗ ಸಮುದಾಯದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. (ಎಡದಿಂದ) ದೇವಾಂಗ ಸಂಘದ ಬೆಂಗಳೂರು ಘಟಕದ ಉಪಾಧ್ಯಕ್ಷೆ ಎಚ್. ಪಾರ್ವತಿ, ಅಧ್ಯಕ್ಷ ಜಿ. ರಮೇಶ್, ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ, ಸಂಘದ ಉಪಾಧ್ಯಕ್ಷ ಎ. ವಿಜಯಕುಮಾರ್ ಭಾಗವಹಿಸಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೇಶದಲ್ಲಿ ವೃತ್ತಿ ಆಧಾರದಲ್ಲಿ ಸಮುದಾಯಗಳನ್ನು ವರ್ಗೀಕರಿಸಿದ ಕಾರಣ ಸಮಾಜದಲ್ಲಿ ಅಸಮಾನತೆ ಹೆಚ್ಚಾಗಿದೆ. ಇದರಿಂದ, ಅಧಿಕಾರ ಮತ್ತು ಆಸ್ತಿ ಬಲಿಷ್ಠ ವರ್ಗಗಳಿಗೆ ಮಾತ್ರ ಸೀಮಿತವಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ನಗರದಲ್ಲಿ ಭಾನುವಾರ ದೇವಾಂಗ ಸಂಘ ಆಯೋಜಿಸಿದ್ದ ‘2022-23ನೇ ಸಾಲಿನ ಪ್ರತಿಭಾ ಪುರಸ್ಕಾರ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ‘2ಎ ಪ್ರವರ್ಗದಲ್ಲಿ 102 ಜಾತಿಗಳಿದ್ದು, ಅದರಲ್ಲಿ ತೋಳ್ಬಲ ಹೊಂದಿರುವ ಕೆಲ ಜಾತಿಗಳು ಮಾತ್ರ ಮೀಸಲಾತಿ ಲಾಭ ಪಡೆದುಕೊಳ್ಳುತ್ತಿವೆ. ಧ್ವನಿ ಇಲ್ಲದ ಸಣ್ಣ ಸಮುದಾಯಗಳಿಗೆ ಮೀಸಲಾತಿ ಫಲ ಸಿಗುತ್ತಿಲ್ಲ’ ಎಂದು ತಿಳಿಸಿದರು.

‘ಶತಮಾನದಷ್ಟು ಇತಿಹಾಸ ಹೊಂದಿರುವ ದೇವಾಂಗ ಸಮುದಾಯ, ಸಂಘದ ಮೂಲಕ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವುದರ ಮೂಲಕ ಅವರಿಗೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ’ ಎಂದರು.

‘ಕಾಂತರಾಜ ಆಯೋಗದ ವರದಿ ಸರ್ಕಾರಕ್ಕೆ ತಲುಪಿಲ್ಲ. ವರದಿಯಲ್ಲಿ ಏನಿದೆ ಎಂಬುದು ಯಾರಿಗೂ ಗೊತ್ತಿಲ್ಲ. ವಿಷಯ ತಿಳಿಯದೇ ಅದರ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸ್ವೀಕರಿಸುವಂತೆ ಮನವಿ ಮಾಡಲಾಗುವುದು’ ಎಂದರು.

ಮುಂದಿನ ಬಜೆಟ್‌ನಲ್ಲಿ ದೇವಾಂಗ ಸಮುದಾಯದ ಹೆಣ್ಣುಮಕ್ಕಳಿಗಾಗಿ ವಸತಿನಿಲಯ ಹಾಗೂ ಕಾನೂನು ಕಾಲೇಜು ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವಂತೆ ದೇವಾಂಗ ಸಂಘದ ಸದಸ್ಯರು ಗೃಹ ಸಚಿವ ಜಿ. ಪರಮೇಶ್ವರ್ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ, ‘ದೇವಾಂಗ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಸಹಕಾರ ನೀಡಲಿದೆ. ಹಿಂದುಳಿದ ವರ್ಗಗಳ ಒಕ್ಕೂಟಗಳಿಂದ ಕಾಂತರಾಜ ಆಯೋಗದ ವರದಿ ಸ್ವೀಕರಿಸುವ ಒತ್ತಡವಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ಸ್ವೀಕರಿಸುವ ಭರವಸೆ ನೀಡಿದ್ದಾರೆ’ ಎಂದರು.

ಇದೇ ಸಂದರ್ಭದಲ್ಲಿ ಶಿವರಾಜ ತಂಗಡಗಿ ಅವರು ದೇವಾಂಗ ಸಂಘ ಕಾನೂನು ಮಹಾವಿದ್ಯಾಲಯವನ್ನು ಉದ್ಘಾಟಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್, ಸಂಘದ ರಾಜ್ಯ ಘಟಕ ಅಧ್ಯಕ್ಷ ರವೀಂದ್ರ ಪಿ. ಕಲಬುರ್ಗಿ ಭಾಗವಹಿಸಿದ್ದರು.

‘ಪರಮೇಶ್ವರ ಸಿ.ಎಂ ಆಗಲಿ’

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಮುಂದೆ ಮುಖ್ಯಮಂತ್ರಿಯಾಗಲಿ ಎಂಬ ಕೂಗು ಜೋರಾಗಿಯೇ ಕೇಳಿ ಬಂದಿತ್ತು.

‘ನಾನು ಮುಖ್ಯಮಂತ್ರಿ ಆಗಬೇಕೆಂದು ಜೋರಾಗಿಯೇ ಹೇಳಿದ್ದೀರಿ ನಿಮ್ಮ ಈ ಅಭಿಮಾನಕ್ಕೆ ಧನ್ಯವಾದಗಳು. ಆದರೆ, ಇದು ಗೊಂದಲ ಸೃಷ್ಟಿಸುತ್ತದೆ’ ಎಂದು ಜಿ. ಪರಮೇಶ್ವರ ಹೇಳಿದರು.

‘ವಿಜ್ಞಾನ ಕಲಿಕೆ ಉತ್ತೇಜಿಸಲು ಪ್ರತ್ಯೇಕ ನೀತಿ’

ಬೆಂಗಳೂರು: ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ವಿಜ್ಞಾನದ ಕುತೂಹಲವನ್ನು ಉತ್ತೇಜಿಸಲು ಮತ್ತು ‘ಎಲ್ಲರಿಗೂ ವಿಜ್ಞಾನ’ ಎಂಬ ಉದ್ದೇಶವನ್ನು ಸಾಧಿಸಲು ಪೂರಕವಾಗುವಂತೆ ಹೊಸ ನೀತಿ ರೂಪಿಸಲು ತಮ್ಮ ಇಲಾಖೆಯ ಕಾರ್ಯದರ್ಶಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಸೂಚನೆ ನೀಡಿದ್ದಾರೆ.

‘ಚಂದ್ರಯಾನ -3 ರ ಯಶಸ್ಸಿನ ನಂತರ ಮಕ್ಕಳಲ್ಲಿ ಬಾಹ್ಯಾಕಾಶ ವಿಜ್ಞಾನದ ಕುರಿತ ಆಸಕ್ತಿ ಹೆಚ್ಚಾಗಿದೆ. ಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ವಿಜ್ಞಾನದ ಕುತೂಹಲವನ್ನು ಉತ್ತೇಜಿಸುವ ಸಲುವಾಗಿ ದೂರದರ್ಶಕಗಳನ್ನು ಒದಗಿಸುವುದು ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ನೀತಿ ರೂಪಿಸುವಂತೆ ಸೂಚಿಸಿದ್ದೇನೆ’ ಎಂದು ಸಚಿವರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಎರಡು ಪ್ರಾದೇಶಿಕ ವಿಜ್ಞಾನ ಕೇಂದ್ರಗಳು, ಎರಡು ತಾರಾಲಯಗಳು, ಎಂಟು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿವೆ. 11 ಸಂಚಾರಿ ತಾರಾಲಯಗಳು ಕಾರ್ಯನಿರ್ವಹಿಸುತ್ತಿವೆ. ವಿದ್ಯಾರ್ಥಿಗಳಲ್ಲಿ ಬಾಲ್ಯಾವಸ್ಥೆಯಿಂದಲೇ ವೈಜ್ಞಾನಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ನೂತನ ಯೋಜನೆ ಜಾರಿಗೊಳಿಸಲಾಗುವುದು. ಈ ಯೋಜನೆಯ ಅಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಟೆಲಿಸ್ಕೋಪ್ ಮತ್ತು ಮೈಕ್ರೋಸ್ಕೋಪ್‌ಗಳನ್ನು ವಿತರಿಸಲಾಗುವುದು. ಈ ಉಪಕರಣಗಳ ನಿರ್ವಹಣೆ ಮತ್ತು ಅವುಗಳನ್ನು ಬಳಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದಕ್ಕಾಗಿ ಶಿಕ್ಷಕರುಗಳಿಗೆ ವಿಶೇಷ ತರಬೇತಿ ನೀಡಲು ಚಿಂತನೆ ನಡೆಸಲಾಗಿದೆ’ ಎಂದಿದ್ದಾರೆ.

‘ಆತ್ಮಕಥೆ ಬರವಣಿಗೆ ಭಾವುಕನಾಗಿಸುತ್ತದೆ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ‘ನೆನಪಿನ ಪುಟಗಳು’ ಪುಸ್ತಕಕ್ಕೆ ‘ಮುಖ್ಯಮಂತ್ರಿ’ ಚಂದ್ರು ಅವರು ಟಿ.ಎನ್. ಸೀತಾರಾಮ್ ಅವರ ಹಸ್ತಾಕ್ಷರ ಪಡೆದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಆತ್ಮಕಥೆ ಬರವಣಿಗೆ ವ್ಯಕ್ತಿಯನ್ನು ಭಾವುಕನನ್ನಾಗಿಸುತ್ತದೆ. ಎಚ್ಚರ ತಪ್ಪಿದರೆ ಸುಳ್ಳುಗಳನ್ನು ಹೇಳುವಂತೆಯೂ ಮಾಡುತ್ತದೆ’ ಎಂದು ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಭಾನುವಾರ ಹೇಳಿದರು.

ಸಾವಣ್ಣ ಪ್ರಕಾಶನ ನಗರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರ ಆತ್ಮಕಥೆ ‘ನೆನಪಿನ ಪುಟಗಳು’ ಪುಸ್ತಕ ಬಿಡುಗಡೆಯಾಯಿತು. ಈ ವೇಳೆ ಮಾತನಾಡಿದ ಅವರು, ‘ಆತ್ಮಕಥೆಯಲ್ಲಿ ಬದುಕಿನ ನೆನಪುಗಳನ್ನು ಹಂಚಿಕೊಂಡಾಗ ಒಂದು ಬಗೆಯ ಒಳಗಿನ ಅಸ್ಪಷ್ಟ ಸರಳುಗಳಿಂದ ಮುಕ್ತಿ ಪಡೆಯುತ್ತಾ, ನಿರಾಳವಾಗುವ ಸುಖವನ್ನು ಅನೇಕ ಬಾರಿ ಕಂಡಿದ್ದೇನೆ. ನೆನಪುಗಳ ಬದುಕನ್ನು ಮತ್ತೊಮ್ಮೆ ಬದುಕುವ ಸುಂದರ ಅನುಭವವನ್ನು ಆತ್ಮಕಥೆ ಕೊಡುತ್ತದೆ. ಅನೇಕ ಬಗೆಯ ಧರ್ಮಸಂಕಟಗಳಿಂದಾಗಿ ಬದುಕಿನ ಎಲ್ಲ ನೆನಪು ಹೇಳಲಾಗದು ’ ಎಂದರು.

ಪುಸ್ತಕ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಸೀತಾರಾಮ್ ಅವರು 40 ವರ್ಷಗಳಿಂದ ಪರಿಚಯ. ಬದುಕಿನ ಎಲ್ಲ ಸ್ತರದ ಅನುಭವವನ್ನು ಪಡೆದಿದ್ದಾರೆ. 1985ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಗೌರಿಬಿದನೂರು ಕ್ಷೇತ್ರಕ್ಕೆ ಜನತಾ ಪಕ್ಷದಿಂದ ಟಿ.ಎನ್.ಸೀತಾರಾಮ್ ಅವರು ಟಿಕೆಟ್ ಆಕಾಂಕ್ಷಿ ಆಗಿದ್ದರು. ಆದರೆ, ಅವರ ಬದಲು ‘ಮುಖ್ಯಮಂತ್ರಿ’ ಚಂದ್ರು ಅವರಿಗೆ ದೊರೆಯಿತು. ಒಂದು ವೇಳೆ ಸೀತಾರಾಮ್ ಅವರಿಗೇ ಸಿಕ್ಕಿದ್ದರೆ ಜಯಿಸಿ, ಮಂತ್ರಿಯಾಗುವ ಸಾಧ್ಯತೆಯಿತ್ತು. ಅವರು ರಾಮಕೃಷ್ಣ ಹೆಗಡೆ ಅವರಿಗೆ ಆಪ್ತರಾಗಿದ್ದರು. ಆಗ ನಾನು ಮಂತ್ರಿಯಾಗುತ್ತಿದ್ದೆನೋ ಇಲ್ಲವೋ’ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಕಲಾವಿದ ‘ಮುಖ್ಯಮಂತ್ರಿ’ ಚಂದ್ರು, ‘1985ರ ಚುನಾವಣೆಯಲ್ಲಿ ಗೌರಿಬಿದನೂರು ಕ್ಷೇತ್ರಕ್ಕೆ ಸೀತಾರಾಮ್ ಸೇರಿ ಐವರ ಮಧ್ಯೆ ಟಿಕೆಟ್‌ಗೆ ಪೈಪೋಟಿ ಇತ್ತು. ಆ ಚುನಾವಣೆಯಲ್ಲಿ ಜಯಿಸುವ ಮೂಲಕ ನಾನು ಅನಿರೀಕ್ಷಿತ ರಾಜಕಾರಣಿಯಾದೆ’ ಎಂದು ಸ್ಮರಿಸಿದರು.

ಕೃತಿ ಬಗ್ಗೆ ಮಾತನಾಡಿದ ಕನ್ನಡಪ್ರಭದ ಪುರವಣಿ ವಿಭಾಗದ ಮುಖ್ಯಸ್ಥ ಜೋಗಿ (ಗಿರೀಶ್ ರಾವ್ ಹತ್ವಾರ್), ‘ಈ ಪುಸ್ತಕ ನೆನಪುಗಳ ಮೆರವಣಿಗೆಯಾಗಿದೆ. ಸೀತಾರಾಮ್ ಅವರ ಕಥೆ ಕಾಲದ ಕಥೆಯಾಗಿದೆ’ ಎಂದು ಹೇಳಿದರು.

ಪುಸ್ತಕ ಪರಿಚಯ

- ‘ನೆನಪಿನ ಪುಟಗಳು’
- ಲೇಖಕ: ಟಿ.ಎನ್. ಸೀತಾರಾಮ್
- ಪುಟಗಳು: 392, •ಬೆಲೆ: ₹ 550
- ಪ್ರಕಾಶನ: ಸಾವಣ್ಣ ಪ್ರಕಾಶನ

‘12ಕ್ಕೆ ಬೆಳಗಾವಿ ಚಲೋ’

ಬೆಂಗಳೂರು: ‘ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸಲು ದುಡಿಯುತ್ತಿರುವ ಶಿಕ್ಷಕರ ಬದುಕಿನ ಭದ್ರತೆಗೆ ಆಗ್ರಹಿಸಿ ಇದೇ 12ರಂದು ಬೆಳಗಾವಿ ಸುವರ್ಣ ವಿಧಾನಸೌಧದ ಎದುರು ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ತಿಳಿಸಿದ್ದಾರೆ.

ರಾಜ್ಯ ಅನುದಾನರಹಿತ ಶಾಲಾ ಕಾಲೇಜು ಆಡಳಿತ ಮಂಡಳಿ, ಹಾಗೂ ನೌಕರರ ಸಂಘಟನೆ ಪ್ರತಿಭಟನೆಗೆ ಕೈಜೋಡಿಸಲಿದೆ.

‘ಹಲವು ರಾಜ್ಯಗಳಲ್ಲಿ ಅನುದಾನ ಬಯಸುವ ಸ್ಥಳೀಯ ಭಾಷಾ ಮಾಧ್ಯಮ ಶಾಲೆಗಳಿಗೆ ತಕ್ಷಣ ಅನುದಾನ ನೀಡಲು ಆಯಾ ಸರ್ಕಾರಗಳು ಮುಂದಾಗುತ್ತವೆ. ಆಯಾ ರಾಜ್ಯದ ಭಾಷಾ ರಕ್ಷಣೆ ಪ್ರಮುಖವಾಗಿ ಪರಿಗಣಿಸುವ ಸಂದರ್ಭದಲ್ಲಿ ನಮ್ಮ ರಾಜ್ಯ ಕನ್ನಡ ಶಾಲೆಗಳನ್ನು ಮುಚ್ಚಿ ಇಂಗ್ಲಿಷ್ ಗೆ ಪ್ರಾಧಾನ್ಯತೆ ಕೊಡುತ್ತಿರುವುದು ದುರಂತವೇ ಸರಿ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

LOAN AVAILABLE
Against mortgage of immovable property
RATE OF INTEREST 10% to 12%
Long Term & Easy Instalment Facilities.
SYNDICATE FINANCE
428, Rawal Bldg. No. 1, 1st Floor
Lamington Road, Mumbai-400 004
Ph: (022) 3565 7754 / 2386 3781
(022) 4012 9088 / 2388 0634
Contact : 11 am to 5 pm
E-mail : info@syndicatefinance.in | www.syndicatefinance.in

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಯಶಸ್ಸಿನತ್ತ ವಿಶ್ವಾಸಾರ್ಹ ಮೊದಲ ಹೆಜ್ಜೆ
ಅಖಿಲ ಭಾರತ ಮಟ್ಟದಲ್ಲಿ UPSC, KPSC, PSI, Banking, Railways, NABARD ಮುಂತಾದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿರುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ, ಪ್ರಜಾವಾಣಿ ವಿಶ್ವಾಸಾರ್ಹ ಮಾಹಿತಿ ಮೂಲದಿಂದ ಸ್ಪರ್ಧಾವಾಣಿ ಮಾಸಿಕವನ್ನು ಹೊರತರುತ್ತಿದೆ.
ಏನಿರಲಿದೆ:
ಪ್ರತಿ ತಿಂಗಳೂ ಯುಪಿಎಸ್‌ಸಿ ಪಾಸು ಮಾಡಿರುವ ಗಣ್ಯರ ಸಂದರ್ಶನ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಮಾದರಿ ಪ್ರಶ್ನೋತ್ತರಗಳು.
ಬಹು ಆಯ್ಕೆಯ ಪ್ರಶ್ನೋತ್ತರಗಳು, ಪ್ರಬಂಧ ಮಾದರಿಯ ಪ್ರಚಲಿತ ವಿದ್ಯಮಾನಗಳು.
ಸಂಪನ್ಮೂಲ: ಅತ್ಯಂತ ವಿಶ್ವಾಸಾರ್ಹ ಮಾಹಿತಿಮೂಲದಿಂದ ಸಂಪನ್ಮೂಲ ವ್ಯಕ್ತಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಬರುವ ಪ್ರಶ್ನೆ ಮತ್ತು ಮಾದರಿ ಉತ್ತರಗಳನ್ನು ಸಿದ್ಧಪಡಿಸುವರು
ಆರ್ಡರ್ ಮಾಡಲು ನಿಮ್ಮ ಹತ್ತಿರದ ಪುಸ್ತಕದ ಅಂಗಡಿ/ಪತ್ರಿಕಾ ವಿತರಕರನ್ನು ಸಂಪರ್ಕಿಸಿ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128

UPCOMING PARISHRAMA PU COLLEGE
WITH INTEGRATED NEET, JEE MAINS & KCET TRAINING
Presents
ಪ್ರಜಾವಾಣಿ QUIZ CHAMPIONSHIP
Powered by BHIMA GOLD • DIAMONDS • SILVER • PLATINUM SINCE 1925
ಬೆಂಗಳೂರಿನ ವಿದ್ಯಾರ್ಥಿಗಳೇ, ಸ್ಪರ್ಧೆಗೆ ಸಿದ್ಧರಾಗಿ!
ಪ್ರಜಾವಾಣಿಯು ಅತ್ಯುತ್ಸಾಹದಿಂದ ನಿಮ್ಮ ನಗರಕ್ಕೆ ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ಗೆ ಕರೆಯನ್ನು ನೀಡುತ್ತಲಿದೆ.
ಬೆಂಗಳೂರಿನ 8 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳೇ ಇದು ನಿಮ್ಮ ಸಮಯ.
ನಿಮ್ಮ ವಲಯದ ಅತ್ಯುತ್ತಮ ಪ್ರತಿಭೆಗಳೊಂದಿಗೆ ಸ್ಪರ್ಧಿಸಿ ನಗದು ಬಹುಮಾನವನ್ನು ಗೆಲ್ಲುವುದರ ಜೊತೆಗೆ ಗ್ರ್ಯಾಂಡ್ ಫಿನಾಲೆಗೆ ಆಯ್ಕೆಯಾಗಿ ಅತ್ಯಾಕರ್ಷಕ ಬಹುಮಾನಗಳನ್ನು ನಿಮ್ಮದಾಗಿಸಿಕೊಳ್ಳಿ.

ಬೆಂಗಳೂರು ವಲಯದ ಸುತ್ತಿನ ವಿವರಗಳು
ದಿನಾಂಕ: 16.12.2023
ಸ್ಥಳ: ವಿವೇಕ ಸಭಾಂಗಣ (ಯುವಕ ಸಂಘ) ಯುವಪಥ, #4, 31ನೇ ಅಡ್ಡ ರಸ್ತೆ, 4ನೇ T ಬ್ಲಾಕ್ ಪೂರ್ವ, 4ನೇ ಬ್ಲಾಕ್, ಜಯನಗರ, ಬೆಂಗಳೂರು, ಕರ್ನಾಟಕ 560011
ಸಮಯ: ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ
ತಕ್ಷಣವೇ ನೋಂದಾಯಿಸಿಕೊಳ್ಳಿ!
QR ಕೋಡನ್ನು ಸ್ಕ್ಯಾನ್ ಮಾಡಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಅಥವಾ www.Prajavani.netಗೆ ಭೇಟಿ ಕೊಡಿ ಇಲ್ಲವೇ, 7338018541 ಈ ನಂಬರ್‌ಗೆ ಸಂಪರ್ಕಿಸಿ.
ಪ್ರವೇಶ ಉಚಿತ
Associate Sponsors: ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ (ಸ್ಥಾಪನೆ : 1907), Dukes Waffy
TV Partner: asianet ಸುವರ್ಣ ನ್ಯೂಸ್
Knowledge Partner: QURIOSITY Knowledge Solutions

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ಕೆಐಎಡಿಬಿ
(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)
ವಾಣಿಜ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಇ-ಹರಾಜು*
ಸ್ಥಳ :

ವಲಯ	ಜಿಲ್ಲೆ	ಕೈಗಾರಿಕಾ ಪ್ರದೇಶ	ಮೊಬೈಲ್ ನಂ.	ಇ-ಮೇಲ್	ಬಿಡ್ಡರ್ ನೋಂದಣಿ ಪ್ರಾರಂಭ ದಿನಾಂಕ	ಬಿಡ್ಡರ್ ನೋಂದಣಿ ಅಂತಿಮ ದಿನಾಂಕ	ನೇರ ಇ-ಹರಾಜು ದಿನಾಂಕ
ವಲಯ-1, ಬೆಂಗಳೂರು	ಬೆಂಗಳೂರು ಗ್ರಾಮಾಂತರ	ಸೋಂಪುರ 1ನೇ ಮತ್ತು 2ನೇ ಹಂತ	+91-6366252875	do1 @kiadb.in	18ನೇ ಡಿಸೆಂಬರ್ 2023	16ನೇ ಜನವರಿ 2024	19ನೇ ಮತ್ತು 20ನೇ ಜನವರಿ 2024
		ಅವ್ವೇರಹಳ್ಳಿ (ದೊಬಸ್‌ಪೇಟೆ 4ನೇ ಹಂತ)					
	ರಾಮನಗರ	ಹಾರೋಹಳ್ಳಿ 3ನೇ ಹಂತ					
		ಹಾರೋಹಳ್ಳಿ 3ನೇ ಹಂತ (ಮಹಿಳಾ ಉದ್ಯಾನ)					
		ಹಾರೋಹಳ್ಳಿ 4ನೇ ಹಂತ					
ವಲಯ-2, ಬೆಂಗಳೂರು	ಚಿಕ್ಕಬಳ್ಳಾಪುರ	ಗೌರಿಬಿದನೂರು 2ನೇ ಹಂತ	+91-9449425015	do2 @kiadb.in			
		ಮಾಸ್ತೇನಹಳ್ಳಿ 1ನೇ ಹಂತ					
		ಮಾಸ್ತೇನಹಳ್ಳಿ 2ನೇ ಹಂತ					
	ಕೋಲಾರ	ಜಕ್ಕಸಂದ್ರ					
		ವೇಮಗಲ್					
ವಲಯ-3, ಬೆಂಗಳೂರು	ಬೆಂಗಳೂರು ಗ್ರಾಮಾಂತರ	ಓಬದೇನಹಳ್ಳಿ	+91-9844549379	do3 @kiadb.in			
ತುಮಕೂರು	ತುಮಕೂರು	ವಸಂತನರಸಾಪುರ 2ನೇ ಹಂತ	+91-9538746961	dotumakuru @kiadb.in	20ನೇ ಡಿಸೆಂಬರ್ 2023	17ನೇ ಜನವರಿ 2024	22ನೇ ಮತ್ತು 23ನೇ ಜನವರಿ 2024
		ವಸಂತನರಸಾಪುರ 3ನೇ ಹಂತ					
		ವಸಂತನರಸಾಪುರ 3ನೇ ಹಂತ (ವಸತಿ ಬಡಾವಣೆ)					
		ತುಮಕೂರು ಮೆಷಿನ್ ಟೂಲ್ ಪಾರ್ಕ್ (ಟಿಎಂಟಿಪಿ)					
		ಸಿರಾ					
ಮೈಸೂರು	ಮೈಸೂರು	ಕಡಕೋಳ	+91-9845033499	domysuru@ kiadb.in			
		ಅಡಕನಹಳ್ಳಿ					
		ತಾಂಡ್ಯ 2ನೇ ಹಂತ					
	ಚಾಮರಾಜನಗರ	ಬದನಗುಪ್ಪೆ ಕೆಲ್ಲಂಬಳ್ಳಿ					
ದಾವಣಗೆರೆ	ದಾವಣಗೆರೆ	ಸಾರಥಿ ಕುರುಬರಹಳ್ಳಿ ಹಂತ 1	+91-9448656529	dodavangere @kiadb.in			
	ಶಿವಮೊಗ್ಗ	ಸಂದಾ					
		ದೇವಕಾತಿಕೊಪ್ಪ ಸಾಮಾನ್ಯ					
ಮಂಗಳೂರು	ದಕ್ಷಿಣ ಕನ್ನಡ	EPIP IA ಗಂಜಿಮಟ್	+91-9880764840	domangaluru @kiadb.in			
	ಉಡುಪಿ	ಬೆಳಪು, ಕಾಪು TQ					
		ಮಿಯಾರ್, ಕಾರ್ಕಳ TQ					
ಧಾರವಾಡ	ಧಾರವಾಡ	ಕೋಟೂರು-ಬೇಲೂರು	+91-9845806948	dodharwad @kiadb.in	22ನೇ ಡಿಸೆಂಬರ್ 2023	19ನೇ ಜನವರಿ 2024	24ನೇ ಮತ್ತು 25ನೇ ಜನವರಿ 2024
		ಮುಮ್ಮಿಗಟ್ಟಿ					
		ಗಾಮನಗಟ್ಟಿ					
ಕಲಬುರಗಿ	ಕಲಬುರಗಿ	ನಂದೂರು ಕೆಸರಟಗಿ 2ನೇ ಹಂತ	+91-9448104599	dokalaburagi @kiadb.in			
	ಯಾದಗಿರಿ	ಕಡೇಚೂರು					
ಬೆಳಗಾವಿ	ಬೆಳಗಾವಿ	ಕಣಗಾಲ	+91-9448860126	dobelagavi@ kiadb.in			
		ಕಿತ್ತೂರು					
	ವಿಜಯಪುರ	ಮುಳವಾಡ					
	ಬಾಗಲಕೋಟೆ	ಬಲ್ಕುಂಡಿ					
ಬಳ್ಳಾರಿ	ರಾಯಚೂರು	ಮಾನ್ವಿ	+91-9480397362	doballari@ kiadb.in			

* ಇ-ಹರಾಜಿಗಾಗಿ ವಾಣಿಜ್ಯ ಪ್ಲಾಟ್‌ಗಳ ಯಾವುದೇ ಸ್ಥಳವನ್ನು ಬದಲಾಹಿಸುವ ಹಕ್ಕನ್ನು ಕೆಐಡಿಬಿ ಕಾಯ್ದಿರಿಸಿದೆ ಮತ್ತು ಕೆಐಡಿಬಿ ಮಂಡಳಿಯು ಪ್ರಸ್ತುತ ಚಾಲ್ತಿಯಲ್ಲಿರುವ ಹಂಚಿಕೆಯ ಷರತ್ತು ಮತ್ತು ನಿಯಮಗಳ ಪ್ರಕಾರ ಪ್ಲಾಟ್‌ಗಳ ಹಂಚಿಕೆ ಮಾಡಲಾಗುತ್ತದೆ.
- ಉತ್ತಮ ಸಂಪರ್ಕದೊಂದಿಗೆ ಪ್ರಮುಖ ಆರ್ಥಿಕ ಕೇಂದ್ರಗಳಿಗೆ ಹತ್ತಿರದಲ್ಲಿದೆ.
- ಪ್ರಮುಖ ನಗರ ಪ್ರದೇಶಗಳಿಗೆ ಹತ್ತಿರವಿದ್ದು ಉತ್ತಮ ಸಂಪರ್ಕ ಹಾಗೂ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.
ಇ-ಹರಾಜಿಗಾಗಿ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: www.kiadb.in
ದಿನಾಂಕ : 18.12.2023 ರಿಂದ ಭೇಟಿ ನೀಡಿ.
ಇ-ಹರಾಜಿನಲ್ಲಿ ಭಾಗವಹಿಸಲು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.in ಗೆ
ದಿನಾಂಕ : 18.12.2023 ರಿಂದ ಭೇಟಿ ನೀಡಿ.
ಕೆಐಎಡಿಬಿ ಪ್ರ.ಕ : # 49, ಈಸ್ಟ್ ವಿಂಗ್, 4ನೇ ಮತ್ತು 5 ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001.
ದೂರವಾಣಿ ಸಂಖ್ಯೆ, 080-22265383, ವೆಬ್‌ಸೈಟ್: www.kiadb.in

ಶಿಕ್ಷಣ

ಕೋಶ ಓದಿ, ದೇಶ ಸುತ್ತಿದಾಗಲೇ ಅರಿವು ಅನುಭವ ಸಿರಿ ಹೆಚ್ಚುವುದು

ಶೈಕ್ಷಣಿಕ ಪ್ರವಾಸ

ಪಠ್ಯದಾಚೆಗಿನ ಅನುಭವಾತ್ಮಕ ಕಲಿಕೆ

ಆರ್.ಬಿ. ಗುರುಬಸವರಾಜ

ಡಿಸೆಂಬರ್ ತಿಂಗಳು ಬಂತೆಂದರೆ ಸಾಕು, ಬಹುತೇಕ ಶಾಲೆಗಳ ಮಕ್ಕಳು ತಮ್ಮ ಕನಸಿಗೆ ಬಣ್ಣಬಣ್ಣದ ರೆಕ್ಕೆ ಕಟ್ಟಿಕೊಂಡು ಕಲ್ಪನಾಲೋಕದಲ್ಲಿ ತೇಲುತ್ತಾರೆ. ಕಲಿಕಾರ್ಥಿಗಳಲ್ಲಿ ಸ್ಫೂರ್ತಿ ತುಂಬುವ ಮಹತ್ತರ ಕಾರ್ಯಕ್ರಮವೇ ಶೈಕ್ಷಣಿಕ ಪ್ರವಾಸ.

ಕಲಿಕೆಯ ಒಂದು ಭಾಗವಾದ ಶೈಕ್ಷಣಿಕ ಪ್ರವಾಸವು ಅನುಭವ ಜನ್ಯ ಕಲಿಕೆಯಾಗಿದೆ. ತಾತ್ವಿಕ ಜ್ಞಾನವನ್ನು ಒರೆಗೆ ಹಚ್ಚಿ ವೀಕ್ಷಿಸುವ ಮತ್ತು ಸಾದೃಶ್ಯಗಳೊಂದಿಗೆ ಹೋಲಿಕೆ ಮಾಡಿ ಕಲಿಯುವ ಚಟುವಟಿಕೆಯಾಗಿದೆ. ಶೈಕ್ಷಣಿಕ ಪ್ರವಾಸವು ಮಕ್ಕಳಲ್ಲಿ ಪರಿಸರ ಪ್ರೇಮ, ಇತಿಹಾಸ ಮತ್ತು ವಾಸ್ತುಶಿಲ್ಪಗಳ ಅಧ್ಯಯನ, ಅಭಿವೃದ್ಧಿಗೆ ಪೂರಕವಾದ ಉದ್ಯಮಗಳ ವೀಕ್ಷಣೆ, ವೈವಿಧ್ಯಮಯ ಜನಸಮುದಾಯ ಮತ್ತು ವಿವಿಧ ಸಂಸ್ಕೃತಿಗಳ ಪರಿಚಯ, ಪಾರಂಪರಿಕ ವೃತ್ತಿಗಳ ಪರಿಚಯ, ವಿವಿಧ ಪ್ರಾಣಿ ಪಕ್ಷಿ ವೀಕ್ಷಣೆ ಮೂಲಕ ಜ್ಞಾನ ವಿಕಾಸಕ್ಕೆ ಪೂರಕವಾಗಿದೆ.

ಶೈಕ್ಷಣಿಕ ಪ್ರವಾಸಗಳು ಮಕ್ಕಳಲ್ಲಿ ಒಗ್ಗಟ್ಟು, ಸಹಬಾಳ್ವೆ, ಪರಸ್ಪರ ಸಹಕಾರ, ಹಂಚಿ ತಿನ್ನುವ ಮನೋಭಾವ, ವಯಸ್ಸಿಗೆ ತಕ್ಕ ಜವಾಬ್ದಾರಿ ನಿರ್ವಹಣೆ, ಇತರರಿಗೆ ಗೌರವ ನೀಡುವುದು, ವಿವಿಧ ಸಂಸ್ಕೃತಿಗಳ ಮೆಚ್ಚುಗೆ ಹೀಗೆ ಹಲವು ಬಗೆಯ ಸೌಜನ್ಯಯುತ ನಡವಳಿಕೆಗಳನ್ನು ಮಕ್ಕಳು ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಪಠ್ಯದಲ್ಲಿನ ಪರಿಕಲ್ಪನೆಗಳನ್ನು ಕೇಳಿ ತಿಳಿಯುವುದಕ್ಕಿಂತ ನೋಡಿ ತಿಳಿದಾಗ ಹೆಚ್ಚು ಸ್ಪಷ್ಟವಾಗಿ ನೆನಪಿನಲ್ಲಿ ಉಳಿಯುತ್ತದೆ.

ಪ್ರವಾಸ ಪ್ರಯಾಸವಾಗದಿರಲಿ

- **ಸ್ಥಳ ಆಯ್ಕೆ :** ಪ್ರವಾಸಕ್ಕೆ ಆಯ್ಕೆ ಮಾಡಿಕೊಳ್ಳುವ ಸ್ಥಳ ಮಕ್ಕಳ ಶೈಕ್ಷಣಿಕ ಮತ್ತು ಬೌದ್ಧಿಕ ಮಟ್ಟಕ್ಕೆ ಹೊಂದುವಂತಿರಲಿ. ಕೇವಲ ಪ್ರೇಕ್ಷಣೀಯ ಅಥವಾ ತೀರ್ಥಯಾತ್ರಾ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳದೇ, ನಿಸರ್ಗ ರಮಣೀಯ ಸ್ಥಳಗಳು, ಕಿರು ಕೈಗಾರಿಕಾ ಪ್ರದೇಶಗಳು, ಸ್ಥಳೀಯ ಐ.ಟಿ.ಐ ಅಥವಾ ಜಿ.ಟಿ.ಟಿ.ಸಿ ಕಾಲೇಜುಗಳು, ಐತಿಹಾಸಿಕ ಸ್ಥಳಗಳು, ಸ್ಥಳೀಯ ಪಕ್ಷಿ ಸಂರಕ್ಷಿತ ತಾಣಗಳು, ಅರಣ್ಯ ಇಲಾಖೆಯ ಸಂರಕ್ಷಿತ ಕಿರು ಅರಣ್ಯಗಳು, ನಿಸರ್ಗಧಾಮಗಳು, ಅಂಚೆ ಕಛೇರಿ, ಬ್ಯಾಂಕ್, ವಿಶೇಷ ವೃತ್ತಿಗಾರರ ಕಾರ್ಯಕ್ಷೇತ್ರಗಳು ಇರಲಿ.
- **ಸ್ಪಷ್ಟ ಮಾಹಿತಿ :** ಪ್ರವಾಸದ ಸ್ಥಳಗಳ ಕುರಿತು ಮಕ್ಕಳಿಗೆ ಸ್ಪಷ್ಟ ಮಾಹಿತಿ ನೀಡಬೇಕು. ಇದನ್ನು ಶಾಲಾ ಶಿಕ್ಷಕರೇ ನೀಡದರೆ ಉತ್ತಮ. ಸ್ಥಳೀಯ ಗೈಡ್‌ಗಳನ್ನು ಬಳಸಿಕೊಂಡು ಸ್ಥಳಗಳ ಐತಿಹಾಸಿಕ, ಸಾಂಸ್ಕೃತಿಕ, ಪರಿಸರ ಮತ್ತು ರಕ್ಷಣೆಯ ಮಹತ್ವ ತಿಳಿಸುವ ಉದ್ದೇಶ ಸಾರ್ಥಕಗೊಳ್ಳುತ್ತದೆ.
- **ವಸತಿ ಮತ್ತು ಊಟ :** ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡ ಸ್ಥಳಗಳಲ್ಲಿ ವಸತಿ ವ್ಯವಸ್ಥೆ ಬಗ್ಗೆ ಸಾಕಷ್ಟು ಮುಂಚಿತವಾಗಿ ಮಾಹಿತಿ ತಿಳಿದುಕೊಂಡು ಬುಕ್ಕಿಂಗ್ ಮಾಡಿಕೊಳ್ಳುವುದು ಉಚಿತ. ಇಲ್ಲಿದ್ದರೆ ವಸತಿಗಾಗಿ ಪರದಾಡಬೇಕಾಗುತ್ತದೆ. ಜೊತೆಗೆ ಪ್ರವಾಸದ ಸ್ಥಳಗಳಲ್ಲಿ ಊಟದ ವ್ಯವಸ್ಥೆಯ ಬಗ್ಗೆಯೂ ಪೂರ್ವಯೋಜನೆ ಅಗತ್ಯ. ಕೆಲವು ಪ್ರದೇಶದ ಸ್ಥಳೀಯ ಊಟ ಕೆಲವು ಭಾಗದ ಮಕ್ಕಳಿಗೆ ರುಚಿಸುವುದಿಲ್ಲ. ಅದಕ್ಕಾಗಿ ಸೂಕ್ತ ಸಿದ್ದತೆ ಮಾಡಿಕೊಳ್ಳುವುದು ಅಗತ್ಯ ಎನಿಸುತ್ತದೆ.
- **ಸುರಕ್ಷೆ :** ಪ್ರವಾಸದ ಸಮಯದಲ್ಲಿ ಮಕ್ಕಳ ಸುರಕ್ಷೆ ಬಹಳ ಮುಖ್ಯ. ಸಾಧ್ಯವಾದಷ್ಟೂ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸುವುದು ಒಳಿತು. ಇಲಾಖೆಯು ನಿಗದಿಪಡಿಸಿದ ಸಾರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡು ಸುರಕ್ಷಿತ ಪ್ರವಾಸ ಕೈಗೊಳ್ಳಬೇಕು. ನೀರಿನ ಮೂಲಗಳು ಮತ್ತು ಚಾರಣಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ವಹಿಸಲೇಬೇಕು. ಮಕ್ಕಳು ಒಂಟಿಯಾಗಿರುವುದನ್ನು ತಪ್ಪಿಸಲು ಗುಂಪುಗಳ ರಚನೆ ಅಗತ್ಯ.
- **ಖರ್ಚು-ವೆಚ್ಚ :** ಶೈಕ್ಷಣಿಕ ಪ್ರವಾಸವು ಪಾಲಕರಿಗೆ ಹೊರೆಯಾಗದೇ ಅವರ ಆರ್ಥಿಕ ಮಿತಿಗನುಗುಣವಾಗಿರಲಿ. ಕಡಿಮೆ ಖರ್ಚಿನಲ್ಲಿ ಉತ್ತಮ ಪ್ರವಾಸ ಮಾಡಲು ಅನುಕೂಲವಾಗುವಂತೆ ಖರ್ಚು ವೆಚ್ಚಗಳನ್ನು ಹೊಂದಿಸಿಕೊಳ್ಳುವುದು ಉಚಿತ. ಪ್ರವಾಸದ ನಂತರ ಖರ್ಚು ವೆಚ್ಚಗಳ ಮಾಹಿತಿಯನ್ನು ಪಾಲಕರಿಗೆ ಅಥವಾ ಶಾಲಾ ಮಂಡಳಿಗೆ ಹಂಚಿಕೊಳ್ಳುವಂತಾಗಬೇಕು. ಇದು ಪಾರದರ್ಶಕ ಪ್ರವಾಸದ ಪ್ರತೀಕ.
- **ದಾಖಲೀಕರಣ :** ಇದು ತುಂಬಾ ಮಹತ್ವದ್ದು. ಪ್ರವಾಸದ ವೇಳೆ ಮಕ್ಕಳು ಸಣ್ಣ ನೋಟ್‌ಬುಕ್‌ನಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ಬರೆದುಕೊಳ್ಳುವಂತೆ ಪ್ರೇರೆಪಿಸಬೇಕು. ಪ್ರವಾಸದ ನಂತರ ಮಕ್ಕಳು ತಾವು ನೋಡಿದ ಸ್ಥಳಗಳ ಕುರಿತ ಅನುಭವಗಳನ್ನು ಅಕ್ಷರಗಳ ಮೂಲಕ ದಾಖಲು ಮಾಡಲು ಉತ್ತೇಜಿಸಿ.ಉತ್ತಮ ದಾಖಲೀಕರಣಕ್ಕೆ ಸೂಕ್ತ ಬಹುಮಾನ ನೀಡುವಂತಾದರೆ ಇನ್ನಷ್ಟು ಸ್ಫೂರ್ತಿ ಪಡೆಯುತ್ತಾರೆ.
- **ಸಂಗ್ರಹ :** ಪ್ರವಾಸದ ಸ್ಥಳಗಳಲ್ಲಿನ ಕಲ್ಲು, ಮಣ್ಣು, ಮರಳು, ಎಲೆಗಳು, ಬೀಜಗಳು, ಧಾನ್ಯಗಳು ಅಥವಾ ವಿಶೇಷ ಎನಿಸಿದ ಇನ್ನಿತರೇ ವಸ್ತುಗಳನ್ನು ಸಂಗ್ರಹಿಸಿ ಪ್ರದರ್ಶಿಸುವ ವ್ಯವಸ್ಥೆ ಮಾಡಿದರೆ ಪ್ರವಾಸಕ್ಕೆ ಬಾರದಿರುವ ಇನ್ನಿತರೇ ಮಕ್ಕಳ ಕಲಿಕೆಗೂ ಅನುಕೂಲವಾಗುತ್ತದೆ.

ನೆನಪಿಟ್ಟುಕೊಳ್ಳುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನಾನು ಎರಡು ವರ್ಷಗಳ ಹಿಂದೆ ಬಿಕಾಂ ಮಾಡಿ, ನಂತರ ಬಿಇಡಿ ಕೋರ್ಸ್‌ನಲ್ಲಿ ಇಂಗ್ಲಿಷ್ ಮತ್ತು ವಾಣಿಜ್ಯ ಅಭ್ಯಾಸ ಮಾಡಿದ್ದು, ಪ್ರೌಢಶಾಲೆಯಲ್ಲಿ ಶಿಕ್ಷಕನಾಗಬೇಕೆಂದುಕೊಂಡಿದ್ದೇನೆ. ಹಾಗೂ, ಈ ಕ್ಷೇತ್ರದ ಇನ್ನಿತರ ಅವಕಾಶಗಳ ಬಗ್ಗೆ ವಿಸ್ತೃತವಾಗಿ ತಿಳಿಸಿ.**

ಬಸವರಾಜ, ಜೆ ಜಾಡಲದಿನ್ನಿ, ದೇವದುರ್ಗ ತಾಲೂಕು.

ಪ್ರೌಢಶಾಲೆಗಳಲ್ಲಿ ನೀವು ಇಂಗ್ಲಿಷ್ ಮತ್ತು ವಾಣಿಜ್ಯ ಸಂಬಂಧಿತ ವಿಷಯಗಳನ್ನು ಭೋಧಿಸಬಹುದು. ಹೆಚ್ಚಿನ ಅವಕಾಶಗಳಿಗಾಗಿ ಎಂಕಾಂ ಮಾಡಿ, ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆಎಸ್‌ಇಟಿ ಅಥವಾ ಎನ್‌ಇಟಿ) ಬರೆದು, ಪಾಸಾದರೆ ಸರ್ಕಾರಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಬಹುದು. ಪಿ.ಎಚ್‌ಡಿ ಮಾಡಿ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಬಹುದು. ಪಿ.ಎಚ್‌ಡಿ ಪದವೀಧರರಿಗೆ ಕೆಎಸ್‌ಇಟಿ/ಎನ್‌ಇಟಿ ಅರ್ಹತಾ ಪರೀಕ್ಷೆಯ ಅವಶ್ಯಕತೆಯಿರುವುದಿಲ್ಲ.

ಭೋಧನಾ ವೃತ್ತಿಯ ಜೊತೆಗೆ ವಿಪುಲವಾದ ಇನ್ನಿತರ ಅವಕಾಶಗಳಿವೆ. ಉದಾಹರಣೆಗೆ, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಆಡಳಿತಾತ್ಮಕ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಪಾಸಾಗಿ ಪಡೆಯಬಹುದು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ನೀಡಬಹುದು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಭೋಧನೆ ಮತ್ತು ಆಡಳಿತ ಸಂಬಂಧಿಸಿದ ಅವಕಾಶಗಳಿವೆ. ಅಭಿರುಚಿ, ಜ್ಞಾನ ಮತ್ತು ಕೌಶಲಗಳನ್ನು ಬೆಳೆಸಿಕೊಂಡು ನಿಮಗೆ ಸೂಕ್ತವೆನಿಸುವ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಿ, ಮುಖ್ಯವಾಗಿ, ಅಲ್ಪಾವಧಿ ಮತ್ತು ದೀರ್ಘಾವಧಿ ಗುರಿಗಳಿಂದ ವೃತ್ತಿ ಯೋಜನೆಯನ್ನು ಕಾರ್ಯಗತಗೊಳಿಸಿ, ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/channel/UCH-uglg9bBlyH5QQbn_Jjlw

- **ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿರುವ ನನಗೆ ನೆನಪಿಟ್ಟುಕೊಳ್ಳಲು ಕಷ್ಟವಾಗುತ್ತಿದೆ. ನೆನಪಿನ ಶಕ್ತಿಯನ್ನು ವೃದ್ಧಿಸಲು ಸಲಹೆ ನೀಡಿ.**

ಸಹನಾ, ಚಾಮರಾಜನಗರ.

ಓದಿದ್ದನ್ನು ಮರೆಯುವುದು ಒಂದು ಗಂಭೀರ ಹಾಗೂ ಸಾಮಾನ್ಯ ಸಮಸ್ಯೆ. ಪರಿಣಾಮಕಾರಿ ಕಾರ್ಯತಂತ್ರಗಳನ್ನು ಓದುವಿಕೆಯಲ್ಲಿ ಅಳವಡಿಸದಿರುವುದರಿಂದ ಓದಿದ ವಿಷಯಗಳು ನಿಮ್ಮ ಅಲ್ಪಾವಧಿ ಸ್ಮರಣೆಯಲ್ಲಿ ಮಾತ್ರ ಇರುತ್ತದೆ. ಪರೀಕ್ಷೆ/ಟೆಸ್ಟ್‌ಗಳಲ್ಲಿ ಓದಿದ ವಿಷಯ ಜ್ಞಾಪಕಕ್ಕೆ ಬರದೆ, ಸಮಸ್ಯೆಯಾಗುತ್ತದೆ. ಓದುವಿಕೆಯ ಕಾರ್ಯತಂತ್ರಗಳಲ್ಲಿ ಓದುವ ಪ್ರಕ್ರಿಯೆಯ ಜೊತೆ ಸಮೀಕ್ಷೆ, ಪ್ರಶ್ನಿಸುವಿಕೆ, ಪುನರುಚ್ಚಾರಣೆ ಮತ್ತು ಪುನರಾವರ್ತನೆ ಇರಬೇಕು. ತರಗತಿಗಳಲ್ಲಿ, ಉಪನ್ಯಾಸದ ಟಿಪ್ಪಣಿಯನ್ನು ಸರಿಯಾದ ಕ್ರಮದಲ್ಲಿ, ಓದುವಿಕೆಗೆ ಪೂರಕವಾಗುವಂತೆ ಬರೆಯಬೇಕು. ಹಾಗೂ, ಮನೆಯಲ್ಲಿ ಓದುವಾಗ ಕಣ್ಣಿಗೂ, ಮನಸ್ಸಿಗೂ ತರಬೇತಿಯ ಅಗತ್ಯವಿರುತ್ತದೆ. ಹೆಚ್ಚಿನ ಶಾಲಾ/ಕಾಲೇಜುಗಳಲ್ಲಿ ಪರಿಣಾಮಕಾರಿ ಓದುವಿಕೆಯ ಈ ಕಾರ್ಯತಂತ್ರಗಳ ಕುರಿತು ತರಬೇತಿ ನೀಡಿರುವುದಿಲ್ಲ. ಪರಿಣಾಮಕಾರಿ ಓದುವಿಕೆಯ ಕಾರ್ಯತಂತ್ರಗಳು ಮತ್ತು ಟಿಪ್ಪಣಿ ಬರೆಯುವ ಕ್ರಮ ಇತ್ಯಾದಿ ವಿಷಯಗಳ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊಗಳನ್ನು ವೀಕ್ಷಿಸಿ: https://www.youtube.com/watch?v=3PzmKRaJHmk, https://www.youtube.com/watch?v=Y2lPeZ6lbeM

- **ನಾನು ಬಿ.ಟೆಕ್ (ಕಂಪ್ಯೂಟರ್ ಸೈನ್ಸ್) ಅಂತಿಮ ವರ್ಷದಲ್ಲಿದ್ದೇನೆ. ಶೈಕ್ಷಣಿಕ ಸಾಲವಿರುವುದರಿಂದ, ಕೆಲಸಕ್ಕೆ ಸೇರಬೇಕೇ ಅಥವಾ ಎಂಟೆಕ್ ಮಾಡುವುದೇ ಎಂಬ ಗೊಂದಲದಲ್ಲಿದ್ದೇನೆ.**

ಹೆಸರು, ಊರು ತಿಳಿಸಿಲ್ಲ.

ಬಿ.ಟೆಕ್ (ಕಂಪ್ಯೂಟರ್ ಸೈನ್ಸ್) ಬೇಡಿಕೆಯಲ್ಲಿರುವ ಕ್ಷೇತ್ರ. ಸಾಮಾನ್ಯವಾಗಿ, ಈ ವಿಭಾಗದ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ನೇಮಕಾತಿಯ ಅವಕಾಶವಿರುತ್ತದೆ. ನೀವು ಕ್ಯಾಂಪಸ್ ನೇಮಕಾತಿಯ ಮೂಲಕ ವೃತ್ತಿಯನ್ನು ಅರಸಬಹುದು. ಹಾಗೂ, ಎಂಟೆಕ್ ಪದವಿಯನ್ನು ಅರೆಕಾಲಿಕ/ವಾರಾಂತ್ಯದ ತರಗತಿಗಳಿಂದ ಮಾಡಬಹುದು. ಲವು ವರ್ಷಗಳ ವೃತ್ತಿಯ ಅನುಭವದ ನಂತರ, ಕಂಪ್ಯೂಟರ್ ಸೈನ್ಸ್‌ನ ವಿಭಾಗಗಳಲ್ಲಿ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಡೇಟಾ ಅನಾಲಿಟಿಕ್ಸ್, ಸೈಬರ್ ಸೆಕ್ಯೂರಿಟಿ, ರೊಬೊಟಿಕ್ಸ್ ಇತ್ಯಾದಿ) ನಿಮ್ಮ ಅಗತ್ಯಕ್ಕೆ ಅನುಗುಣವಾಗಿ, ಪೂರ್ಣಾವಧಿ ಎಂಟೆಕ್ ಮಾಡಬಹುದು. ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ. ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ, ಮುಂದಿನ ಬದುಕಿನ ಬಗ್ಗೆ ರಾಜಿಯಾಗದಿರಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=faQz_iLCWEk

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ರಿಲಾಯನ್ಸ್ ಫೌಂಡೇಷನ್‌ನಿಂದ ನೆರವು

ವಿದ್ಯಾರ್ಥಿ ವೇತನ ಕೈಪಿಡಿ

- **ವಿವರ:** ರಿಲಾಯನ್ಸ್ ಫೌಂಡೇಷನ್ ಡಿಜಿಟಲ್ ಆಗಿ ಯೋಚಿಸುವ ಭಾರತದ ಭವಿಷ್ಯದ ನಾಯಕರನ್ನು ಸಕ್ರಿಯಗೊಳಿಸುವ ಗುರಿಯನ್ನು ಹೊಂದಿದೆ.
- **ಅರ್ಹತೆ:** ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ವಿಜ್ಞಾನ, ಗಣಿತ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಕೆಮಿಕಲ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ರಿನೀವೆಬಲ್ ಆ್ಯಂಡ್ ನ್ಯೂ ಎನರ್ಜಿ, ಮಟೀರಿಯಲ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್, ಲೈಫ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪದವಿಯಲ್ಲಿ ಸಿಜಿಪಿಎಯಲ್ಲಿ 7.5 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು
- **ಆರ್ಥಿಕ ನೆರವು:** ಪದವಿಯ ಅವಧಿಯಲ್ಲಿ ₹ 6,00,000ದ ವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 17-12-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/RFS9

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

17) ಭಾರತ ಮತ್ತು ಅಫ್ಘಾನಸ್ಥಾನದ ನಡುವೆ ಎಳೆದಿರುವ ರೇಖೆ ....

ಉತ್ತರ:– 'ಡ್ಯೂರ್‍ಯಾಂಡ್' (Durand line) ರೇಖೆ

18) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ....

ಉತ್ತರ:– ಪರ್ಯಾಯ ಪ್ರಸ್ಥಭೂಮಿ

19) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಸುಮಾರು ....

ಉತ್ತರ:– 16 ಲಕ್ಷ ಚ.ಕಿ.ಮೀ.

20) ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ..............

ಉತ್ತರ:– ರಾಧಾನಾಥ್ ಸಿಕ್ದರ್

21) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ....

ಉತ್ತರ:– ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

22) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು .... ದಲ್ಲಿ ಸಂಧಿಸುತ್ತವೆ

ಉತ್ತರ:– ನೀಲಗಿರಿ ಬೆಟ್ಟ

23) ಮೌಂಟ್ ಎವೆರೆಸ್ಟ್‌ನ ಎತ್ತರ ....

ಉತ್ತರ:– 8848 ಮೀ

24) ಭಾರತದಲ್ಲಿರುವ ಅತಿಎತ್ತರವಾದ ಶಿಖರ ....

ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ K2

25) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ....

ಉತ್ತರ:– 8,611ಮೀ.

****

ಅಧ್ಯಾಯ–11 ಭಾರತದ ಋತುಗಳು

ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಈ ಮಾದರಿಯ ವಾಯುಗುಣದಲ್ಲಿ ಮಾರುತಗಳು ವರ್ಷದ ವಿವಿಧ ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ವರ್ಷದ ಅರ್ಧಭಾಗ ನೈಋತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುವ ಮಾನ್ಸೂನ್ ಮಾರುತಗಳು ಉಳಿದ ಅವಧಿಯಲ್ಲಿ ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುತ್ತವೆ. ಜೊತೆಗೆ ಭಾರತವು ಭೌಗೋಳಿಕವಾಗಿ ಉಷ್ಣವಲಯದ ಹಾಗೂ ಸಮಶಿತೋಷ್ಣ ವಲಯಗಳೆರಡರಲ್ಲಿಯೂ ಹಂಚಿಕೆಯಾಗಿದೆ. ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಸಾಗರಗಳಿಂದ ಇರುವ ದೂರ, ಮಾರುತಗಳ ದಿಕ್ಕು, ಪರ್ವತ ಸರಣಿಗಳು ಹಬ್ಬಿರುವ ರೀತಿ, ಸಾಗರ ಪ್ರವಾಹಗಳು ಮುಂತಾದವು ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ಪ್ರಶ್ನೋತ್ತರ

1) ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ಎಷ್ಟು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ.?

ಉತ್ತರ:– ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ನಾಲ್ಕು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ

1) **ಬೇಸಿಗೆ ಕಾಲ:** ಮಾರ್ಚ್‌ನಿಂದ–ಮೇವರೆಗೆ

2) **ನೈಋತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಮಳೆಗಾಲ:** ಜೂನ್‌ನಿಂದ – ಸೆಪ್ಟಂಬರ್‌ವರೆಗೆ

3) **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ:** ಅಕ್ಟೋಬರ್‌ನಿಂದ – ನವಂಬರ್‌ವರೆಗೆ

4) **ಚಳಿಗಾಲ:** ಡಿಸೆಂಬರ್‌ನಿಂದ – ಫೆಬ್ರವರಿವರೆಗೆ

2) ಭಾರತದಲ್ಲಿ ಬೇಸಿಗೆ ಕಾಲ ಯಾವಾಗ ಆರಂಭವಾಗುತ್ತದೆ?

ಉತ್ತರ:– ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ.

3) ಭಾರತದಲ್ಲಿ ಎಲ್ಲಿ ಅತಿಹೆಚ್ಚು ಉಷ್ಣಾಂಶ ದಾಖಲಾಗುತ್ತದೆ?

ಉತ್ತರ: ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ. ಇದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ

4) ದಕ್ಷಿಣ ಭಾರತವು ಬೇಸಿಗೆಯಲ್ಲಿ ಸಾಧಾರಣ ಉಷ್ಣಾಂಶವನ್ನು ಹೊಂದಿದೆ ಯಾಕೆ?

ಉತ್ತರ:– ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವ ಕಾರಣ ಉಷ್ಣಾಂಶ ಸಾಧಾರಣವಾಗಿರುತ್ತದೆ

5) ಭಾರತದಲ್ಲಿ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಯಾಕೆ? ಯಾವ ಯಾವ ಪ್ರದೇಶದಲ್ಲಿ ಈ ಮಳೆಯನ್ನು ಯಾವ ಯಾವ ಹೆಸರಿನಲ್ಲಿ ಕರೆಯುತ್ತಾರೆ?

ಉತ್ತರ:– ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನ ಹೊಯ್ಲು' ಎಂದು ಕರೆಯುತ್ತಾರೆ.

6) ಭಾರತದ ·ಬೇಸಿಗೆ ಕಾಲದ ಬಗ್ಗೆ ವಿಸ್ತಾರವಾಗಿ ಬರೆಯಿರಿ

ಉತ್ತರ: ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ.

ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶವನ್ನು ದಾಖಲಿಸಿದ್ದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ. ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿದ್ದು ಇದರ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ. ಅದು ಕೇವಲ 32^0 ಸೆ.ದಿಂದ 35^0 ಸೆ. ಗಳಷ್ಟು ಕಂಡು ಬರುತ್ತದೆ. ಈ ಅವಧಿಯಲ್ಲಿ ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು ಸಾಕಷ್ಟು ತಂಪಾಗಿರುತ್ತವೆ. ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನಹೊಯ್ಲು' ಎಂದು ಕರೆಯುತ್ತಾರೆ.

ಬೇಸಿಗೆಯಲ್ಲಿ ದೇಶವು ವಾರ್ಷಿಕ ಮಳೆಯ ಶೇ. 10ರಷ್ಟನ್ನು ಮಾತ್ರ ಪಡೆಯುತ್ತದೆ

7) ಭಾರತದಲ್ಲಿ ಬಹುತೇಕ ಮಳೆಯು ಯಾವ ಮಾರುತಗಳಿಂದ ಉಂಟಾಗುತ್ತದೆ?

ಉತ್ತರ:– ನೈಋತ್ಯ ಮಾನ್ಸೂನ್ ಮಾರುತಗಳಿಂದ

8) ನೈಋತ್ಯ ಮಾನ್ಸೂನ್ ಮಾರುತಗಳಿಂದ ಭಾರತದ ಒಟ್ಟು ಮಳೆಯಲ್ಲಿ ಶೇಕಡ ಎಷ್ಟು ಬಿಳುತ್ತದೆ?

ಉತ್ತರ:– ಶೇ. 75

9) ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳನ್ನು ತಿಳಿಸಿ

ಉತ್ತರ:– ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳೆಂದರೆ:– ಪಶ್ಚಿಮ ಘಟ್ಟ ಪ್ರದೇಶಗಳಾದ ಕರಾವಳಿ ಕರ್ನಾಟಕ, ಮಹಾರಾಷ್ಟ್ರ, ಕೇರಳ ಹಾಗೂ ಈಶಾನ್ಯ ಭಾರತದ ಪ್ರದೇಶದಲ್ಲಿ ಬರುವ ಆಸ್ಸಾಂ, ಮೇಘಾಲಯ

10) ಮಳೆಗಾಲ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ನೈಋತ್ಯ ಮಾನ್ಸೂನ್ ಎಂದರೆ ಮಳೆಗಾಲವೆಂದರ್ಥ. ಇವುಗಳನ್ನು ಮುಂಗಾರು ಮಳೆಗಾಲದ ಮಾರುತಗಳೆಂದು ಕರೆಯುತ್ತಾರೆ. ಇವು ಜಲಾಂಶಪೂರಿತ ಮಾರುತಗಳಾಗಿದ್ದು ಭಾರತದ ಹೆಚ್ಚು ಭಾಗದಲ್ಲಿ ಮಳೆ ಸುರಿಸುತ್ತವೆ. ಇದು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಕಂಡುಬರುವುದು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CHEMISTRY

CHEMICAL KINETICS

21. What is threshold energy?

Ans:- Threshold energy of a reaction is the minimum energy that the reacting molecules should possess in order to form products upon collision.

22. The inorganic reactions are generally faster than the organic reactions, why?

Soln:- Generally, the inorganic reactions are ionic reactions while the organic reactions are molecular reactions. Hence, they are faster than the organic reactions.

23. Temperature coefficient of a reaction is 2. How many times does the rate increase when the temperature is increased from 30^0 - 90^0C?

Soln:- The rise in temperature = $90 - 30 = 60^0$C

For every 10^0 rise in temperature, the rate increases two times.

$\therefore$ The increase in the rate would be 2^6 times or 64 times.

24. Mention the factors that influence the rate of a reaction.

Ans:- The factors that influence the rate of a reaction are - (i) Nature of the reactants

(ii) Concentration of the reactants

(iii) Temperature of the reaction

(iv) Presence of the catalyst

(v) Intensity of light in the case of photosensitive reactions

(vi) Surface area

25. What is Pseudo first order reaction?

Ans:- A chemical reaction of higher order can be converted into first order by taking the other reactants except one in a large excess. Such a reaction is called Pseudo first order reaction.

Eg:- Hydrolysis of sucrose or the inversion of cane sugar.

$$\underset{\text{(Sucrose)}}{C_{12}H_{22}O_{11}} + H_2O \xrightarrow{H^+} \underset{\text{(Glucose)}}{C_6H_{12}O_6} + \underset{\text{(Fructose)}}{C_6H_{12}O_6}$$

26. The first order reaction is 87.5% complete in 120 min. Calculate its half life?

Soln:- For a first order reaction,

$$k = \frac{2.303}{t}\log\frac{a}{a-x}$$

Substituting for a = 100, $t = t_{87.5\%} = 120$ min and a – x = 12.5% in the above equation we get,

$$k = \frac{2.303}{120}\log\frac{100}{100-87.5} = \frac{2.303}{120}\log\frac{100}{12.5}$$

$$= \frac{2.303}{120}(\log 100 - \log 12.5)$$

$$= \frac{2.303}{120}(2.0000 - 1.0969)$$

$$= \frac{2.303}{120} \times 0.9031 = 0.01733\ \text{min}^{-1}$$

$$\text{Half life, } t_{\frac{1}{2}} = \frac{0.693}{k} = \frac{0.693}{0.01733}$$

$$= 39.98 \text{ minutes}$$

27. How does the concentration of the reactants influence the rate of a reaction?

Ans:- The concentration of the reactants is maximum at the start of the reaction and therefore, the rate of change of concentration is also maximum. As the concentration of the reactants decreases, it brings about the corresponding decrease in the rate of the reaction. This means that the rate of the reaction is directly proportional to the concentration of the reactants. *Eg:-* The rate of the burning of the wood depends upon the concentration of oxygen, a piece of wood burns slowly in air containing about 20% of oxygen but burns rapidly in pure oxygen (100% oxygen)

28. How does the temperature of the system influence the rate of a reaction?

Ans:- An increase in temperature increases the rate of almost all the chemical reactions and a decrease in temperature decreases the rate. The effect is observed in both the exothermic and endothermic reactions. Generally the reaction rate for most of the chemical reactions becomes almost double, for every 10^0C rise in the temperature.

29. How does the nature of the reactants and the products influence the rate of a reaction?

Ans:- A chemical reaction involves the breaking of old bonds and formation of the new bonds. The reactivity of the substance can, therefore, be related to the ease with which the specific bonds are broken or formed and the number of such bonds involved.

Eg:- The oxidation of nitric oxide to nitrogen dioxide takes place rapidly while the oxidation of carbon monoxide to carbon dioxide takes place slowly.

$$2NO + O_2 \rightarrow 2NO_2 \ \text{(fast)}$$

$$2CO + O_2 \rightarrow 2CO_2 \ \text{(slow)}$$

30. How does the surface area influence the rate of a reaction? Explain with an example.

Ans:- The larger the surface area of the reactants, the faster is the rate of the reaction.

Eg:- The log of wood burns slowly but if it is cut into small wooden chips, the burning takes place rapidly.

This is due to the fact that the total surface area of the smaller particles is greater than the large particles and this permits more molecules of the reactants to come in contact and form products.

31. How does the Intensity of light in the case of photosensitive reactions influence the rate of a reaction?

Ans:- The rate of the chemical reaction is considerably increased by the use of certain radiations. The photons of these radiations having frequencies (ν) possess sufficient energies ($E = h\nu$) to break certain bonds in the reactants.

Eg:- The reaction of hydrogen and chlorine takes place very slowly in the absence of light. However in the presence of light, the reaction takes place very rapidly.

32. What is meant by the order of the reaction?

Ans:- The sum of the powers to which the concentration of the terms are raised in the rate law expression is known as the order of the reaction.

(Contd.........)

‘ಡ್ರಗ್ಸ್’ ಬಲೆಯಲ್ಲಿ ಉದ್ಯಮಿ • ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ

₹ 1.98 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಪೊಲೀಸರ ಹೆಸರಿನಲ್ಲಿ ನಗರದ ಉದ್ಯಮಿಯೊಬ್ಬರನ್ನು ಬೆದರಿಸಿ ₹ 1.98 ಕೋಟಿ ಪಡೆದು ವಂಚಿಸಲಾಗಿದೆ.

ನಗರದ ಎಚ್‌ಎಸ್‌ಆರ್ ಲೇಔಟ್ ನಿವಾಸಿಯಾಗಿರುವ 52 ವರ್ಷದ ಉದ್ಯಮಿ ವಂಚನೆ ಬಗ್ಗೆ ದೂರು ನೀಡಿದ್ದು, ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಡಿ. 2ರಂದು ಉದ್ಯಮಿಗೆ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಆಧಾರ್ ಬಳಸಿ, ತೈವಾನ್‌ಗೆ ಡ್ರಗ್ಸ್ ಕೊರಿಯರ್ ಕಳುಹಿಸಲಾಗುತ್ತಿದೆ. ನಿಮ್ಮ ವಿರುದ್ಧ ಮುಂಬೈ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ’ ಎಂದಿದ್ದ. ಹೆದರಿದ್ದ ಉದ್ಯಮಿ, ಯಾರಿಗೂ ಕೊರಿಯರ್ ಕಳುಹಿಸಿಲ್ಲವೆಂದು ಹೇಳಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕೆಲ ಹೊತ್ತಿನ ನಂತರ ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿ, ‘ನೀವು ಅಕ್ರಮವಾಗಿ ಡ್ರಗ್ಸ್ ಸಾಗಿಸುತ್ತಿದ್ದಿರಾ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದೇವೆ. ನಂತರ, ನಿಮ್ಮೂರಿಗೆ ಬಂದು ನಿಮ್ಮನ್ನು ಬಂಧಿಸಿ ಮುಂಬೈಗೆ ಕರೆತರುತ್ತೇವೆ’ ಎಂದಿದ್ದರು. ಮತ್ತಷ್ಟು ಹೆದರಿದ್ದ ಉದ್ಯಮಿ, ಕೊರಿಯರ್ ತಮ್ಮದಲ್ಲವೆಂದು ವಾದಿಸಿದ್ದರು’ ಎಂದು ಹೇಳಿದರು.

ಅಪರಾಧ ಸುದ್ದಿ

‘ಕೊರಿಯರ್ ತಮ್ಮದಲ್ಲವೆಂದರೆ, ನಿಮ್ಮ ವೈಯಕ್ತಿಕ ಮಾಹಿತಿ ಕಳುಹಿಸಿ’ ಎಂದು ಆರೋಪಿಗಳು ಕೇಳಿದ್ದರು. ಅದನ್ನು ನಂಬಿದ್ದ ಆರೋಪಿ, ವೈಯಕ್ತಿಕ ಹಾಗೂ ಬ್ಯಾಂಕ್ ಖಾತೆ ವಿವರಗಳನ್ನು ನೀಡಿದ್ದರು. ವೈಯಕ್ತಿಕ ಮಾಹಿತಿ ಪರಿಶೀಲನೆ ನಡೆಸಬೇಕೆಂದು ಹೇಳಿದ್ದ ಆರೋಪಿಗಳು, ಶುಲ್ಕದ ಹೆಸರಿನಲ್ಲಿ ಹಣ ಪಡೆದಿದ್ದರು. ಇದಾದ ನಂತರವೂ ನಾನಾ ಕಾರಣ ನೀಡಿ ಹಂತ ಹಂತವಾಗಿ ಉದ್ಯಮಿಯಿಂದ ₹ 1.98 ಕೋಟಿ ಪಡೆದುಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದರು. ಬೇಸತ್ತ ಉದ್ಯಮಿ, ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ನಂತರವೇ ಠಾಣೆಗೆ ಬಂದು ದೂರು ಕೊಟ್ಟಿದ್ದಾರೆ’ ಎಂದು ಹೇಳಿದರು.

ಕೆಎಟಿ ವಿಡಿಯೊ ಕಾನ್ಫರೆನ್ಸ್‌ಗೆ ಅಡ್ಡಿ: ಎಫ್‌ಐಆರ್ ದಾಖಲು

ಬೆಂಗಳೂರು: ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ (ಕೆಎಟಿ) ವಿಡಿಯೊ ಕಾನ್ಫರೆನ್ಸ್‌ಗೆ ಅಪರಿಚಿತರು ಅಡ್ಡಿಪಡಿಸಿದ್ದು, ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸೈಬರ್ ಭದ್ರತೆ ಕಾರಣದಿಂದಾಗಿ ಕೆಎಟಿ ವಿಡಿಯೊ ಕಾನ್ಫರೆನ್ಸ್ ಸೇವೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ವಿಡಿಯೊ ಕಾನ್ಫರೆನ್ಸ್‌ಗೆ ಅಡ್ಡಿಪಡಿಸಿದ್ದವರ ವಿರುದ್ಧ ಕೆಎಟಿ ಅಧಿಕಾರಿ ವಿನೀತಾ ಶೆಟ್ಟಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

‘ಡಿ. 8ರಂದು ಮಧ್ಯಾಹ್ನ 3 ಗಂಟೆಗೆ ಹಾಲ್–1ರಲ್ಲಿ ಕೆಎಟಿ ಮುಖ್ಯಸ್ಥರು ವಿಡಿಯೊ ಕಾನ್ಫರೆನ್ಸ್ ಆರಂಭಿಸಿದ್ದರು. ಇದೇ ಸಂದರ್ಭದಲ್ಲಿ ಲಾಗ್–ಇನ್ ಆಗಿದ್ದ ಅಪರಿಚಿತರು, ಅಶ್ಲೀಲ ಚಿತ್ರ ಪ್ರದರ್ಶಿಸಿ ನ್ಯಾಯಾಲಯದ ಕಲಾಪಕ್ಕೆ ಹಾಗೂ ಕೆಎಟಿ ಮುಖ್ಯಸ್ಥರ ವಿಡಿಯೊ ಕಾನ್ಫರೆನ್ಸ್‌ಗೆ ಅಡ್ಡಿಪಡಿಸಿದ್ದಾರೆ. ಅಪರಿಚಿತರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಿ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 67 ಮತ್ತು 67 ಎ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಬಿಟ್ ಕಾಯಿನ್ ಹೂಡಿಕೆ: ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಹೂಡಿಕೆ ಹೆಸರಿನಲ್ಲಿ ನಗರದ ಯುವತಿಯೊಬ್ಬರಿಂದ ₹ 2.60 ಲಕ್ಷ ಪಡೆದು ವಂಚಿಸಲಾಗಿದ್ದು, ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ಕಂಪನಿಯೊಂದರ ಉದ್ಯೋಗಿ ಆಗಿರುವ 28 ವರ್ಷದ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಕೃತ್ಯ ಎಸಗಿರುವ ಆರೋಪಿಗಳ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಾನು ಬಿಟ್ ಕಾಯಿನ್ ಹೂಡಿಕೆ ಮಾಡಿ ಮೂರು ಪಟ್ಟು ಹೆಚ್ಚು ಹಣ ಗಳಿಸಿದ್ದೇನೆ’ ಎಂಬುದಾಗಿ ಇನ್‌ಸ್ಟಾಗ್ರಾಂನಲ್ಲಿ ವ್ಯಕ್ತಿಯೊಬ್ಬರು ಪೋಸ್ಟ್ ಪ್ರಕಟಿಸಿದ್ದರು. ಅದನ್ನು ನೋಡಿದ್ದ ಯುವತಿ, ಹೂಡಿಕೆ ಬಗ್ಗೆ ವಿಚಾರಿಸಿದ್ದರು. ಹೂಡಿಕೆ ಬಗ್ಗೆ ಮಾಹಿತಿ ನೀಡಿದ್ದ ಆರೋಪಿ, ಕೆಲ ಬ್ಯಾಂಕ್ ಖಾತೆಗಳ ವಿವರ ನೀಡಿದ್ದರು. ಅದೇ ಖಾತೆಗಳಿಗೆ ಯುವತಿ ಹಂತ ಹಂತವಾಗಿ ₹ 2.60 ಲಕ್ಷ ಪಾವತಿಸಿದ್ದರು.’

‘ನಿಗದಿತ ದಿನಗಳ ನಂತರ ಯಾವುದೇ ಹಣ ವಾಪಸು ಬಂದಿರಲಿಲ್ಲ. ಆರೋಪಿ ಸಹ ತಲೆಮರೆಸಿಕೊಂಡಿದ್ದಾನೆ. ಇನ್‌ಸ್ಟಾಗ್ರಾಂನಲ್ಲಿ ನಕಲಿ ಖಾತೆ ತೆರೆದು ವಂಚನೆ ಮಾಡಿರುವ ಅನುಮಾನವಿದೆ’ ಎಂದು ಪೊಲೀಸರು ತಿಳಿಸಿದರು

ಗರುಡಾ ಮಾಲ್‌ನಲ್ಲಿ ಗಲಾಟೆ: ದೂರು–ಪ್ರತಿದೂರು

ಬೆಂಗಳೂರು: ಗರುಡಾ ಮಾಲ್‌ನಲ್ಲಿ ಸಿನಿಮಾ ನೋಡಲು ಬಂದಿದ್ದ ಮಹಿಳೆ ಹಾಗೂ ಭದ್ರತಾ ಸಿಬ್ಬಂದಿ ನಡುವೆ ಗಲಾಟೆ ನಡೆದಿದ್ದು, ಅಶೋಕನಗರ ಠಾಣೆಯಲ್ಲಿ ದೂರು – ಪ್ರತಿ ದೂರು ದಾಖಲಾಗಿದೆ.

‘ಶನಿವಾರ ರಾತ್ರಿ ನಡೆದಿರುವ ಗಲಾಟೆ ಸಂಬಂಧ ಮಹಿಳೆ ಹಾಗೂ ಭದ್ರತಾ ಸಿಬ್ಬಂದಿ ಪ್ರತ್ಯೇಕ ದೂರು ನೀಡಿದ್ದಾರೆ. ಎರಡು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆ, ಸಿನಿಮಾ ನೋಡಿ ಚಿತ್ರಮಂದಿರದಿಂದ ಹೊರಗೆ ಬಂದಿದ್ದರು. ಚಿತ್ರಮಂದಿರದಲ್ಲಿ ಪರ್ಸ್ ಮರೆತು ಮನೆಗೆ ಹೋಗಿದ್ದರು. ಸ್ವಚ್ಛತಾ ಸಿಬ್ಬಂದಿಗೆ ಪರ್ಸ್ ಸಿಕ್ಕಿತ್ತು. ತಡರಾತ್ರಿ ಸ್ನೇಹಿತರ ಜೊತೆ ಪುನಃ ಮಾಲ್‌ಗೆ ಹೋಗಿದ್ದ ಮಹಿಳೆ, ಪರ್ಸ್ ಬಗ್ಗೆ ವಿಚಾರಿಸಿದ್ದರು. ವೈಯಕ್ತಿಕ ದಾಖಲೆಗಳನ್ನು ನೀಡಿದರೆ, ಪರ್ಸ್ ವಾಪಸು ಕೊಡುವುದಾಗಿ ಭದ್ರತಾ ಸಿಬ್ಬಂದಿ ಹೇಳಿದ್ದರು. ಅದೇ ವಿಚಾರಕ್ಕೆ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು’ ಎಂದು ತಿಳಿಸಿವೆ.

‘ಭದ್ರತಾ ಸಿಬ್ಬಂದಿ ಮೇಲೆ ಮಹಿಳೆ ಹಲ್ಲೆ ನಡೆಸಿದ್ದರೆಂದು ಹೇಳಲಾಗಿದೆ. ಗಲಾಟೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಸ್ಥಿತಿ ತಿಳಿಗೊಳಿಸಿದ್ದರು. ಪರ್ಸ್ ನಲ್ಲಿದ್ದ ₹ 8 ಸಾವಿರ ಕಳ್ಳತನ ಆಗಿರುವುದಾಗಿ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ’ ಎಂದು ಹೇಳಿವೆ.

ಫ್ಲ್ಯಾಟ್ ಸ್ವಚ್ಛಗೊಳಿಸುತ್ತಿದ್ದಾಗ ಆಯತಪ್ಪಿ ಬಿದ್ದು ಸಾವು

ಬೆಂಗಳೂರು: ದೊಡ್ಡಬನಹಳ್ಳಿ ಬಳಿಯ ಬಿಡಿಎ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಫ್ಲ್ಯಾಟ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಆಯತಪ್ಪಿ ಬಿದ್ದು ಖುಷ್ಬೂ ತ್ರಿವೇದಿ (31) ಅವರು ಮೃತಪಟ್ಟಿದ್ದಾರೆ.

‘ಗುಜರಾತ್‌ನ ಖುಷ್ಬೂ ಅವರು ಪತಿ ಆಶೀಶ್ ಜೊತೆ ಐದನೇ ಮಹಡಿಯಲ್ಲಿರುವ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಭಾನುವಾರ ಫ್ಲ್ಯಾಟ್ ಎದುರಿನ ಚಪ್ಪಲಿ ಬಾಕ್ಸ್ ಸ್ವಚ್ಛಗೊಳಿಸುತ್ತಿದ್ದ ಸಂದರ್ಭದಲ್ಲಿ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ’ ಎಂದು ಕಾಡುಗೋಡಿ ಠಾಣೆ ಪೊಲೀಸರು ಹೇಳಿದರು.

‘ಖುಷ್ಬೂ ಹಾಗೂ ಆಶೀಷ್ ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದರು. ನಗರದ ಕಂಪನಿಯೊಂದರಲ್ಲಿ ಆಶೀಶ್ ಕೆಲಸ ಮಾಡುತ್ತಿದ್ದರು. ಮದುವೆ ಬಳಿಕ ಪತ್ನಿಯನ್ನು ಬೆಂಗಳೂರಿಗೆ ಕರೆತಂದಿದ್ದರು.’

‘ಫ್ಲ್ಯಾಟ್ ಹೊರಭಾಗದಲ್ಲಿ ಗಲೀಜು ಆಗಿತ್ತು. ಹೀಗಾಗಿ, ಖುಷ್ಬೂ ಅವರು ಭಾನುವಾರ ಬೆಳಿಗ್ಗೆಯಿಂದ ಸ್ವಚ್ಛತೆ ಕೆಲಸ ಆರಂಭಿಸಿದ್ದರು. 5ನೇ ಮಹಡಿಯಿಂದ ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತೀವ್ರ ಪೆಟ್ಟು ಬಿದ್ದಿದ್ದರಿಂದ ಆಸ್ಪತ್ರೆಯಲ್ಲಿ ಅವರು ಅಸುನೀಗಿದರು’ ಎಂದು ತಿಳಿಸಿದರು.

ಆಹಾ... ‘ಪರಿಷೆ!’

ನಗರದ ಬಸವನಗುಡಿಯಲ್ಲಿ ಸೋಮವಾರ ಕಡಲೆಕಾಯಿ ಪರಿಷೆ ನಡೆಯಲಿದ್ದು, ಮುನ್ನದಿನವಾದ ಭಾನುವಾರ ದೊಡ್ಡಬಸವಣ್ಣ ದೇವಸ್ಥಾನದ ರಸ್ತೆಯಲ್ಲಿ ಸೇರಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಬಾರ್‌ಗೆ ವಿರೋಧ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕುವೆಂಪುನಗರ ವಾರ್ಡ್ ನಂ.11ರ ವ್ಯಾಪ್ತಿಯ ಸಿಂಗಾಪುರದಲ್ಲಿ ಮದ್ಯದ ಅಂಗಡಿಗೆ ಪರವಾನಗಿ ನೀಡಬಾರದು ಎಂದು ಒತ್ತಾಯಿಸಿ ಸ್ಥಳೀಯ ನಿವಾಸಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ವಾಲ್ಮೀಕಿ ವೃತ್ತದಲ್ಲಿ ಧರಣಿ ನಡೆಸಿದರು.

ಕರ್ನಾಟಕ ಮದಕರಿ ನಾಯಕ ಸೇನೆಯ ರಾಜ್ಯಘಟಕದ ಅಧ್ಯಕ್ಷ ಸಿಂಗಾಪುರ ವೆಂಕಟೇಶ್ ಅವರು, ಸದ್ಯ ಸಿಂಗಾಪುರ–ಅಬ್ಬಿಗೆರೆ ಸಂದಿಸುವ ರಸ್ತೆಯಲ್ಲಿ ಬಾರ್ ಮತ್ತು ರೆಸ್ಟೋರೆಂಟ್ ಇದೆ. ಮತ್ತೊಂದು ಬಾರ್ ಬೇಡ ಎಂದು ಅಭಿಪ್ರಾಯಪಟ್ಟರು.

ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಬಾರ್ ತೆರೆಯದಂತೆ ತಡೆಯಬೇಕು ಎಂದು ಸ್ಥಳೀಯ ನಿವಾಸಿ ಮುನಿರಾಜು ಒತ್ತಾಯಿಸಿದರು.

ಮುಖಂಡರಾದ ಅನಿಲ್ ರಂಜನ್, ಮಂಜುನಾಥ್, ರತ್ನ ಉಪಸ್ಥಿತರಿದ್ದರು.

‘72 ಕಲಾಕೃತಿ ವಾಪಸ್‌ಗೆ ಕ್ರಮ’

ಮೈಸೂರು: ‘ಬೇಲೂರು, ಹಳೇಬೀಡಿನಿಂದ ಬ್ರಿಟಿಷರು ತೆಗೆದುಕೊಂಡು ಹೋಗಿರುವ 72 ಕಲಾಕೃತಿ(-ಮೂರ್ತಿ)ಗಳನ್ನು ವಾಪಸ್ ತರಲು ಕ್ರಮ ವಹಿಸಲಾಗುವುದು’ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಇಲಾಖೆಯಿಂದ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಭಾನುವಾರ ನಡೆದ ‘ಬ್ರ್ಯಾಂಡ್ ಮೈಸೂರು’ ಲೋಗೊ ಹಾಗೂ ಟ್ಯಾಗ್‌ಲೈನ್ (ನಮ್ಮ ಪರಂಪರೆ ನಮ್ಮ ತಾಣ) ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬೇಲೂರು ಹಾಗೂ ಹಳೇಬೀಡಿನಲ್ಲಿ ಈಗ ಇರುವುದಕ್ಕಿಂತಲೂ ಅತ್ಯಂತ ಸುಂದರ ಕಲಾಕೃತಿಗಳವು. ಅವುಗಳನ್ನು ಪಡೆದುಕೊಳ್ಳಬೇಕು. ಬೆಳಗಾವಿಯ ಹಲವು ಗೆಳೆಯರು ನನ್ನೊಂದಿಗೆ ಚರ್ಚಿಸಿದ್ದಾರೆ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಗೆ ಸೂಚನೆ ನೀಡಲಿದ್ದೇನೆ. ಈವರೆಗೆ ಇಂತಹ ಪ್ರಯತ್ನ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆ ಕಲಾಕೃತಿಗಳನ್ನು ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು’ ಎಂದರು.

ಹೊಸೂರು: ಕಾಡಾನೆ ಹಿಂಡು

ಆನೇಕಲ್‌ನತ್ತ ನುಗ್ಗುವ ಸಾಧ್ಯತೆ • ಸ್ಥಳೀಯರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಆನೇಕಲ್: ತಮಿಳುನಾಡು ಹೊಸೂರಿನ ಶಾನಮಾನು ಅರಣ್ಯ ಪ್ರದೇಶದಲ್ಲಿ ಕಾಡಾನೆಗಳ ಹಿಂಡೊಂದು ಎರಡು ದಿನಗಳಿಂದ ಬೀಡುಬಿಟ್ಟಿದೆ. ಈ ಹಿಂಡಿನಲ್ಲಿ 80ಕ್ಕೂ ಹೆಚ್ಚು ಕಾಡಾನೆಗಳಿದ್ದು, ಸ್ಥಳೀಯರಲ್ಲಿ ಆತಂಕ ಶುರುವಾಗಿದೆ.

ಶಾನಮಾವು, ಬೂದುರು, ಹಳಿಯಾಳ, ರಾಮಾಪುರ, ಬಿರ್ಜೆಪಲ್ಲಿ ಸೇರಿದಂತೆ ವಿವಿಧ ಗ್ರಾಮಗಳ ಕೃಷಿ ಜಮೀನುಗಳಿಗೆ ನುಗ್ಗಿದ ಆನೆಗಳು ರಾಗಿ, ಭತ್ತ ಮತ್ತು ತೋಟದ ಬೆಳೆ ತುಳಿದು ಹಾಕಿವೆ.

ತಮಿಳುನಾಡಿನಿಂದ 25 ಆನೆಗಳ ಹಿಂಡೊಂದು ಆನೇಕಲ್ ಭಾಗದತ್ತ ಬರುತ್ತಿದ್ದು, ಇವನ್ನು ಗಡಿಯಲ್ಲಿ ತಡೆಯಲು ಮುತ್ಯಾಮಡುವು ಸಮೀಪದ ಆನೆ ಮಾರ್ಗದ ಬಳಿ ಅರಣ್ಯ ಇಲಾಖೆ ಸಿಬ್ಬಂದಿಯು ಪಟಾಕಿ ಮತ್ತು ಬೆಂಕಿ ಹಾಕಿಕೊಂಡು ಕಾಡಿನತ್ತ ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ.

ಹೊಸೂರಿನ ಶಾನುಮಾವು ಬಳಿ ಕಂಡ ಕಾಡಾನೆ ಹಿಂಡು

ಮುತ್ಯಾಲಮಡುವು ಸಮೀಪದ ಗೌರಮ್ಮನ ಕೆರೆ, ಶೇಷಾದ್ರಿ ಕೆರೆ ಭಾಗಗಳಲ್ಲಿ ಆನೆಗಳ ಸಂಚಾರದ ಬಗ್ಗೆ ಮಾಹಿತಿ ಇದೆ. 25 ಆನೆಗಳ ಒಂದು ಹಿಂಡು, ಮೂರು ಆನೆಗಳ ಮತ್ತೊಂದು ಹಿಂಡು ಮತ್ತು ಒಂಟಿ ಆನೆಯೊಂದು ಆನೇಕಲ್ ಭಾಗದ ಅರಣ್ಯದಲ್ಲಿ ಕಂಡು ಬಂದಿದೆ. ಗ್ರಾಮಗಳತ್ತ ನುಗ್ಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಕೈಗೊಂಡಿದ್ದಾರೆ.

ಜನರು ಮೇಕೆ, ಕುರಿ, ದನ ಕರು ಮೇಯಿಸಲು ಕಾಡಿಗೆ ಹೋಗಬಾರದು. ಆನೆಗಳನ್ನು ಕೆರಳಿಸುವುದು, ಸೆಲ್ಫಿ ತೆಗೆದುಕೊಳ್ಳುವುದು ಮಾಡಬಾರದು ಎಂದು ಅರಣ್ಯ ಇಲಾಖೆ ಮತ್ತು ತಮಿಳುನಾಡು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಸುಗ್ಗಿ ಕಾಲದಲ್ಲಿ ಕಾಡಾನೆಗಳು ನಾಡಿನತ್ತ ನುಗ್ಗುವುದು ಸಾಮಾನ್ಯವಾಗಿದೆ. ತಮಿಳುನಾಡಿನ ಆನೆಗಳು ಜವಳಗೆರೆ, ದೇವರಬೆಟ್ಟ ಅರಣ್ಯ ಕಡೆಯಿಂದ ಮುತ್ಯಾಲಮಡುವು, ಮೆಣಸಿಗನಹಳ್ಳಿ, ವಣಕನಹಳ್ಳಿ, ಸುಣವಾರ ಗ್ರಾಮಗಳತ್ತ ಪ್ರತಿವರ್ಷ ಬರುವುದು ವಾಡಿಕೆ.

ನಗರದಲ್ಲಿ ಇಂದು

ಬಸವನಗುಡಿ ಕಡಲೆಕಾಯಿ ಪರಿಷೆ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ತೇಜಸ್ವಿ ಸೂರ್ಯ, ರವಿ ಸುಬ್ರಮಣ್ಯ, ಉಪಸ್ಥಿತಿ: ಉದಯ್ ಬಿ. ಗರುಡಾಚಾರ್, ಆರ್. ಅಶೋಕ, ಕೃಷ್ಣ ಬೈರೇಗೌಡ, ಕೆಂಪಾಂಬುದಿ ಕೆರೆಯಲ್ಲಿ ತೆಪ್ಪೋತ್ಸವ ಸಂಜೆ 6ಕ್ಕೆ, ಆಯೋಜನೆ: ಬಿಬಿಎಂಪಿ, ಸ್ಥಳ: ದೊಡ್ಡಬಸವಣ್ಣ ದೇವಸ್ಥಾನ ಬಸವನಗುಡಿ, ಬೆಳಿಗ್ಗೆ 10

‘ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿರುವ ಕೇಂದ್ರ ಪುರಸ್ಕೃತ ಯೋಜನೆಗಳು– ನೌಕರರ ಪರಿಸ್ಥಿತಿಗಳು’ ಕುರಿತು ವಿಚಾರಸಂಕಿರಣ: ನಿರ್ಣಯ ಮಂಡನೆ: ಎಚ್.ಎಸ್. ಸುನಂದ, ಭಾಷಣಕಾರರು: ಎಸ್.ಜಿ. ಸಿದ್ಧರಾಮಯ್ಯ, ಎ.ಆರ್. ಸಿಂಧು, ಕಾತ್ಯಾಯಿನಿ ಚಾಮರಾಜ್, ಮೀನಾಕ್ಷಿ ಸುಂದರಂ, ಕಾಂತರಾಜು, ಮಾಲಿನಿ ಮೇಸ್ತ, ಅಧ್ಯಕ್ಷತೆ: ಎಸ್. ವರಲಕ್ಷ್ಮಿ, ಆಯೋಜನೆ: ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘ಧರ್ಮ ವಿಜಯ’ ನಾಟಕ ಪ್ರದರ್ಶನ: ನಿರ್ದೇಶನ: ಲಕ್ಷ್ಮಣ ಮಾಸ್ಟರ್, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಚಂದ್ರಶೇಖರ್, ಕಾವೇರಿ ಕೇದಾರನಾಥ್, ಯೋಗೇಶ್, ರಾಮಚಂದ್ರ, ಆಯೋಜನೆ: ಲಲಿತ ಕಲಾ ನಾಟಕ ಸಂಘ, ಸ್ಥಳ: ಕೇಶವ ಕಲ್ಪ, ಮಲ್ಲೇಶ್ವರ, ಮಧ್ಯಾಹ್ನ 3

‘ನಿನಗೆ ನೀನೇ ಗೆಳತಿ’ ನಾಟಕ ಪ್ರದರ್ಶನ: ಪ್ರಸ್ತುತಿ: ನಾಟ್ಯದರ್ಪಣ, ನಿರ್ದೇಶನ: ಅಬ್ಬೂರು ಜಯತೀರ್ಥ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

‘ರುದ್ರದೇವರ ಮಹಿಮೆ’ ಧಾರ್ಮಿಕ ಪ್ರವಚನ: ಪ್ರಶಾಂತ್ ಭಾರ್ಗವಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಬಿಡಿಎ ಎಂಜಿನಿಯರ್‌ಗಳ ವಿರುದ್ಧ ನಿವೇಶನದಾರರ ಆಕ್ರೋಶ

ವಾಸ್ತವ ಮರೆಮಾಚಿ ತಪ್ಪು ಮಾಹಿತಿ

• ಆದಿತ್ಯ ಕೆ.ಎ.

ಬೆಂಗಳೂರು: 'ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಲೇ ತಾತ್ಕಾಲಿಕವಾಗಿ ಶೌಚದ ಟ್ಯಾಂಕ್ ನಿರ್ಮಿಸಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಡಾವಣೆಯ ಎಲ್ಲ ನಿವೇಶನಗಳ ಹಂಚಿಕೆದಾರರಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ'.

ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಎಂಜಿನಿಯರ್‌ಗಳು, ಬಡಾವಣೆ ಅಭಿವೃದ್ಧಿ ಕುರಿತು ಸರ್ಕಾರಕ್ಕೆ ನೀಡಿರುವ ಮಾಹಿತಿ. ಇದಕ್ಕೆ ನಿವೇಶನದಾದರರು ಆಕ್ರೋಶ ಹೊರಹಾಕಿದ್ದಾರೆ.

'ಬಡಾವಣೆಯಲ್ಲಿ ಅರೆಬರೆ ಕಾಮಗಾರಿ ನಡೆದಿದ್ದು ಮೂಲಸೌಕರ್ಯ ಇಲ್ಲವಾಗಿದೆ. ಆದರೆ, ಅಧಿಕಾರಿಗಳು ವಾಸ್ತವ ಪರಿಸ್ಥಿತಿ ಮರೆಮಾಚಿ ತಪ್ಪು ಮಾಹಿತಿ ಕೊಡಿಸಿದ್ದಾರೆ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಸದಸ್ಯರು ಆಕ್ರೋಶ ಹೊರಹಾಕಿದ್ದಾರೆ.

'2024ರ ಡಿಸೆಂಬರ್ ವೇಳೆಗೆ ಎಲ್ಲ ರೀತಿಯ ಮೂಲಸೌಕರ್ಯ ಕಲ್ಪಿಸಲಾಗುವುದು. ಸುಸಜ್ಜಿತ ಬಡಾವಣೆ ನಿರ್ಮಿಸುವುದಾಗಿ ಸರ್ಕಾರ ಹೇಳುತ್ತಿದೆ. ವಾಸ್ತವದಲ್ಲಿ 13 ವರ್ಷ ಕಳೆದರೂ 1,400 ಎಕರೆಯಷ್ಟು ಭೂಸ್ವಾಧೀನ ಕೆಲಸವೇ ನಡೆದಿಲ್ಲ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಹಲವು ಪ್ರಕರಣಗಳು ಹೈಕೋರ್ಟ್‌ನಲ್ಲಿವೆ. ಇನ್ನು ಸಿ.ಎ ನಿವೇಶನಗಳನ್ನು ಕಂದಾಯ ನಿವೇಶನಗಳಾಗಿ ರಚಿಸಿ ಮಾರಾಟ ಮಾಡಲಾಗಿದೆ. ಈ ತೊಡಕು ನಿವಾರಣೆಗೆ ಬಿಡಿಎ ಅಧಿಕಾರಿಗಳು ಕಾರ್ಯಪ್ರವೃತ್ತವಾಗಿಲ್ಲ. ಎಂಜಿನಿಯರ್‌ಗಳು ವಾಸ್ತವಕ್ಕೆ ವಿರುದ್ಧವಾದ ಮಾಹಿತಿ ಕೊಡಿಸುತ್ತಿದ್ದಾರೆ' ಎಂಬುದು ನಿವೇಶನದಾರರು ಅಳಲಾಗಿದೆ.

'ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಪ್ರದೇಶವನ್ನು ಬಿಡಿಎ ಎಂಜಿನಿಯರ್ ವಿಭಾಗವು ಸ್ವಾಧೀನಕ್ಕೆ ಪಡೆದು ಕುಡಿಯುವ ನೀರು ಸಂಪರ್ಕ, ಒಳಚರಂಡಿ, ರಸ್ತೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿದೆ. ವಿದ್ಯುತ್ ಸಂಪರ್ಕ ಸಹ ಕಲ್ಪಿಸಿದೆ. ಕೆಲವು ಬ್ಲಾಕ್‌ನಲ್ಲಿ ಭೂಮಾಲೀಕರು ಹೈಕೋರ್ಟ್‌ಗೆ ತೆರಳಿದ್ದು, ತಡೆಯಾಜ್ಞೆ ತಂದಿದ್ದಾರೆ. ಅಂತಹ ಜಮೀನಿನಲ್ಲಿ ಮಾತ್ರ ಬಡಾವಣೆ ರಚನೆ ಸಾಧ್ಯವಾಗಿಲ್ಲ. ಆ ಬ್ಲಾಕ್‌ಗಳಲ್ಲಿ ಕುಡಿಯುವ ನೀರು, ಒಳಚರಂಡಿ ಹಾಗೂ ರಸ್ತೆ ನಿರ್ಮಾಣ ಜಾಲಗಳಲ್ಲಿ ನಿರಂತರತೆ ಕಾಪಾಡಿಕೊಳ್ಳುವಲ್ಲಿ ಸಮಸ್ಯೆಯಾಗಿದೆ. ಈ ಭಾಗದ ನಿವೇಶನದಾರರಿಗೆ ಪರ್ಯಾಯ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಕಲ್ಪಿಸಿದ್ದೇವೆ' ಎಂಬುದು ಎಂಜಿನಿಯರ್‌ಗಳ ಮಾಹಿತಿ.

'ಸ್ವಾಧೀನ ಪಡಿಸಿಕೊಂಡಿರುವ ಪ್ರದೇಶದಲ್ಲೇ ಮೂಲಸೌಕರ್ಯ ಮರೀಚಿಕೆಯಾಗಿದ್ದು, ನಿವೇಶನದಾರರಿಗೆ ಮನೆ ನಿರ್ಮಾಣಕ್ಕೆ ಸಾಧ್ಯವಿಲ್ಲದ ಸ್ಥಿತಿಯಿದೆ' ಎಂದು ವೇದಿಕೆ ಕಾರ್ಯದರ್ಶಿ ಅಶೋಕ್ ಮಾಯಿಗೌಡ ದೂರಿದರು.

ಇದುವರೆಗೂ ಕಲ್ಪಿಸಿರುವ ಮೂಲಸೌಕರ್ಯ ವ್ಯವಸ್ಥೆ ನಿವೇಶನದಾರರಿಗೆ ಮನೆ ನಿರ್ಮಿಸಲು ಪೂರಕವಾಗಿಲ್ಲ. ವಿದ್ಯುತ್ ಜಾಲದ ಪರಿಕರ ಅಳವಡಿಕೆಯೂ ಅರೆಬರೆಯಾಗಿವೆ. ವಿದ್ಯುತ್ ವೈರ್‌ಗಳು ಅಪಾಯ ಆಹ್ವಾನಿಸುತ್ತಿವೆ. ನಿವೇಶನದಾರರು 'ತ್ರಿಶಂಕು' ಸ್ಥಿತಿಯಲ್ಲಿದ್ದಾರೆ ಎಂದೂ ದೂರುತ್ತಾರೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಬಿಡಿಎ ಎಂಜಿನಿಯರ್‌ಗಳು ಸಂಪರ್ಕಕ್ಕೆ ಸಿಗಲಿಲ್ಲ.

ಪ್ರಜಾವಾಣಿ ವಿಶೇಷ

ಕೆಂಪೇಗೌಡ ಬಡಾವಣೆಯಲ್ಲಿ ನಡೆದಿರುವ ಅರೆಬರೆ ಕಾಮಗಾರಿ.

ಅಪಾಯ ಆಹ್ವಾನಿಸುತ್ತಿರುವ ವಿದ್ಯುತ್ ವೈರ್‌ಗಳು

'ಹಸಿರು ಪೀಠದ ಆದೇಶ ಉಲ್ಲಂಘನೆ'

'ಅರೆಬರೆ ಒಳಚರಂಡಿ ಕಾಮಗಾರಿ ನಡೆಸಲಾಗಿದೆ. ಮನೆ ನಿರ್ಮಿಸುತ್ತಿರುವ ನಿವೇಶನದಾರರಿಗೆ ಕೊಳಚೆ ನೀರು ವಿಲೇವಾರಿಗೆ ತಾತ್ಕಾಲಿಕವಾಗಿ ಶೌಚದ ಗುಂಡಿ ತಾವೇ ನಿರ್ಮಿಸಿಕೊಳ್ಳುವಂತೆ ಮಾಲೀಕರಿಗೆ ಮೌಖಿಕವಾಗಿ ಬಿಡಿಎ ಸಿಬ್ಬಂದಿಯೇ ಮನವಿ ಮಾಡುತ್ತಿದ್ದಾರೆ. ಇದು ಹಸಿರು ಪೀಠದ ಆದೇಶದ ಉಲ್ಲಂಘನೆಯಾಗಿದೆ' ಎಂದು ವೇದಿಕೆ ಪದಾಧಿಕಾರಿಯೊಬ್ಬರು ಹೇಳಿದ್ದಾರೆ.

'ಕೊಳವೆಬಾವಿ ನೀರನ್ನೇ ಬಳಸಿಕೊಂಡು ಹಲವರು ಮನೆ ನಿರ್ಮಿಸುತ್ತಿದ್ದಾರೆ. ಕೆಲವು ಕೊಳವೆಬಾವಿಗಳು ನೀರಿಲ್ಲದೇ ಬತ್ತಿ ಹೋಗಿದ್ದು, ಸಮಸ್ಯೆಯಾಗಿದೆ. ಬಡಾವಣೆಯ ಬಹುತೇಕ ಭಾಗವು ಕತ್ತಲಿನಲ್ಲಿದೆ. ವಿದ್ಯುತ್ ಸಂಪರ್ಕಕ್ಕೂ ತಿಂಗಳುಗಟ್ಟಲೆ ಅಲೆಯಬೇಕಾಗಿದೆ' ಎಂದು ನೋವು ತೋಡಿಕೊಂಡಿದ್ದಾರೆ.

ಆರು ತಿಂಗಳಲ್ಲಿ ಆನ್‌ಲೈನ್ ಅನುಮೋದನೆ

'ಹಂಚಿಕೆದಾರರು ತಮ್ಮ ನಿವೇಶನಗಳಲ್ಲಿ ಮನೆ ಕಟ್ಟಲು ಅನುಮತಿ ಪಡೆಯಲು ಸದ್ಯ ಪರದಾಡುವ ಸ್ಥಿತಿಯಿದೆ. ಸಮಸ್ಯೆ ನಿವಾರಿಸಲು ಆನ್‌ಲೈನ್ ಮೂಲಕವೇ ಅನುಮತಿ ಪಡೆಯುವ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಆರು ತಿಂಗಳಲ್ಲಿ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ' ಎಂದು ಬಿಡಿಎ ಮೂಲಗಳು ತಿಳಿಸಿವೆ.

ಪಾಲುದಾರಿಕೆಯಲ್ಲಿ ಅಪಾರ್ಟ್‌ಮೆಂಟ್: ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ಜಮೀನಿನಲ್ಲಿ ಖಾಸಗಿ ಸಂಸ್ಥೆಗಳ ಪಾಲುದಾರಿಕೆಯೊಂದಿಗೆ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲು ಚಿಂತನೆ ನಡೆಸಿದೆ.

ನಗರದ ವಿವಿಧ ಭಾಗಗಳಲ್ಲಿ ₹ 1,000 ಕೋಟಿಗೂ ಅಧಿಕ ವೆಚ್ಚದಲ್ಲಿ ನಿರ್ಮಿಸಲಾದ ಬಿಡಿಎ ಫ್ಲಾಟ್‌ಗಳಲ್ಲಿ ಸುಮಾರು 3,000 ಫ್ಲ್ಯಾಟ್‌ಗಳು ಮಾರಾಟವಾಗದಿರುವುದು, ಬಿಡಿಎ ಚಿಂತನೆ ನಡೆಸಲು ಕಾರಣವಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಕುರಿತು ಚರ್ಚೆಗಳಾಗಿವೆ. ರಿಯಲ್ ಎಸ್ಟೇಟ್ ಡೆವಲಪರ್‌ಗಳೊಂದಿಗೆ ಜಂಟಿ ಉದ್ಯಮಕ್ಕೆ ಪ್ರವೇಶಿಸುವ ಪರಿಕಲ್ಪನೆಯನ್ನು ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಗರದಾದ್ಯಂತ ಬಿಡಿಎ ಸಾಕಷ್ಟು ಖಾಲಿ ಭೂಮಿ ಹೊಂದಿರುವುದರಿಂದ, ಖಾಸಗಿ ಡೆವಲಪರ್‌ಗಳ ಪಾಲುದಾರಿಕೆಯಲ್ಲಿ ಕೈಗೆಟುಕುವ ದರದಲ್ಲಿ ಫ್ಲ್ಯಾಟ್ ಗಳನ್ನು ನಿರ್ಮಿಸುವುದು ಉತ್ತಮ. ಬಿಡಿಎ ಭೂಮಿ ಒದಗಿಸುವುದು ಬಿಟ್ಟು ಹೂಡಿಕೆ ಮಾಡುವುದಿಲ್ಲ. ಖಾಸಗಿಯವರು ಫ್ಲ್ಯಾಟ್ ನಿರ್ಮಿಸಿದ ಬಳಿಕ ನಿರ್ದಿಷ್ಟ ಪ್ರಮಾಣದ ಆದಾಯ ಅಥವಾ ಮಾರಾಟ ಮಾಡಬಹುದಾದ ಫ್ಲ್ಯಾಟ್‌ಗಳು ಬಿಡಿಎಗೆ ಲಭ್ಯವಾಗಲಿದೆ ಎಂದು ಅಧಿಕಾರಿಗಳು ವಿವರಿಸಿದರು.

ಅಂತಹ ಪ್ರಸ್ತಾವ ಚರ್ಚೆಗೆ ಬಂದಿರುವುದು ನಿಜ. ಆನಂತರ ಈ ಬಗ್ಗೆ ಹೆಚ್ಚಿನ ಸಭೆಗಳು ನಡೆದಿಲ್ಲ. ಉತ್ತಮ ಸೌಕರ್ಯಗಳನ್ನು ಒದಗಿಸಿ ಫ್ಲ್ಯಾಟ್‌ಗಳನ್ನು ಬಿಡಿಎಯಿಂದ ನಿರ್ಮಿಸಲಾಗಿತ್ತು. ಆದರೆ, ಅದಕ್ಕೆ ಉತ್ತಮ ಮಾರುಕಟ್ಟೆ ಕಂಡುಕೊಳ್ಳಲು ಸಾಧ್ಯವಾಗದ ಕಾರಣ, ಫ್ಲ್ಯಾಟ್‌ಗಳು ಮಾರಾಟವಾಗದೇ ಉಳಿದಿವೆ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭೂಮಾಲೀಕರೊಂದಿಗೆ ಇದೇ ಮಾದರಿಯಲ್ಲಿ ಫ್ಲ್ಯಾಟ್‌ಗಳನ್ನು ನಿರ್ಮಿಸಿ ಯಶಸ್ವಿಯಾಗಿರುವ ಡೆವಲಪರ್‌ಗಳು ಬಿಡಿಎ ಪ್ರಸ್ತಾವವನ್ನು ಸ್ವಾಗತಿಸಿದ್ದಾರೆ. 'ನಿರ್ಮಿಸುವ ಫ್ಲ್ಯಾಟ್‌ಗಳಲ್ಲಿ ಶೇ 28ರಿಂದ ಶೇ 50ರವರೆಗೆ ಜಮೀನು ಮಾಲೀಕರಿಗೆ ನೀಡುವ ಒಪ್ಪಂದದಲ್ಲಿ ಈಗಾಗಲೇ ಹಲವು ಕಡೆಗಳಲ್ಲಿ ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗಿದೆ. ಇದೇ ಮಾದರಿಯಲ್ಲಿ ಫ್ಲ್ಯಾಟ್ ಹಂಚಿಕೆ ಅಥವಾ ಆದಾಯ ಹಂಚಿಕೆಯ ಬಗ್ಗೆ ಬಿಡಿಎಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು' ಎಂದು ಪ್ರಮುಖ ಬಿಲ್ಡರ್ ಒಬ್ಬರು ತಿಳಿಸಿದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಪೆಟ್ರೋಲ್ ಹಾಕುವಾಗ ಬೆಂಕಿ: ಸಾವು

ಕುಣಿಗಲ್: ಯಡೆಯೂರು ಹೋಬಳಿಯ ಕಟ್ಟಿಗೇಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಮೊಂಬತ್ತಿ ಬೆಳಕಿನಲ್ಲಿ ಬೈಕ್‌ಗೆ ಪೆಟ್ರೋಲ್ ಹಾಕುವಾಗ ಬೆಂಕಿ ಹೊತ್ತಿಕೊಂಡು ತೀವ್ರವಾಗಿ ಗಾಯಗೊಂಡಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಸೌಂದರ್ಯ (16) ಭಾನುವಾರ ಮೃತಪಟ್ಟಿದ್ದಾರೆ.

ವಿದ್ಯುತ್ ಸಂಪರ್ಕ ಇಲ್ಲದ ಕಾರಣ ಶುಕ್ರವಾರ ರಾತ್ರಿ ಮನೆಯಲ್ಲಿದ್ದ ಅಂಗಡಿಯಲ್ಲಿ ಮೊಂಬತ್ತಿ ಹಚ್ಚಿ ಇಡಲಾಗಿತ್ತು. ಅದರ ಬೆಳಕಿನಲ್ಲಿ ಸೌಂದರ್ಯ ಬೈಕ್ ಟ್ಯಾಂಕ್‌ಗೆ ಬಾಟಲ್‌ನಿಂದ ಪೆಟ್ರೋಲ್ ಹಾಕುವಾಗ ಆಕಸ್ಮಿಕವಾಗಿ ಕೈ ಜಾರಿ ಮೊಂಬತ್ತಿಯಿಂದ ಬೆಂಕಿ ಹತ್ತಿಕೊಂಡಿತು. ಕ್ಷಣ ಮಾತ್ರದಲ್ಲಿ ಅಂಗಡಿಗೆ ವ್ಯಾಪಿಸಿತು. ಅಂಗಡಿಯಲ್ಲಿದ್ದ ಸಾಮಗ್ರಿಗಳು ಸುಟ್ಟು ಭಸ್ಮವಾಗಿದ್ದು, ಸೌಂದರ್ಯ ತೀವ್ರವಾಗಿ ಗಾಯಗೊಂಡಿದ್ದಳು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಶಿರಸಂಗಿಯಲ್ಲಿ ಭಾನುವಾರ ನಡೆದ ವಿಶ್ವಕರ್ಮ ಪೂಜಾ ಮಹೋತ್ಸವ ಸಮಾರಂಭದಲ್ಲಿ ಬೆಂಗಳೂರಿನ ಲೋಹ ಶಿಲ್ಪಿ ಬಿ.ಹೊನ್ನಪ್ಪ ಆಚಾರ್ಯ ಅವರಿಗೆ 'ಶ್ರೀ ಕಾಳಿ' ಪ್ರಶಸ್ತಿ ಪ್ರದಾನ ಮಾಡಲಾಯಿತು

'ವಿಶ್ವಕರ್ಮರ ಕೊಡುಗೆ ಅಪಾರ'

ಪ್ರಜಾವಾಣಿ ವಾರ್ತೆ

ಶಿರಸಂಗಿ (ಬೆಳಗಾವಿ ಜಿಲ್ಲೆ): 'ಚಿನ್ನ, ಬೆಳ್ಳಿ, ಕಬ್ಬಿನ, ಕಟ್ಟಿಗೆ ಹಾಗೂ ಶಿಲಾ ಶಿಲ್ಪಗಳ ಮೂಲಕ ಜಗದ ಮನುಕುಲಕ್ಕೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ' ಎಂದು ಶಾಸಕ ಅಶೋಕ ಪಟ್ಟಣ ಹೇಳಿದರು.

ಸವದತ್ತಿ ತಾಲ್ಲೂಕಿನ ಶಿರಸಂಗಿಯಲ್ಲಿ ಮೂರು ದಿನಗಳ ಕಾಲ ಆಯೋಜಿಸಿದ 23ನೇ ವಿಶ್ವಕರ್ಮ ಪೂಜಾ ಮಹೋತ್ಸವ, ರಾಜ್ಯಮಟ್ಟದ ಕಲಾ ಪ್ರದರ್ಶನ, ಪ್ರತಿಭಾ ಪುರಸ್ಕಾರ, ರಾಷ್ಟ್ರಮಟ್ಟದ ಶ್ರೀಕಾಳಿ ಪ್ರಶಸ್ತಿ, ಶ್ರೀ ವಿಶ್ವಕರ್ಮ ಪ್ರಶಸ್ತಿ ಪ್ರದಾನ ಹಾಗೂ ಶ್ರೀ ಶತಚಂಡಿಕಾ ಮಹಾಯಾಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ಅವರು, 'ವಿಧಾನಸೌಧಕ್ಕೆ ಸಿಂಹದ ಕಳಶ ಇಟ್ಟವರೆ ವಿಶ್ವಕರ್ಮರು. ಅವರ ಶಿಲ್ಪಕಲೆಯಿಂದಾಗಿ ದೇಶ ಶ್ರೀಮಂತಗೊಂಡಿದೆ' ಎಂದರು.

ರಾಜ್ಯದ ವಿವಿಧ ಜಿಲ್ಲೆಗಳ ಕಲಾವಿದರಿಂದ ಚಿತ್ರಕಲಾ, ಶಿಲ್ಪಕಲಾ, ಲೋಹ ಶಿಲ್ಪಕಲೆ, ಕಾಷ್ಠಶಿಲ್ಪಕಲೆ ಹಾಗೂ ಛಾಯಾಚಿತ್ರ ಕಲೆಯ ಪ್ರದರ್ಶನ ಜನರ ಗಮನ ಸೆಳೆಯಿತು. ಶಿರಸಂಗಿಯ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ಅಧ್ಯಕ್ಷ ಪಿ.ಬಿ. ಬಡಿಗೇರ ಭಾಗವಹಿಸಿದ್ದರು.

ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಮತ

'ಅಧಿಕಾರವನ್ನು ಶಾಸಕರಿಂದ ವಿಕೇಂದ್ರೀಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಅಧಿಕಾರ ವಿಕೇಂದ್ರೀಕರಿಸಿ, ಶಾಸಕರು ತಾವು ಚಲಾಯಿಸುತ್ತಿರುವ ಅಧಿಕಾರವನ್ನು ಪಂಚಾಯಿತಿಗಳಿಗೆ ನೀಡಬೇಕು. ಆದರೆ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಇದು ಸಾಧ್ಯವಾಗುತ್ತಿಲ್ಲ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಮತ ವ್ಯಕ್ತಪಡಿಸಿದರು.

ಸಂಪೂರ್ಣ ಸ್ವರಾಜ್ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶಂಕರ ಕೆ. ಪ್ರಸಾದ್ ಅವರ '21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ' ಮತ್ತು 'ರಿಬೂಟಿಂಗ್ ಡೆಮಾಕ್ರಸಿ ಇನ್ ಗ್ರಾಮ್ ಪಂಚಾಯತ್ಸ್' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಲು ಅಧಿಕಾರದ ವಿಕೇಂದ್ರೀಕರಣ ಆಗಬೇಕು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿದ ಬಿ.ಕೆ. ಚಂದ್ರಶೇಖರ್ (ಎಡದಿಂದ ಎರಡನೆಯವರು) ಅವರು ಶಂಕರ ಕೆ. ಪ್ರಸಾದ್ (ಬಲಗಡೆಯವರು) ಅವರಿಗೆ ಶುಭಹಾರೈಸಿದರು. (ಎಡದಿಂದ) ಚಾಣಕ್ಯ ವಿಶ್ವವಿದ್ಯಾಲದ ಸಹಾಯಕ ಪ್ರಾಧ್ಯಾಪಕ ಪ್ರೊ. ಸದಾನಂದ ಜಾನೆಕೆರೆ, ಬಿ.ಎಲ್. ಶಂಕರ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಲೇಖಕ ಶಂಕರ ಕೆ. ಪ್ರಸಾದ್, 'ಸೀಮಾತೀತ ತಂತ್ರಜ್ಞಾನಗಳನ್ನು ಬಳಸಿಕೊಂಡು, ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಮೂಲಕ ಗ್ರಾಮ ಪಂಚಾಯಿತಿಗಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು. ಈ ಮೂಲಕ ಆತ್ಮನಿರ್ಭರ ಗ್ರಾಮ ಪಂಚಾಯಿತಿಗಳಾಗಬೇಕು' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: '21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ'
ಪುಟಗಳು: 385
ಬೆಲೆ: ₹ 495
ಪುಸ್ತಕ: 'ರಿಬೂಟಿಂಗ್ ಡೆಮಾಕ್ರಸಿ ಇನ್ ಗ್ರಾಮ್ ಪಂಚಾಯತ್ಸ್'
ಪುಟಗಳು: 467
ಬೆಲೆ: ₹ 695
ಎರಡೂ ಪುಸ್ತಕಗಳ ಲೇಖಕ: ಶಂಕರ ಕೆ. ಪ್ರಸಾದ್
ಪ್ರಕಾಶನ: ಸಂಪೂರ್ಣ ಸ್ವರಾಜ್ ಫೌಂಡೇಷನ್

'ಬೆಂಗಳೂರು ಕೊಳೆಗೇರಿಯಾಗಲಿದೆ'

'ನಗರ ಪ್ರದೇಶದವರಿಗೂ ಗಿಡ–ಮರ ಉಳಿಸಿ, ಬೆಳೆಸುವ ಜವಾಬ್ದಾರಿ ಇರಬೇಕು. ಸಾವಿರಾರು ಎಕರೆ ಭೂಮಿ ಪಡೆದಿರುವ ಐಟಿ–ಬಿಟಿ ಕಂಪನಿಗಳು ಶೇ 10ರಷ್ಟು ಭೂಮಿಯಲ್ಲಿಯೂ ಗಿಡಗಳನ್ನು ಬೆಳೆಸಿಲ್ಲ. ಹೀಗೆ ಆದರೆ ಇಲ್ಲಿಯವರು ಶುದ್ಧ ಗಾಳಿಗೆ ಎಲ್ಲಿಗೆ ಹೋಗಬೇಕು? ಬೆಂಗಳೂರನ್ನು ಇದೇ ರೀತಿ ಬೆಳೆಸುತ್ತಾ ರಾಮನಗರ, ತುಮಕೂರನ್ನೂ ಸೇರಿಸಿದರೆ ನಗರ ಕೊಳೆಗೇರಿಯಾಗಲಿದೆ' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಹೇಳಿದರು.

1. ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ನಟ ಶಿವರಾಜ್ ಕುಮಾರ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಮತ್ತು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್ ಪಾಲ್ಗೊಂಡಿದ್ದರು 2. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರಗಳು

ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ • 26 ಪಂಗಡಗಳ ಬೃಹತ್ ಜಾಗೃತ ಸಮಾವೇಶ

ಬೇಡಿಕೆ ಈಡೇರಿಕೆಗೆ ಈಡಿಗರ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಂದಿ, ಸಾರಾಯಿ ನಿಷೇಧದ ಬಳಿಕ ಪರ್ಯಾಯ ಪರಿಹಾರ ಕಾಣದೇ ಹಿಂದುಳಿದಿರುವ ಈಡಿಗ ಮತ್ತು 25 ಉಪ ಪಂಗಡಗಳು ಭಾನುವಾರ ಅರಮನೆ ಮೈದಾನದಲ್ಲಿ ಶಕ್ತಿ ಪ್ರದರ್ಶಿಸಿದವು. ರಾಜ್ಯದಲ್ಲಿ 50 ಲಕ್ಷ ಜನಸಂಖ್ಯೆ ಇರುವ ಈ ಸಮುದಾಯಗಳ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದವು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವದ ಸಂಭ್ರಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಬೃಹತ್ ಜಾಗೃತಿ ಸಮಾವೇಶದಲ್ಲಿ ಲಕ್ಷಕ್ಕೂ ಅಧಿಕ ಜನರು ಭಾಗಿಯಾಗಿದ್ದರು. ಆರ್ಯ ಈಡಿಗ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ, ಪ್ರಧಾನ ಕಾರ್ಯದರ್ಶಿ ಎಚ್.ಟಿ. ಮೋಹನ್‌ದಾಸ್, ಸಮುದಾಯದ ಮುಖಂಡರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

ಬ್ರಹ್ಮಶ್ರೀ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ ₹ 500 ಕೋಟಿ ಅನುದಾನ ನೀಡಬೇಕು. ಬೆಂಗಳೂರಿನ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ಸಮುದಾಯ ಭವನ ನಿರ್ಮಿಸಲು ₹ 10 ಕೋಟಿ ಅನುದಾನ ಒದಗಿಸಬೇಕು. ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾಸಂಸ್ಥೆ, ವಿದ್ಯಾರ್ಥಿನಿಲಯ ಆರಂಭಿಸಲು ನಿವೇಶನ ಒದಗಿಸಬೇಕು. ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ತರಬೇತಿ ಕೇಂದ್ರ, ನಾರಾಯಣ ಗುರು ಮಠ, ಗ್ರಂಥಾಲಯ, ಸಂಶೋಧನಾ ಕೇಂದ್ರಗಳನ್ನು ನಿರ್ಮಿಸಲು ಸೋಲೂರಿನಲ್ಲಿ 20 ಎಕರೆ ಗೋಮಾಳ ಜಮೀನು ಮಂಜೂರು ಮಾಡಬೇಕು. ಶರಾವತಿ ಮುಳುಗಡೆ ಸಂತ್ರಸ್ತ ರೈತರಿಗೆ ಮತ್ತು ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ಸಿಗಂದೂರು ದೇವಸ್ಥಾನದ 15 ಎಕರೆ ಜಾಗದ ಹಕ್ಕುಪತ್ರ ನೀಡಬೇಕು. ಕಾಂತರಾಜ ವರದಿಯನ್ನು ಜಾರಿಗೊಳಿಸಬೇಕು. ಎಸ್‌ಎನ್‌ಡಿಪಿ ಯೋಗಂ ಬೆಂಗಳೂರು ಯೂನಿಯನ್‌ನ ಜಮೀನಿನಲ್ಲಿರುವ ಶಾಲೆಯ ಅಭಿವೃದ್ಧಿಗೆ ₹10 ಕೋಟಿ ನೀಡಬೇಕು. ಬನ್ನೇರುಘಟ್ಟ ರಸ್ತೆಯ ಮೆಟ್ರೊ ನಿಲ್ದಾಣಕ್ಕೆ ನಾರಾಯಣ ಗುರುಗಳ ಹೆಸರಿಡಬೇಕು. ಶರಣ ಹೆಂಡದ ಮಾರಯ್ಯ ತಪಸ್ಸು ಮಾಡಿದ ಗವಿಯನ್ನು ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಬೇಕು. ಸಮಾಜದವರನ್ನು ಕೆಪಿಎಸ್‌ಸಿ ಸದಸ್ಯರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸೋಲೂರು ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರು ರೇಣುಕಾನಂದ ಸ್ವಾಮೀಜಿ, ಕಾರ್ತಿಕೇಯ ಪೀಠದ ಯೋಗೇಂದ್ರ ಅವಧೂತ, ನಿಪ್ಪಾಣಿ ಅರುಣಾನಂದ ಸ್ವಾಮೀಜಿ, ಸಿಗಂದೂರು ಕ್ಷೇತ್ರದ ಧರ್ಮದರ್ಶಿ ರಾಮಪ್ಪ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಮಾಜಿ ಶಾಸಕ ವಸಂತ ಬಂಗೇರ, ಶಾಸಕರಾದ ಬೇಳೂರು ಗೋಪಾಲಕೃಷ್ಣ, ಎಚ್.ಆರ್. ಗವಿಯಪ್ಪ, ಕೆ. ಹರೀಶ್ ಕುಮಾರ್, ಮುಖಂಡರಾದ ವಿನಯಕುಮಾರ್ ಸೊರಕೆ, ಎಚ್. ಹಾಲಪ್ಪ ಹರತಾಳು, ಮಾಲೀಕಯ್ಯ ಗುತ್ತೇದಾರ್ ಸೇರಿದಂತೆ ಈಡಿಗರ ಸಂಘದ ಪದಾಧಿಕಾರಿಗಳು, ವಿವಿಧ ಪಂಗಡಗಳ ಮುಖಂಡರು ಸಮಾವೇಶಕ್ಕೆ ಸಾಕ್ಷಿಯಾದರು.

ಅಧಿವೇಶನದ ಬಳಿಕ ಬೇಡಿಕೆಗಳ ಚರ್ಚೆ

ಈಡಿಗರ ಸಂಘವು ಹಲವು ಬೇಡಿಕೆಗಳನ್ನು ಇಟ್ಟಿದೆ. ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವುದರಿಂದ ಈಗ ಯಾವುದೇ ಭರವಸೆ ನೀಡಲು ಸಾಧ್ಯವಿಲ್ಲ. ಅಧಿವೇಶನ ಮುಕ್ತಾಯವಾದ ಬಳಿಕ ಸಮುದಾಯದ ಮುಖಂಡರ ಜೊತೆಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಎಲ್ಲರಿಗೂ ಶಿಕ್ಷಣ ದೊರೆಯುತ್ತಿದ್ದರೂ ವೈಚಾರಿಕವಾದ, ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಹಿಂದೆ ಶೂದ್ರರಿಗೆ, ದಲಿತರಿಗೆ ಶಿಕ್ಷಣವನ್ನು ನಿರಾಕರಿಸಲಾಗಿತ್ತು. ಬ್ರಿಟಿಷರು ಬಂದ ಬಳಿಕ ಅವರಿಗೆ ಕಾರಕೂನರು ಅಗತ್ಯ ಇದ್ದಿದ್ದರಿಂದ ಶೂದ್ರರಿಗೆ ಶಿಕ್ಷಣ ನೀಡಲು ಆರಂಭಿಸಿದರು. ಈಗ ಗುಣಮಟ್ಟದ ಪಠ್ಯವನ್ನು ನೀಡಬೇಕಿದೆ ಎಂದು ತಿಳಿಸಿದರು.

ಹರಿಪ್ರಸಾದ್ ಗೈರು

ವಿಧಾನ ಪರಿಷತ್ ಸದಸ್ಯ, ಸಮಾಜದ ಮುಖಂಡ ಬಿ.ಕೆ. ಹರಿಪ್ರಸಾದ್ ಅವರು ಸಮಾವೇಶಕ್ಕೆ ಗೈರು ಹಾಜರಾಗಿದ್ದರು. ಅಲ್ಲದೇ ವಿ. ಸುನೀಲ್ ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಉಮಾನಾಥ ಕೋಟ್ಯಾನ್ ಸಹಿತ ಬಿಜೆಪಿಯಲ್ಲಿರುವ ಸಮುದಾಯದ ಬಹುತೇಕ ಶಾಸಕರು, ಮುಖಂಡರು ಗೈರಾಗಿದ್ದರು.

ನಾರಾಯಣ ಗುರು ಪಠ್ಯ ಅಗತ್ಯ: ಮಧು ಬಂಗಾರಪ್ಪ

ನಾರಾಯಣ ಗುರುಗಳ ವಿಚಾರಧಾರೆಗಳನ್ನು ಮಕ್ಕಳಿಗೆ ತಿಳಿಸಲು ಪಠ್ಯ ಪುಸ್ತಕದಲ್ಲಿ ಗುರುಗಳ ಪಠ್ಯ ಅಳವಡಿಸುವುದು ಅಗತ್ಯ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಶೇಂದಿ, ಸಾರಾಯಿ ನಿಷೇಧ ಮಾಡಿದ ಮೇಲೆ ಕರಾವಳಿ, ಮಲೆನಾಡಿನಲ್ಲಿರುವ ಈಡಿಗ–ಬಿಲ್ಲವ ಸಮುದಾಯದ ಜನರು ಹೇಗೋ ಜೀವನ ನಡೆಸುತ್ತಿದ್ದಾರೆ. ಅವರಲ್ಲಿ ಸ್ವಲ್ಪ ಭೂಮಿ ಇದ್ದಿದ್ದರಿಂದ ಇದು ಸಾಧ್ಯವಾಗಿದೆ. ಆದರೆ, ಕಲ್ಯಾಣ ಕರ್ನಾಟಕದಲ್ಲಿ ಈ ಸಮುದಾಯದ ಜನರು ಬೀದಿಗೆ ಬಿದ್ದಿದ್ದಾರೆ ಎಂದು ಅವರು ತಿಳಿಸಿದರು.

ಕರ್ನಾಟಕಕ್ಕೆ ಬೆಳಕು ನೀಡಲು ಭೂಮಿ ಕಳೆದುಕೊಂಡ ಶರಾವತಿ ಸಂತ್ರಸ್ತರು ಕತ್ತಲೆಯಲ್ಲಿದ್ದಾರೆ. ಅವರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಹಕ್ಕುಪತ್ರ ನೀಡಬೇಕು ಎಂದು ಆಗ್ರಹಿಸಿದರು.

ರಾಜಕೀಯಕ್ಕೆ ಬರಲು ಶಿವರಾಜ್‌ಕುಮಾರ್‌ಗೆ ಆಹ್ವಾನ

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಶಿವರಾಜ್‌ಕುಮಾರ್ ತಯಾರಾಗಬೇಕು. ನಟರಾಗಲು ಎಲ್ಲರಿಗೂ ಅವಕಾಶಗಳು ಇರುತ್ತವೆ. ಎಲ್ಲರೂ ಸಂಸದರಾಗಲು ಸಾಧ್ಯವಿಲ್ಲ. ಶಿವರಾಜ್‌ಕುಮಾರ್ ಅವರ ಮನೆ ಬಾಗಿಲಿಗೆ ಅವಕಾಶ ಬಂದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದರು.

‘ನನಗೆ ನಟನೆ ಬಳುವಳಿಯಾಗಿ ಬಂದಿದೆ, ರಾಜಕೀಯವಲ್ಲ. ನನ್ನ ಪತ್ನಿ ಗೀತಾ, ಎಸ್. ಬಂಗಾರಪ್ಪ ಅವರ ಮಗಳು. ರಾಜಕೀಯ ಕುಟುಂಬದದಿಂದ ಬಂದಿರುವ ಅವರಿಗೆ ರಾಜಕೀಯದ ಬಗ್ಗೆ ಆಸಕ್ತಿ ಇದೆ. ರಾಜಕೀಯವನ್ನು ಅವರಿಗೆ ಬಿಟ್ಟಿದ್ದೇನೆ’ ಎಂದು ನಟ ಶಿವರಾಜ್ ಕುಮಾರ್ ಪ್ರತಿಕ್ರಿಯಿಸಿದರು.

‘ಮುಖ್ಯಮಂತ್ರಿಯಿಂದ ಈಡಿಗ ಸಮಾಜ ಒಡೆಯುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಲ್ಲಿ ಈಡಿಗ ಸಮುದಾಯದವರನ್ನು ವ್ಯವಸ್ಥಿತವಾಗಿ ಒಡೆಯುವ ಹುನ್ನಾರಕ್ಕೆ ಕೈಹಾಕಿದ್ದಾರೆ’ ಎಂದು ಈಡಿಗ ಸಮಾಜದ ನಾರಾಯಣ ಗುರುಗಳ ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಆರೋಪಿಸಿದರು.

ನಗರದ ಬಸವೇಶ್ವರ ಪ್ರತಿಮೆ ಬಳಿ ಭಾನುವಾರ ಈಡಿಗ, ಬಿಲ್ಲವ, ನಾಮಧಾರಿ ಸೇರಿ ಹಿಂದುಳಿದ ಮತ್ತು ಅತಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಹಕ್ಕುಗಳನ್ನು ಒದಗಿಸಲು ಆಗ್ರಹಿಸಿ ನಡೆಸಿದ ಒಂದು ದಿನದ ಉಪವಾಸ ಸತ್ಯಾಗ್ರಹದಲ್ಲಿ ಮಾತನಾಡಿದ ಅವರು ‘ಸಿದ್ದರಾಮಯ್ಯ ಈಡಿಗ ಸಮಾಜದ ರಾಜಕೀಯ ನಾಯಕರನ್ನು ನಮ್ಮವರಿಂದಲೇ ಮೂಲೆಗುಂಪು ಮಾಡುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದರು.

‘ಬಿ.ಕೆ. ಹರಿಪ್ರಸಾದ್, ಎಚ್. ಆರ್. ಶ್ರೀನಾಥ್ ಸೇರಿ ಹಲವರು ಕಾಂಗ್ರೆಸ್‌ಗೆ 40 ವರ್ಷಗಳಿಂದ ದುಡಿಯುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ಪಕ್ಷದಲ್ಲಿ ಸ್ಥಾನಮಾನ ನೀಡದೆ ಈಡಿಗ ಸಮಾಜದ ನಾಯಕರನ್ನು ಮುಗಿಸುವ ಹುನ್ನಾರ ನಡೆಸಿದ್ದಾರೆ’ ಎಂದರು.

‘ಹರಿಪ್ರಸಾದ್ ಅವರನ್ನು ರಾಜಕೀಯವಾಗಿ ಮುಗಿಸಬೇಕೆಂಬ ದುರುದ್ದೇಶದಿಂದ ಬೆಂಗಳೂರಿನಲ್ಲಿ ಈಡಿಗರ ಸಮಾವೇಶ ನಡೆಸಲಾಗಿದೆ. ಸಮಾವೇಶಕ್ಕೆ ನಮ್ಮ ಅಭ್ಯಂತರವಿಲ್ಲ, ಆದರೆ, ನಮ್ಮದೇ ಸಮುದಾಯದ ಜನರನ್ನು ಬಳಸಿಕೊಂಡು ಸಮಾಜ ಒಡೆಯುವುದನ್ನು ಖಂಡಿತವಾಗಿಯೂ ಒಪ್ಪುವುದಿಲ್ಲ. ಏನೇ ಆದರೂ ನಾವೆಲ್ಲರೂ ಒಂದೇ’ ಎಂದರು.

ಆಶಯ ಈಡೇರದಿದ್ದರೆ ಪ್ರಶ್ನಿಸುತ್ತೇನೆ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಾವು ಅಧಿಕಾರಕ್ಕೆ ಬಂದಿರುವ ಆಶಯ ಈಡೇರಬೇಕು. ಈಡೇರದಿದ್ದರೆ ಪಕ್ಷದ ವೇದಿಕೆಯಲ್ಲಿ ಅದನ್ನು ಪ್ರಶ್ನೆ ಮಾಡುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಧಿಕಾರಕ್ಕೆ ಬಂದ ನಂತರ ಸಿದ್ದರಾಮಯ್ಯ ಅವರು ನಡೆದುಕೊಳ್ಳುವ ರೀತಿಯನ್ನು ಪ್ರಶ್ನೆ ಮಾಡಿದ್ದೇನೆ. ಅಗತ್ಯಬಿದ್ದರೆ ಪಕ್ಷದ ವೇದಿಕೆ, ಚೌಕಟ್ಟಿನಲ್ಲಿ ಇನ್ನು ಮುಂದೆಯೂ ಪ್ರಶ್ನೆ ಮಾಡುತ್ತೇನೆ. ರಾಜ್ಯ ಸರ್ಕಾರದ ‘ಹನಿಮೂನ್’ ಅವಧಿ ಮುಗಿದಿದ್ದು, ಮುಂದೆ ಏನು ಆಗುತ್ತದೆ ನೋಡೋಣ’ ಎಂದರು.

ಸಿದ್ದರಾಮಯ್ಯ ಅವರು 2006ರಲ್ಲಿ ಪಕ್ಷಕ್ಕೆ ಬಂದರು. ಅವರು ಶಾಸಕಾಂಗ ಪಕ್ಷದ ನಾಯಕರಾಗಿದ್ದಾಗ ನಾನು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕನಾಗಿದ್ದೆ. ಹೀಗಾಗಿ ಒಗ್ಗಟ್ಟು ಪ್ರದರ್ಶನ ಮಾಡಬೇಕಾಗಿತ್ತು. ನಮ್ಮ ಸಂಬಂಧ ಚೆನ್ನಾಗಿ ಏನೂ ಇರಲಿಲ್ಲ’ ಎಂದು ಹೇಳಿದರು.

‘ನನ್ನ ರಾಜಕೀಯ ಜೀವನದಲ್ಲಿ ಅಧಿಕಾರದ ಹಿಂದೆ ಹೋಗಿಲ್ಲ. ದುರ್ಬಲ ವರ್ಗದವರಿಗೆ ಸಹಾಯ ಮಾಡಿಕೊಂಡು ಬಂದಿದ್ದೇನೆ. ಸಾಮಾಜಿಕ ನ್ಯಾಯಕ್ಕಾಗಿ ಏನು ಮಾಡಬೇಕು ಎಂಬುದು ನನಗೆ ಗೊತ್ತಿದೆ. ಕುತಂತ್ರಕ್ಕೆ ಬಗ್ಗುವುದಿಲ್ಲ’ ಎಂದರು.

ಎಲ್ಲ ಸ್ವಾಮೀಜಿಗಳನ್ನು ಸೇರಿಸಿ ಸಮಾವೇಶ ಮಾಡಿ: ‘ಕೆ.ಎನ್.ಗುರುಸ್ವಾಮಿ, ಕೆ.ವೆಂಕಟಸ್ವಾಮಿ, ಕೆ.ಎ.ನೆಟ್ಟಕಲ್ಲಪ್ಪ ಅವರಂತಹ ಮಹನೀಯರಿಂದ ಆರ್ಯ ಈಡಿಗರ ಸಂಘದ ಸ್ಥಾಪನೆಯಾಗಿದೆ. ಜೆ.ಪಿ.ನಾರಾಯಣಸ್ವಾಮಿ ಅವರ ನಂತರ ಸಂಘದವರು ಸಮಾಜಕ್ಕಾಗಿ ಏನು ಮಾಡಿದ್ದಾರೆ? ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಈ ಹಿಂದೆ ಹಿಂದುಳಿದವರು, ಅತಿ ಹಿಂದುಳಿದ ವರ್ಗದವರ ಸಮಾವೇಶವನ್ನು ಮಾಡಲಾಗಿತ್ತು. ಸಮಾಜದಲ್ಲಿ ಒಗ್ಗಟ್ಟು ಇರಬೇಕಾದರೆ ಎಲ್ಲ ಸ್ವಾಮೀಜಿಗಳನ್ನು ಸೇರಿಸಿ ಸಮಾವೇಶ ಮಾಡಬೇಕು. ಈಡಿಗ ಸಮಾಜವನ್ನು ಯಾರು ಒಡೆದಿದ್ದಾರೆ ಎಂಬುದು ಗೊತ್ತಿದೆ. ಅವರ ಹೆಸರು ಹೇಳಲು ಬಯಸುವುದಿಲ್ಲ’ ಎಂದು ಹೇಳಿದರು.

‘ಪ್ರಣವಾನಂದ ಸ್ವಾಮೀಜಿ ಪಾದಯಾತ್ರೆ ಮಾಡಿ ಬಿಜೆಪಿ ಸರ್ಕಾರದ ಮೇಲೆ ಒತ್ತಡ ತಂದಿದ್ದರಿಂದ ನಾರಾಯಣ ಗುರು ನಿಗಮ ಸ್ಥಾಪನೆಯಾಯಿತು. ಈಗ ಅದಕ್ಕೆ ಹಣ ನೀಡಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿಲ್ಲವ ಸಮಾಜಕ್ಕೆ ಹಾಸ್ಟೆಲ್ ನಿರ್ಮಾಣಕ್ಕೆ ನೀಡಿದ್ದ ಜಾಗವನ್ನು ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್‌ಗೆ ನೀಡಲಾಗಿದೆ. ಕೋಟಿ ಚೆನ್ನಯ ಥೀಮ್ ಪಾರ್ಕ್‌ಗೆ ಅನುದಾನ ನೀಡಿಲ್ಲ’ ಎಂದು ದೂರಿದರು.

ಬಿಜೆಪಿ ನಾಯಕರ ಕೈ, ಕಾಲು ಕಟ್ಟುತ್ತಿರುವ ಪ್ರಭಾವಿ ಸಚಿವ: ಕುಮಾರಸ್ವಾಮಿ

50-60 ಶಾಸಕರ ಕರೆದೊಯ್ಯಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಹಾಸನ: ‘ತಮ್ಮ ಅಕ್ರಮಗಳಿಂದ ಪಾರಾಗಲು ಬಿಜೆಪಿ ಕೇಂದ್ರ ನಾಯಕರ ಜೊತೆ ಚೌಕಾಸಿ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಭಾವಿ ಸಚಿವರೊಬ್ಬರು, 50–60 ಶಾಸಕರನ್ನು ಕರೆದುಕೊಂಡು ಹೋಗಲು ಸಿದ್ಧವಾಗಿದ್ದಾರೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲವೂ ಸರಿ ಇಲ್ಲ. ಈ ಸರ್ಕಾರ ಯಾವಾಗ ಹೋಗುತ್ತೋ ಗೊತ್ತಿಲ್ಲ. ಪ್ರಭಾವಿ ಸಚಿವರೊಬ್ಬರು ತಮ್ಮ ಮೇಲಿರುವ ಅಕ್ರಮಗಳಿಂದ ಪಾರಾಗಲು ಹರಸಾಹಸ ಮಾಡುತ್ತಿದ್ದಾರೆ. ಕೇಂದ್ರ ಬಿಜೆಪಿ ನಾಯಕರ ಕೈ,ಕಾಲು ಕಟ್ಟುತ್ತಿದ್ದಾರೆ. 50–60 ಶಾಸಕರನ್ನು ಕರೆದುಕೊಂಡು ಬೇಲಿ ಹಾರಲು ತಯಾರಿ ನಡೆಸುತ್ತಿದ್ದಾರೆ ಎಂದು ಯಾರೋ ಮೊನ್ನೆ ನನಗೆ ಮಾಹಿತಿ ನೀಡಿದರು’ ಎಂದರು.

‘ಪ್ರಭಾವಿ ಸಚಿವರು ಯಾರು’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಸಣ್ಣಪುಟ್ಟವರು ಹೋಗಲು ಆಗುತ್ತದೆಯೇ? ದೊಡ್ಡವರು, ಅದರಲ್ಲೂ ಪ್ರಭಾವಿಗಳೇ ಈ ಸಾಹಸ ಮಾಡಲು ಸಾಧ್ಯ. ಅಯ್ಯೋ ದಯವಿಟ್ಟು ನಿಮ್ಮ ಜೊತೆ ಬಂದುಬಿಡ್ತಿನಿ. ಅಲ್ಲಿಯವರೆಗೂ ಐದಾರು ತಿಂಗಳು ರಿಲೀಫ್ ಕೊಡಿ ಅಂತ ಬೇಡಿಕೊಂಡು ಹೋಗಿದ್ದು ಗೊತ್ತು’ ಎಂದರು.

‘ಮಹಾರಾಷ್ಟ್ರದಲ್ಲಾದಂತೆ ಇಲ್ಲಿ ಯಾರು ಹುಟ್ಟಿಕೊಳ್ಳುತ್ತಾರೋ ಗೊತ್ತಿಲ್ಲ. ದೇಶದಲ್ಲಿ ಇವತ್ತಿನ ರಾಜಕಾರಣ ನೋಡಿದಾಗ ಏನು ಬೇಕಾದರೂ ನಡೆಯಬಹುದು. ಇಲ್ಲಿ ಯಾರಲ್ಲೂ ಪ್ರಾಮಾಣಿಕತೆ, ನಿಷ್ಠೆ ಉಳಿದಿಲ್ಲ. ಅವರವರ ಸ್ವಾರ್ಥಕ್ಕೆ ಏನೇನು ಬೇಕೋ ಅದನ್ನು ಮಾಡಿಕೊಂಡು ಹೋಗುತ್ತಿದ್ದಾರಷ್ಟೆ. ಇವತ್ತು ಇಲ್ಲಿ ಇರುತ್ತಾರೆ, ಅನುಕೂಲ ಆಗಬೇಕಾದರೆ ಇನ್ನೊಂದು ಕಡೆ ಹೋಗುತ್ತಾರೆ. ಇದು ಇಂದಿನ ರಾಜಕಾರಣ’ ಎಂದರು.

ಮುಖ್ಯಮಂತ್ರಿ ವಿರುದ್ಧ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಹರಿಪ್ರಸಾದ್ ಅಷ್ಟೇ ಅಲ್ಲ, ಇನ್ನೂ ಸಾಕಷ್ಟು ಜನ ಇದ್ದಾರೆ. ಒಂದೊಂದೇ ಧ್ವನಿ ಹೊರ ಬರುತ್ತವೆ. ಅಧಿಕಾರದಲ್ಲಿ ಉಳಿದು ಕೊಳ್ಳಲು ವ್ಯಾಪಾರಕ್ಕೆ ಹೋಗಿ ದ್ದಾರೆ. ಅಕ್ರಮಗಳನ್ನು ಸರಿಪಡಿಸಿಕೊಳ್ಳಲು ಹೋಗಿರುವ ಮಾಹಿತಿಯೂ ನನಗಿದೆ’ ಎಂದರು.

ಇದು ‘ಸಿಸಿ’ ಸರ್ಕಾರ: ಸಚಿವ ಪ್ರಲ್ಹಾದ ಜೋಶಿ ಆರೋಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಿ ಆರು ತಿಂಗಳಾಗಿದ್ದು, ಭ್ರಷ್ಟಾಚಾರ ನಡೆಸಲು ಪಕ್ಷದ ಮುಖಂಡರಲ್ಲಿ ಪರಸ್ಪರ ಸ್ಪರ್ಧೆ ಏರ್ಪಟ್ಟಿದೆ. ಇದು ಸಿ.ಸಿ (ಕಾಂಪಿಟೇಷನ್ ಇನ್ ಕರಪ್ಷನ್) ಸರ್ಕಾರವಾಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

‘ತಮ್ಮ ನಾಯಕತ್ವದ ವಿರುದ್ಧ ಬೆಂಗಳೂರಿನಲ್ಲಿ ಸಮಾವೇಶ ನಡೆಯುತ್ತಿದೆ ಎಂದು ಬಿ.ಕೆ. ಹರಿಪ್ರಸಾದ್ ಅವರೇ ಹೇಳಿದ್ದಾರೆ. ಸಿ.ಎಂ ಸಿದ್ದರಾಮಯ್ಯ ಅವರೇ ಷಡ್ಯಂತ್ರ ನಡೆಸುತ್ತಿದ್ದಾರೆ. ಅವರ ವಿರುದ್ಧ ಮಾತನಾಡಲು ತಾಕತ್ತು ಇಲ್ಲದೆ ಹರಿಪ್ರಸಾದ್, ಬಿಜೆಪಿಗೆ ಬಯ್ಯುತ್ತಿದ್ದಾರೆ’ ಎಂದರು.

ಬಿಜೆಪಿಯವರು ಸತ್ಯ ಹರಿಶ್ಚಂದ್ರರಾ?: ಶೆಟ್ಟರ್

ಹುಬ್ಬಳ್ಳಿ: ‘ವಿಧಾನಸಭೆ ಚುನಾವಣೆ ಪೂರ್ವ ಬಿಜೆಪಿಯನ್ನು 40 ಪರ್ಸೆಂಟ್ ಸರ್ಕಾರ ಎಂದು ಆರೋಪಿಸಲಾಗಿತ್ತು. ತಾವು ಭ್ರಷ್ಟಾಚಾರ ಮಾಡಿಲ್ಲ ಎಂದು ಸಾಬೀತು ಮಾಡಲು ಅವರಿಂದ ಸಾಧ್ಯವಾಗಿಲ್ಲ. ಈಗ ಯಾವ ನೈತಿಕತೆಯಲ್ಲಿ ಅವರು ಕಾಂಗ್ರೆಸ್‌ಗೆ ಸಿ.ಸಿ ಸರ್ಕಾರ ಎಂದು ಆರೋಪಿಸುತ್ತಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಪ್ರಶ್ನಿಸಿದರು.

‘ಬಿಜೆಪಿಯವರು ಚುನಾವಣೆ ಸಂದರ್ಭ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾರೆ. ಅದು ಎಲ್ಲಿಂದ ಬರುತ್ತದೆ? ಅವರೇನು ಸತ್ಯ ಹರಿಶ್ಚಂದ್ರರಾ? ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಅವರಿಗೆ ಯಾವುದೇ ನೈತಿಕತೆ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅತೃಪ್ತಿ ತಣಿಸಲು ಅಶೋಕ ಯತ್ನ

‘ವಿಪಕ್ಷ ನಾಯಕರು ಆಕ್ರಮಣಶಾಲಿಯಾಗಬೇಕು, ಶಾಸಕರ ಜತೆ ಚರ್ಚಿಸಬೇಕು’

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿರೋಧಪಕ್ಷದ ನಾಯಕ ಆರ್.ಅಶೋಕ ಅವರ ಮೇಲಿನ ಶಾಸಕರ ಮುನಿಸು ಎರಡನೇ ವಾರವೂ ಮುಂದುವರಿಯಲಿದೆಯೇ ಎಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿದೆ. ವಿಧಾನಸಭೆಯಲ್ಲಿ ತಮ್ಮ ಕಾರ್ಯ ವೈಖರಿ ಬಗ್ಗೆ ತಮ್ಮದೇ ಶಾಸಕರಿಂದ ತೀವ್ರ ಟೀಕೆಗೆ ಒಳಗಾಗಿದ್ದ ಅಶೋಕ ಅವರು, ಸಿಟ್ಟಿಗೆದ್ದಿರುವ ಹಲವರನ್ನು ಸಂಪರ್ಕಿಸಿ ಸಮಾಧಾನಪಡಿಸುವ ಕಸರತ್ತು ನಡೆಸಿದ್ದಾರೆ.

ಸದನದ ಒಳಗೆ ಶಾಸಕರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ, ವಿ.ಸುನಿಲ್‌ಕುಮಾರ್, ಬಸನಗೌಡ ಪಾಟೀಲ ಯತ್ನಾಳ ಅವರು ಸರ್ಕಾರದ ವಿರುದ್ಧ ಆಕ್ರಮಣಕಾರಿ ನಡೆ ತೋರಿಸುವ ಮೂಲಕ ಅಶೋಕ ಅವರನ್ನು ಪೇಚಿಗೆ ಸಿಲುಕಿಸಿದ್ದರು. ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಅಶೋಕ ಅವರಿಗಿಂತ ತಾವು ಹೆಚ್ಚು ಸಮರ್ಥರು ಎಂಬ ಸಂದೇಶವನ್ನು ಪರೋಕ್ಷವಾಗಿ ರವಾನಿಸಿದ್ದರು. ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೊಗಸಾಲೆಯಲ್ಲಿ ನೇರವಾಗಿ ಕಿಡಿ ಕಾರಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ ಅಶೋಕ ಅವರು ಸಿಟ್ಟಿಗೆದ್ದಿರುವ ಶಾಸಕರನ್ನು ಸಂಪರ್ಕಿಸಿ ಸಮಾಧಾನಪಡಿಸುವ ಪ್ರಯತ್ನವನ್ನೂ ನಡೆಸಿದ್ದಾರೆ. ಬಸನಗೌಡ ಪಾಟೀಲ ಯತ್ನಾಳ, ಸುನಿಲ್‌ಕುಮಾರ್, ಅಶ್ವತ್ಥನಾರಾಯಣ ಅವರನ್ನು ಸಂಪರ್ಕಿಸಿದ್ದಾರೆ. ‘ನಿಮ್ಮ ಕೈಬಿಡುವುದಿಲ್ಲ’ ಎಂದು ಯತ್ನಾಳ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಅಶೋಕ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದೇ ಸಮಸ್ಯೆಗೆ ಮೂಲ ಕಾರಣ. ಕಲಾಪದ ಆರಂಭಕ್ಕೂ ಮೊದಲೇ ಚರ್ಚೆ ಮಾಡಿ ಯಾವ ವಿಷಯದಲ್ಲಿ ನಮ್ಮ ಕಾರ್ಯತಂತ್ರ ಏನಾಗಿರಬೇಕು ಎಂಬುದನ್ನು ಚರ್ಚಿಸಬೇಕು. ವಿರೋಧ ಪಕ್ಷದ ನಾಯಕ ಸ್ಥಾನ ಅವರಿಗೆ ಹೊಸದು. ಹೀಗಾಗಿ ಹಿರಿಯ ಶಾಸಕರ ಜತೆ ಚರ್ಚೆ ನಡೆಸುವುದು ಅಗತ್ಯ. ಶಾಸಕರು ಧರಣಿಗೆ ಹೊರಟಾಗ, ಇವರು ಸಭಾತ್ಯಾಗ ಮಾಡೋಣ ಎನ್ನುತ್ತಾರೆ. ಇದು ಮುಜುಗರಕ್ಕೆ ಕಾರಣವಾಗುತ್ತಿದೆ’ ಎಂದು ಬಿಜೆಪಿಯ ಹಿರಿಯ ಶಾಸಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪಕ್ಷದ ಶಾಸಕರ ಹಿತವನ್ನು ರಕ್ಷಿಸುವುದರ ಜತೆಗೆ ಸರ್ಕಾರದ ವಿರುದ್ಧ ಹೆಚ್ಚು ಆಕ್ರಮಣಕಾರಿಯಾಗಿ ನಡೆದುಕೊಳ್ಳಬೇಕು. ಆಡಳಿತ ಪಕ್ಷದವರ ಬಗ್ಗೆ ಮೃದು ಧೋರಣೆಯ ಅಗತ್ಯವಿಲ್ಲ. ಅವರು ಇವೆಲ್ಲ ಲೋಪ ಸರಿಪಡಿಸಿಕೊಂಡಿದ್ದೇ ಆದರೆ ವಿರೋಧಪಕ್ಷದ ನಾಯಕರನ್ನು ಮೀರಿ ನಾವು ಹೆಜ್ಜೆ ಇಡುವ ಅವಶ್ಯಕತೆಯೇ ಉದ್ಭವಿಸುವುದಿಲ್ಲ’ ಎಂದು ಅವರು ಹೇಳಿದರು.

‘ಎರಡನೇ ವಾರದ ಕಲಾಪ ಹೆಚ್ಚು ಬಿಸಿಯೇರಲಿದೆ. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಹಲವು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲಾಗುವುದು. ಈ ಸಂದರ್ಭದಲ್ಲಿ ಒಗ್ಗಟ್ಟಿನ ನಡೆ ಅತಿ ಮುಖ್ಯ. ಮೊದಲ ವಾರ ನಾವು ನಾಲ್ಕೈದು ಶಾಸಕರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದೆವು. ಮೊದಲ ಬಾರಿ ಆಯ್ಕೆ ಆಗಿ ಬಂದ ಶಾಸಕರಿಗೆ ತಮ್ಮ ಕ್ಷೇತ್ರದ ಸಮಸ್ಯೆಗಳೆಲ್ಲವೂ ಸದನದ ಒಳಗೇ ಇತ್ಯರ್ಥ ಆಗುತ್ತದೆ ಎಂಬ ಭಾವನೆ ಇರುತ್ತದೆ. ಎಲ್ಲವೂ ಇಲ್ಲೇ ಇತ್ಯರ್ಥ ಆಗುವುದಿಲ್ಲ ಎಂಬುದು ಅರ್ಥವಾಗಲು ಸ್ವಲ್ಪ ಸಮಯಬೇಕಾಗುತ್ತದೆ’ ಎಂದರು.

ಶಾಸಕಾಂಗ ಪಕ್ಷ ಸಭೆ?: ಮಂಗಳವಾರ ಶಾಸಕಾಂಗ ಪಕ್ಷದ ಸಭೆ ನಡೆಸುವ ಬಗ್ಗೆ ಸೋಮವಾರ ತೀರ್ಮಾನ ಆಗಲಿದೆ. ಆದರೆ ಶಾಸಕರಿಗೆ ಈ ಕುರಿತು ಸ್ಪಷ್ಟ ಮಾಹಿತಿ ಲಭಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಶೀಘ್ರವೇ ಜಿಲ್ಲಾ ಪದಾಧಿಕಾರಿಗಳ ಸಭೆ

ವಿಧಾನಮಂಡಲದ ಅಧಿವೇಶನ ಮುಗಿದ ಬಳಿಕ ಬೆಂಗಳೂರಿನ ಪಕ್ಷದ ರಾಜ್ಯ ಘಟಕದ ಕಚೇರಿಯಲ್ಲಿ ಪ್ರತಿ ದಿನ ಎರಡು ಜಿಲ್ಲೆಗಳ ಪದಾಧಿಕಾರಿಗಳ ಸಭೆ ನಡೆಸಲು ಅಧ್ಯಕ್ಷ ಬಿ.ವೈ.ವಿಜಯೇಂದ್ರ ತೀರ್ಮಾನಿಸಿದ್ದಾರೆ.

ಎಲ್ಲ ಜಿಲ್ಲೆಗಳಿಗೂ ಹೊಸ ಪದಾಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದಂತೆ ಈ ಸಭೆಗಳನ್ನು ನಡೆಸಲಿದ್ದಾರೆ. ಆಕಾಂಕ್ಷಿಗಳು ಮತ್ತು ಪದಾಧಿಕಾರಿಗಳನ್ನು ಆಹ್ವಾನಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ಘಟಕಗಳಿಗೆ ಆದಷ್ಟು ಬೇಗ ಹೊಸ ಪದಾಧಿಕಾರಿಗಳ ನೇಮಕವಾಗಲಿದೆ. ಅಲ್ಲದೇ, ಲೋಕಸಭಾ ಚುನಾವಣೆ ತಯಾರಿ ಸಂಬಂಧಿಸಿದಂತೆ ಚರ್ಚೆಯೂ ನಡೆಯಲಿದೆ ಮೂಲಗಳು ಹೇಳಿವೆ.

ದಬ್ಬಳಿಕಟ್ಟೆಯಲ್ಲಿ ಅರ್ಜುನನ ಸಮಾಧಿಗೆ ಸಚಿವ ಈಶ್ವರ ಖಂಡ್ರೆ ಪುಷ್ಪನಮನ

ಉನ್ನತ ಮಟ್ಟದ ತನಿಖೆಗೆ ಸಮಿತಿ: ಖಂಡ್ರೆ

ಪ್ರಜಾವಾಣಿ ವಾರ್ತೆ

ಹಾಸನ: ‘ದಸರಾ ಆನೆ ‘ಅರ್ಜುನ’ ಸಾವಿನ ಪ್ರಕರಣ ಸಂಬಂಧ ನಿವೃತ್ತ ವನ್ಯಜೀವಿ ಪಾಲಕರ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖಾ ಸಮಿತಿಯನ್ನು ರಚಿಸಿದ್ದು, ವರದಿ ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಜಿಲ್ಲೆಯ ಯಸಳೂರು ಸಮೀಪದ ದಬ್ಬಳಿಕಟ್ಟೆ ಅರಣ್ಯ ಪ್ರದೇಶದಲ್ಲಿರುವ ಅರ್ಜುನನ ಸಮಾಧಿಗೆ ಪುಷ್ಪನಮನ ಹಾಗೂ ಹಾಲು, ತುಪ್ಪ ಅರ್ಪಿಸಿ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಅರಿವಳಿಕೆ ಚುಚ್ಚುಮದ್ದು, ಗುಂಡು ತಗುಲಿರುವುದು ಸೇರಿದಂತೆ ಹಲವು ಆರೋಪಗಳು ಕೇಳಿ ಬರುತ್ತಿವೆ. ಈ ಬಗ್ಗೆ ಸ್ಥಳೀಯರು ಹಾಗೂ ಪರಿಸರವಾದಿಗಳ ಮಾಹಿತಿ ಆಧರಿಸಿ, ನಿಷ್ಪಕ್ಷಪಾತ ತನಿಖೆ ನಡೆಸಲಾಗುವುದು. ಅರ್ಜುನನ ಸಾವಿನ ನಂತರ ಬಾಹ್ಯ ಮರಣೋತ್ತರ ಪರೀಕ್ಷೆಯು ನಡೆದಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘80ಕ್ಕೂ ಹೆಚ್ಚಿನವರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಕಾಡಾನೆ ದಾಳಿ ಸಂದರ್ಭದಲ್ಲಿ ಅರ್ಜುನ ಇಲ್ಲ ಎಂದಿದ್ದರೆ, 4–5 ಮಂದಿ ಅರಣ್ಯ ಸಿಬ್ಬಂದಿ ಸಾವು ಸಂಭವಿಸುವ ಸಾಧ್ಯತೆ ಇತ್ತು. ಮುಂದಿನ ದಿನಗಳಲ್ಲಿ ಇಂತಹ ಅನಾಹುತಗಳು ನಡೆಯದಂತೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ’ ಎಂದು ಪ್ರತಿಕ್ರಿಯಿಸಿದರು.

‘ಆನೆ ಸೆರೆ ಕಾರ್ಯಾಚರಣೆ ಸೇರಿದಂತೆ ವನ್ಯಜೀವಿ ಸಂರಕ್ಷಣೆಗೆ ಮಾರ್ಗಸೂಚಿ ರಚಿಸಲಾಗುವುದು. ಪ್ರಮಾಣಿಕೃತ ಕಾರ್ಯಾಚರಣೆಯ ವಿಧಾನವನ್ನು ಪರಿಷ್ಕರಿಸುವ ಕುರಿತು ಗಂಭೀರವಾಗಿ ಚಿಂತಿಸಲಾಗಿದೆ. ಅರಿವಳಿಕೆ ತಜ್ಞರಿಗೆ ಸೂಕ್ತ ತರಬೇತಿ ಅಗತ್ಯವಿದ್ದು, ಹೆಚ್ಚಿನ ವೈದ್ಯರು ಹಾಗೂ ಸಿಬ್ಬಂದಿ ನಿಯುಕ್ತಿಯೊಂದಿಗೆ ಕಾರ್ಯಾಚರಣೆ ನಡೆಸಲು ಸೂಚಿಸಲಾಗಿದೆ’ ಎಂದರು.

‘ಆನೆ ಕಾರಿಡಾರ್ ನಿರ್ಮಾಣ ಸಂಬಂಧ ಸಕಲೇಶಪುರ ತಾಲ್ಲೂಕಿನಲ್ಲಿ 3 ಸಾವಿರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ಕೊಡಲು ರೈತರು ಮುಂದೆ ಬಂದಿದ್ದಾರೆ. ರಾಜ್ಯದಲ್ಲಿ ಗಣಿಗಾರಿಕೆ ನಡೆಸುವ ಕಂಪನಿಗಳ ಮಾಲೀಕರ ಮೂಲಕ ಈ ಜಮೀನನ್ನು ಖರೀದಿಸಲಾಗುವುದು. ಹಂತ ಹಂತವಾಗಿ ಕಾರಿಡಾರ್ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದಬ್ಬಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ‘ಅರ್ಜುನ’ನ ಸಮಾಧಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಭಾನುವಾರ ಹಾಲು–ತುಪ್ಪ ಹಾಕಿದರು

‘ಕೆಲ ಸಮುದಾಯಗಳ ಓಲೈಕೆಯಿಂದ ಸಂಘರ್ಷ’

ಕೋಲಾರ: ‘ಕೆಲವು ರಾಜಕಾರಣಿಗಳು ಕೆಲ ಸಮುದಾಯಗಳನ್ನು ಓಲೈಸುವ ಉದ್ದೇಶದಿಂದ ಕೆಲ ವರ್ಗಗಳನ್ನು ನಿರ್ಲಕ್ಷ್ಯ ಮಾಡುವ ಸಣ್ಣ ಕೆಲಸ ಮಾಡುತ್ತಿದ್ದಾರೆ. ಇದು ಸಮಾಜದಲ್ಲಿ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಿದೆ. ಈ ಮಾತು ಹೇಳದೆ ನನಗೆ ಬೇರೆ ದಾರಿ ಇಲ್ಲ’ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ನಾಗಲಾಪುರ ಮಠದಲ್ಲಿ ಭಾನುವಾರ ಆಯೋಜಿಸಿದ್ದ ಧರ್ಮಜಾಗೃತಿ ಸಮಾರಂಭ ಮತ್ತು ಕಾರ್ತಿಕ ದೀಪೋತ್ಸವದಲ್ಲಿ ಮಾತನಾಡಿದ ಅವರು, ‘ಧರ್ಮಪೀಠಗಳು ಸ್ಪಷ್ಟವಾಗಿ ಹೇಳದೆ ಹೋದರೆ ಬೇರೆ ಯಾರೂ ಈ ಮಾತು ಹೇಳಲು ಸಾಧ್ಯವಾಗುವುದಿಲ್ಲ. ಜಾತಿ, ಧರ್ಮದ ವಿಚಾರ ಬದಿಗಿಡಬೇಕು. ಬಡತನದಿಂದ ನರಳುವ ಯಾವುದೇ ಸಮುದಾಯದ ಜನರನ್ನು ಮೇಲೆತ್ತುವ, ಆರ್ಥಿಕ ಬಲ ತುಂಬುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಆಗ ಜಾತಿ, ಧರ್ಮಗಳ ಮಧ್ಯೆ ನಡೆದಿರುವ ಸಂಘರ್ಷ, ತಿಕ್ಕಾಟ ದೂರವಾಗಲಿದೆ’ ಎಂದರು.

ನಿಧನವಾರ್ತೆ

ಬಾಬಣ್ಣ ಕಲ್ಮನಿ

ಕುಕನೂರು(ಕೊಪ್ಪಳ ಜಿಲ್ಲೆ): ಹೆಸರಾಂತ ರಂಗಭೂಮಿ ಕಲಾವಿದ ಕುಕನೂರಿನ ಬಾಬಣ್ಣ ಕಲ್ಮನಿ (90) ಭಾನುವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯರು ಇದ್ದಾರೆ.ಭಾನುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಅವರು ರಂಗಭೂಮಿ, ದೂರದರ್ಶನ, ಚಲನಚಿತ್ರ ನಟರಾಗಿ ಹೆಸರು ಮಾಡಿದ್ದರು. 1993ರಲ್ಲಿ ರಾಜ್ಯ ನಾಟಕ ಅಕಾಡೆಮಿಯ ಪ್ರಶಸ್ತಿ ಸಂದಿತ್ತು.

ಬಾಬಣ್ಣ ಅವರಿಗೆ 2021–22ನೇ ಸಾಲಿನ ‘ಗುಬ್ಬಿ ವೀರಣ್ಣ’ ಪ್ರಶಸ್ತಿ ಘೋಷಣೆಯಾಗಿದೆ. ಆದರೆ, ಇನ್ನೂ ಪ್ರದಾನವಾಗಿಲ್ಲ. ಇದರ ಬಗ್ಗೆ ಬಹಳಷ್ಟು ಬೇಸರ ವ್ಯಕ್ತಪಡಿಸಿದ್ದ ಅವರು ‘ಸರ್ಕಾರ ಪ್ರಶಸ್ತಿ ಕೊಟ್ಟು ಪುಣ್ಯ ಕಟ್ಟೊಳ್ಳಲಿ’ ಎಂದು ಮನವಿ ಮಾಡಿದ್ದರು.

सीएसआईआर-राष्ट्रीय वांतरिक्ष प्रयोगशालाएं
Council of Scientific and Industrial Research
NATIONAL AEROSPACE LABORATORIES
पी बी सं.1779, एचएएल एयरपोर्ट रोड, बेंगलूरु – 560017
PB No. 1779, HAL Airport Road, Kodihalli, Bengaluru - 560017. India.
ISO:9001:2015 Certified

RECRUITMENT NOTICE

Advt. No. 11/2023

CSIR-NAL, Bengaluru, a constituent unit of CSIR-New Delhi invites applications from the eligible candidates for 02 positions of "**Junior Research Fellow**" as detailed below:

Qualification	:	MSc. Physics / Material Science
Upper Age Limit	:	28 years
Monthly emoluments	:	₹31,000+HRA

For complete details of advertisement, please visit CSIR-NAL website: **www.nal.res.in**. The last date of receiving offline application is **26/12/2023**.

Sd/-
Controller of Administration

ಸುಭಾಷಿತ

ನೀವೆಷ್ಟು ಆರೋಗ್ಯವಂತರು ಅಥವಾ ಎಷ್ಟು ಮಂದಿ ನಿಮ್ಮನ್ನು ಪ್ರೀತಿಸುತ್ತಾರೆ ಎಂಬುದು ಹಣದಿಂದ ಬದಲಾಯಿಸಲಾಗದ ಸಂಗತಿ.

–ವಾರನ್ ಬಫೆಟ್

ರೆಪೊ ದರದಲ್ಲಿ ಯಥಾಸ್ಥಿತಿ ಕಾರ್ಯತಂತ್ರ ಬದಲಿಸದ ಆರ್‌ಬಿಐ

ಈ ತಿಂಗಳ ಆರಂಭದಲ್ಲಿ ನಡೆದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರದಲ್ಲಿ ನಿರೀಕ್ಷೆಯಂತೆಯೇ ಯಾವುದೇ ಬದಲಾವಣೆ ತರಲಿಲ್ಲ. ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲು ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಅನುಸರಿಸುತ್ತಿರುವ ಕಾರ್ಯತಂತ್ರಕ್ಕೆ ಪೂರಕವಾಗಿದೆ ಈ ನಿಲುವು. ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡ ಆರ್‌ಬಿಐ, ಹಣದುಬ್ಬರವನ್ನು ತಗ್ಗಿಸುವ ಹಾದಿಯಲ್ಲಿ ತಾನು ಈಗಲೂ ಸಾಗುತ್ತಿರುವುದಾಗಿ ಹೇಳಿದೆ. ಆದರೆ, ಹಣದುಬ್ಬರ ನಿಯಂತ್ರಣದ ವಿಚಾರದಲ್ಲಿ ಆರ್‌ಬಿಐ ಈ ಮೊದಲಿನ ಮಟ್ಟದ ಆತಂಕವನ್ನು ಈಗ ಹೊಂದಿಲ್ಲ. ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ವಿಚಾರವಾಗಿ ಆರ್‌ಬಿಐ ಹೆಚ್ಚು ಆಶಾದಾಯಕವಾಗಿದೆ. ಈಗ ರೆಪೊ ದರವು ಶೇ 6.5ರಷ್ಟು ಇದೆ. ಈಗಿನ ಹಣಕಾಸು ನೀತಿಯನ್ನು ಮುಂದುವರಿಸಿಕೊಂಡು ಹೋಗಲು ಎಂಪಿಸಿ ಬಹುಮತದ ತೀರ್ಮಾನ ಕೈಗೊಂಡಿದೆ. ಚಿಲ್ಲರೆ ಹಣದುಬ್ಬರದ ಪ್ರಮಾಣವು ಶೇ 4ಕ್ಕೆ ಮಿತಿಗೊಳ್ಳಬೇಕು ಎಂಬ ಗುರಿಯನ್ನು ತಲುಪುವ ಯತ್ನ ಕೇಂದ್ರೀಯ ಬ್ಯಾಂಕ್ ಕಡೆಯಿಂದ ನಡೆದಿದೆ ಎಂದು ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಸಂದರ್ಭ ಎದುರಾದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಿದ್ಧವಿರುವುದಾಗಿಯೂ ತಿಳಿಸಿದ್ದಾರೆ. ಎಂಪಿಸಿಯು ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿರುವುದು ಇದು ಸತತ ಐದನೆಯ ಬಾರಿ. ಬಹುಶಃ, ಆರ್ಥಿಕ ಬೆಳವಣಿಗೆ ಹಾಗೂ ಹಣಕಾಸು ಸ್ಥಿರತೆಯ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಉದ್ದೇಶದೊಂದಿಗೆ ದರದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬಂದಿದೆ.

ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲು ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಅನುಸರಿಸುತ್ತಿರುವ ಕಾರ್ಯತಂತ್ರಕ್ಕೆ ಪೂರಕವಾಗಿದೆ ಈ ನಿಲುವು

ಈಚಿನ ತಿಂಗಳುಗಳಲ್ಲಿ ಹಣದುಬ್ಬರ ಪ್ರಮಾಣವು ತುಸು ತಗ್ಗಿದೆ. ಜುಲೈನಲ್ಲಿ ಶೇ 7.44ಕ್ಕೆ ಏರಿಕೆ ಕಂಡಿದ್ದ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 4.87ಕ್ಕೆ ಇಳಿಕೆಯಾಗಿದೆ. ಜುಲೈನಲ್ಲಿ ಶೇ 11.51ರಷ್ಟು ಇದ್ದ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇ 6.61ಕ್ಕೆ ಇಳಿಕೆಯಾಗಿದ್ದು ಇದಕ್ಕೆ ಒಂದು ಪ್ರಮುಖ ಕಾರಣ. ಹೀಗಿದ್ದರೂ ಅಲ್ಪಾವಧಿಯಲ್ಲಿ ಹಣದುಬ್ಬರ ವಿಚಾರವಾಗಿ ಮುನ್ನೋಟದಲ್ಲಿ ಸ್ಥಿರತೆ ಕಾಣುತ್ತಿಲ್ಲ. ಡಿಸೆಂಬರ್‌ನಲ್ಲಿ ಆಹಾರ ವಸ್ತುಗಳ ಬೆಲೆಯಲ್ಲಿ ಮತ್ತೆ ಏರಿಕೆ ಕಂಡುಬರಬಹುದು. ಈಗ ಜಾಗತಿಕ ಮಟ್ಟದಲ್ಲಿ ಸಕ್ಕರೆ ಬೆಲೆಯು ಹೆಚ್ಚಳ ಕಾಣುತ್ತಿರುವುದು ತುಸು ಕಳವಳ ಮೂಡಿಸುವಂಥದ್ದು. ತರಕಾರಿಗಳ ಬೆಲೆಯಲ್ಲಿ ಏರಿಕೆ ಕಂಡುಬಂದಲ್ಲಿ, ಹಣದುಬ್ಬರ ಪ್ರಮಾಣ ಏರಿಕೆ ಕಾಣಬಹುದು ಎಂದು ದಾಸ್ ಅಂದಾಜು ಮಾಡಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣವು ಶೇ 5.2ಕ್ಕೆ ಇಳಿಕೆ ಆಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಈ ಇಳಿಕೆಯ ನಂತರವೂ, ಆರ್‌ಬಿಐ ತನ್ನ ಗುರಿಯನ್ನು ತಲುಪುವುದರಿಂದ ಬಹುದೂರವೇ ಉಳಿದಿರುತ್ತದೆ. ಹೀಗಾಗಿ, ಸದ್ಯಕ್ಕಂತೂ ಬಡ್ಡಿ ದರ ಇಳಿಕೆಯ ನಿರೀಕ್ಷೆ ಇಲ್ಲ.

ಪ್ರಸಕ್ತ ಆರ್ಥಿಕ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ 7.6ರಷ್ಟು ಬೆಳವಣಿಗೆ ಕಂಡಿದೆ. ಇದು ನಿರೀಕ್ಷೆಗಿಂತ ಹೆಚ್ಚಿನ ಬೆಳವಣಿಗೆ. ಇದರ ಪರಿಣಾಮವಾಗಿ ಆರ್‌ಬಿಐ, ಇಡೀ ವರ್ಷದ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ 7ಕ್ಕೆ ಹೆಚ್ಚು ಮಾಡಿದೆ (ಈ ಮೊದಲಿನ ಅಂದಾಜು ಶೇ 6.5ರಷ್ಟು ಇತ್ತು). ನಗರ ಪ್ರದೇಶಗಳಲ್ಲಿ ಬೇಡಿಕೆಯು ಸ್ಥಿರವಾಗಿ ಇರುತ್ತದೆ, ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಯು ನಿಧಾನವಾಗಿ ಹೆಚ್ಚಾಗುತ್ತದೆ ಎಂಬ ನಿರೀಕ್ಷೆ ಆರ್‌ಬಿಐಗೆ ಇದೆ. ಬೇಡಿಕೆಯ ವಿಚಾರವಾಗಿ ಕೆಲವು ಕಳವಳಗಳು ಇವೆಯಾದರೂ ಸರ್ಕಾರದ ಕಡೆಯಿಂದ ವೆಚ್ಚಗಳು ಹೆಚ್ಚುತ್ತಿರುವ ಕಾರಣ ಹೂಡಿಕೆಗೆ ಉತ್ತೇಜನ ಸಿಕ್ಕಿದೆ. ಇದು ಮುಂದಿನ ದಿನಗಳಲ್ಲಿಯೂ ಹೀಗೆಯೇ ಉಳಿಯಬಹುದು. ಮುಂದಿನ ದಿನಗಳಲ್ಲಿ ರಫ್ತು ಪ್ರಮಾಣದಲ್ಲಿ ಹೆಚ್ಚಳ ಕಾಣಬಹುದು. ಮುಂದಿನ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಜಿಡಿಪಿ ಬೆಳವಣಿಗೆಯು ಶೇ 6.7, ಶೇ 6.5 ಮತ್ತು ಶೇ 6.4ರಷ್ಟು ಇರಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಮುಂದಿನ ವರ್ಷದಲ್ಲಿ ಮುಂಗಾರು ಮಳೆಯು ವಾಡಿಕೆಯಂತೆ ಆಗುತ್ತದೆ ಎಂಬ ನಿರೀಕ್ಷೆಯಲ್ಲಿ ಈ ಅಂದಾಜು ಮಾಡಲಾಗಿದೆ ಎಂದು ದಾಸ್ ಹೇಳಿದ್ದಾರೆ. ಜಾಗತಿಕ ಮಟ್ಟದಲ್ಲಿ ಅಸ್ಥಿರತೆ ಮುಂದುವರಿದಿದ್ದರೂ ಭಾರತವು ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳ ಸಾಲಿನಲ್ಲಿ ಒಂದು ಹೆಜ್ಜೆ ಮುಂದೆ ಇರುತ್ತದೆ ಎಂಬ ವಿಶ್ವಾಸವನ್ನು ದಾಸ್ ವ್ಯಕ್ತಪಡಿಸಿದ್ದಾರೆ.

ದಿನದ ಟ್ವೀಟ್

ಸಾಧನೆಗೆ ಸಿಗಬೇಕು ಮನ್ನಣೆ

ಇದೇ ಸಾಧನೆಯನ್ನು ಒಬ್ಬ ಪುರುಷ ಮಾಡಿದ್ದಿದ್ದರೆ, ಆತನಿಗೆ ಈ ದೇಶದ ಎಲ್ಲಾ ಪ್ರಶಸ್ತಿಗಳು ಸಿಕ್ಕಿರುತ್ತಿದ್ದವು! 600 ಸಿನಿಮಾ ಸುಮ್ಮನೆ ಅಲ್ಲ!

(ದಿವಂಗತ ಚಿತ್ರನಟಿ ಲೀಲಾವತಿ ಅವರ ಸಾಧನೆಗೆ ಸೂಕ್ತ ಮನ್ನಣೆ ಸಿಕ್ಕಿಲ್ಲ ಎಂಬ ಮಾತಿಗೆ ಪ್ರತಿಕ್ರಿಯೆ)

ಜಡಿಯಪ್ಪ ಗೆದ್ಲಗಟ್ಟಿ

ಕಿಡಿನುಡಿ

ಶಾಸಕರಿಗೆ ಸಂಧಿ, ಸಮಾಸ ಹೇಳಿಕೊಡುವಷ್ಟು ಕನ್ನಡದ ಅಭಿಮಾನಿ ಆಗಿರುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರದ ಈ ಆರು ತಿಂಗಳಲ್ಲಿ ನೂರಾರು ಕನ್ನಡ ಮಾಧ್ಯಮ ಶಾಲೆಗಳು ಮುಚ್ಚಿವೆ. ಇನ್ನು ಅನುದಾನಿತ ಕನ್ನಡ ಶಾಲೆಗಳಲ್ಲಿ ಸಾವಿರಾರು ಶಿಕ್ಷಕರ ಕೊರತೆ ಇದೆ. ಅಲ್ಲಿಯ ಬಡ ಮಕ್ಕಳಿಗೆ ಶಿಕ್ಷಣ ನೀಡುವವರು ಯಾರು?

ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ)

25 ವರ್ಷಗಳ ಹಿಂದೆ

ಶುಕ್ರವಾರ, 11-12-1998

• 97 ಪೂರೈಸಿದ ಮುತ್ಸದ್ದಿ ಎಸ್ಸೆನ್‌ಗೆ ಹೃದಯಸ್ಪರ್ಶಿ ಸನ್ಮಾನ

ಬೆಂಗಳೂರು, ಡಿ. 10– ನಾಡಿನ ಹಿರಿಯ ಮುತ್ಸದ್ದಿ, ಕರ್ನಾಟಕ ಏಕೀಕರಣದ ರೂವಾರಿ ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರಿಗೆ 97 ವರ್ಷ ತುಂಬಿದ ಸಂದರ್ಭದಲ್ಲಿ, ಇಂದು ಇಲ್ಲಿ ಅವರ ಅಭಿಮಾನಿಗಳು ಹೃದಯಸ್ಪರ್ಶಿಯಾಗಿ ಸನ್ಮಾನಿಸಿ ಅವರ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಉಪರಾಷ್ಟ್ರಪತಿ ಎಸ್.ಕೃಷ್ಣಕಾಂತ್, ರಾಜ್ಯಪಾಲ ಖುರ್ಷಿದ್ ಆಲಂ ಖಾನ್, ಕೇಂದ್ರದ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ, ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಮುಂತಾದವರು ನಿಜಲಿಂಗಪ್ಪನವರ ಮೇರು ವ್ಯಕ್ತಿತ್ವವನ್ನು ಕೊಂಡಾಡಿದರು.

‘ಇಂದು ನಾನು ನಿಶ್ಯಕ್ತನಾಗಿರಬಹುದು. ಆದರೆ ನಾನು ದೇಶಭಕ್ತಿಯಲ್ಲಿ ಯಾರಿಗೂ ಕಡಿಮೆ ಇಲ್ಲ’ ಎಂದು ಲವಲವಿಕೆಯಿಂದಲೇ ಮಾತು ಪ್ರಾರಂಭಿಸಿದ, ಹಿರಿಯ ಗಾಂಧಿವಾದಿಯೂ ಆದ ನಿಜಲಿಂಗಪ್ಪನವರು, ತಾವು ಮುಖ್ಯಮಂತ್ರಿಯಾಗಿದ್ದಾಗ ಯಾರಿಗೂ ಅನ್ಯಾಯ ಮಾಡಿಲ್ಲ, ಉದ್ದೇಶಪೂರ್ವಕವಾಗಿ ಯಾವುದೇ ತಪ್ಪೂ ಮಾಡಿಲ್ಲ ಎಂದು ಎದೆ ತಟ್ಟಿಕೊಂಡು ಹೇಳಿದಾಗ, ನೆರೆದಿದ್ದ ಅಪಾರ ಅಭಿಮಾನಿಗಳಿಂದ ಕರತಾಡನ.

• ‘ಗಂಗಾ– ಕಾವೇರಿ ಜೋಡಣೆಗೆ ಬದ್ಧ’

ಬೆಂಗಳೂರು, ಡಿ. 10– ಮಹತ್ವದ ಗಂಗಾ–ಕಾವೇರಿ ನದಿಗಳ ಜೋಡಣೆ ಯೋಜನೆಯನ್ನು ಕಾರ್ಯಗತಗೊಳಿಸಲು ಕೇಂದ್ರ ಬದ್ಧವಾಗಿದೆ ಎಂದು ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಇಂದು ಇಲ್ಲಿ ಹೇಳಿದರು.

ರಾಜ್ಯ ಹೆದ್ದಾರಿಗಳ ಜೋಡಣೆಯಂತೆ ನೀರಿನ ಹೆದ್ದಾರಿಗಳೂ ನಿರ್ಮಾಣ ಆಗಬೇಕು, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಮುಂದುವರಿದರೆ ಗಂಗಾ– ಕಾವೇರಿ ಜೋಡಣೆ ಖಂಡಿತ ಕಾರ್ಯಗತಗೊಳ್ಳುತ್ತದೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 11-12-1973

• ಆಂಧ್ರ– ಹೊಸ ಸಂಪುಟ ಅಸ್ತಿತ್ವಕ್ಕೆ: ಸುಬ್ಬಾರೆಡ್ಡಿ ಉಪಮುಖ್ಯಮಂತ್ರಿ

ಹೈದರಾಬಾದ್, ಡಿ. 10– ಜಲಗಂ ವೆಂಗಲ ರಾವ್ ಅವರ ನಾಯಕತ್ವದಲ್ಲಿ 15 ಜನ ಸಚಿವರ ಸಂಪುಟವೊಂದು ಇಂದು ಸಂಜೆ ಪ್ರಮಾಣವಚನ ಸ್ವೀಕರಿಸುವುದರೊಂದಿಗೆ, ಆಂಧ್ರದಲ್ಲಿ 11 ತಿಂಗಳುಗಳಿಂದ ಜಾರಿಯಲ್ಲಿದ್ದ ರಾಷ್ಟ್ರಪತಿ ಆಡಳಿತ ಕೊನೆಗೊಂಡಿತು.

ಹೊಸ ಸಂಪುಟದಲ್ಲಿ ಹರಿಜನರಿಗೆ ಮೂರು, ಹಿಂದುಳಿದ ವರ್ಗಗಳವರಿಗೆ ಮೂರು, ಮುಸ್ಲಿಮರಿಗೆ ಒಂದು ಮತ್ತು ಕ್ರಿಶ್ಚಿಯನ್ನರಿಗೆ ಒಂದು ಸ್ಥಾನವನ್ನು ನೀಡಲಾಗಿದೆ.

• ಬಡಜನರ ಅಗತ್ಯ ಕುರಿತ ಅಂಕಿಅಂಶ ಸಂಗ್ರಹಣೆ ಅಗತ್ಯ

ನವದೆಹಲಿ, ಡಿ. 10– ರಾಷ್ಟ್ರದ ಬಡಜನರಿಗೆ ವೈದ್ಯಕೀಯ ಸೌಲಭ್ಯ, ಶಿಕ್ಷಣ, ಪೌಷ್ಟಿಕ ಆಹಾರ, ವಸತಿ ಹಾಗೂ ಸಾರಿಗೆ ಸಂಪರ್ಕದಲ್ಲಿ ಕನಿಷ್ಠ ಅಗತ್ಯಗಳ ಪೂರೈಕೆಗೆ 5ನೇ ಯೋಜನೆಯಲ್ಲಿ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಹಾಕಿಕೊಂಡಿದ್ದು, ಅದರ ಸಮರ್ಪಕ ನಿರ್ವಹಣೆಗೆ ಜನಸಂಖ್ಯೆ, ಕಾರ್ಮಿಕ ಬಲ, ಶಿಕ್ಷಣ, ವಸತಿ ಹಾಗೂ ಪೌಷ್ಟಿಕಾಹಾರ ಲಭ್ಯತೆಗಳನ್ನು ಕುರಿತ ವಿವರ ಅಗತ್ಯವಿದ್ದು, ಅಂಕಿಅಂಶ ತಜ್ಞರು ಗಮನ ಹರಿಸಬೇಕು ಎಂದು ಯೋಜನಾ ಸಚಿವ ಡಿ.ಪಿ. ಧರ್ ಇಂದು ಆಗ್ರಹಪಡಿಸಿದರು.

ಭಾಷೆಯ ಕಲಿಕೆಗೆ ಮಹತ್ವ ನೀಡದೇ ಇರುವುದು ಹಲವು ಸಮಸ್ಯೆಗಳ ಮೂಲ

ಕೈಬಿಟ್ಟುಹೋಗಿದೆ ಕಲಿಕೆಯ ಮೂಲತತ್ವ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಮಕ್ಕಳು ಏನನ್ನೂ ಕಲಿಯುವುದಿಲ್ಲ ಎನ್ನುವ ದೂರು ಅಧ್ಯಾಪಕರು, ಪೋಷಕರು ಮತ್ತು ಸಮುದಾಯದಲ್ಲಿ ಜನಜನಿತವಾಗಿದೆ. ಈ ದೂರು ಪಠ್ಯದ ಕಲಿಕೆಗೂ ಸಂಬಂಧಿಸಿರುತ್ತದೆ, ವರ್ತನಾ ಕಲಿಕೆಗೂ ಸಂಬಂಧಿಸಿರುತ್ತದೆ. ಉದಾಹರಣೆಗೆ, ಪಠ್ಯವಸ್ತುವನ್ನು ವಿದ್ಯಾರ್ಥಿಗೆ ಸಮರ್ಪಕವಾಗಿ ನಿರೂಪಿಸಲು ಆಗದೇ ಇದ್ದಾಗ, ಅದನ್ನು ವಿದ್ಯಾರ್ಥಿಗಳು ಕಲಿಯುತ್ತಿಲ್ಲ ಎನ್ನುವ ಆರೋಪ ಇರುತ್ತದೆ. ವ್ಯವಹರಿಸುವಿಕೆ ಒರಟಾಗಿದ್ದಾಗ ‘ಇಂದಿನ ವಿದ್ಯಾರ್ಥಿಗಳಿಗೆ ಯಾರೊಂದಿಗೆ ಹೇಗೆ ವರ್ತಿಸಬೇಕು ಎಂಬುದು ಗೊತ್ತಿಲ್ಲ’ ಎನ್ನುವ ಶೈಲಿಯ ಆರೋಪ ಕೇಳಿಬರುತ್ತದೆ.

ಮೊದಲನೆಯ ವರ್ಗದ ಆರೋಪವು ವಿದ್ಯಾರ್ಥಿಯನ್ನು ಲಿಖಿತ ಅಥವಾ ಮೌಖಿಕ ಮೌಲ್ಯಮಾಪನಕ್ಕೆ ಒಳಪಡಿಸಿದಾಗ ನಿರೀಕ್ಷಿತ ಉತ್ತರ ಲಭ್ಯವಾಗದೇ ಹೋದರೆ ವ್ಯಕ್ತವಾಗುತ್ತದೆ. ಅಂದರೆ, ಇಲ್ಲಿ ವಿದ್ಯಾರ್ಥಿಯು ಆರೋಪ ಮುಕ್ತನಾಗಬೇಕಾದರೆ ತಾನು ತಿಳಿದುಕೊಂಡದ್ದನ್ನು ಹೇಳುವುದು ಮುಖ್ಯವಾಗುತ್ತದೆ ವಿನಾ ಜ್ಞಾನದ ಸಾಮರ್ಥ್ಯ ಅಲ್ಲ. ತಿಳಿದಿದ್ದನ್ನು ಅಭಿವ್ಯಕ್ತಪಡಿಸದೇ ಇರುವುದರಲ್ಲಿ ಎರಡು ಸಾಧ್ಯತೆಗಳು ಇರುತ್ತವೆ. ಮೊದಲನೆಯದು, ಎಲ್ಲರಿಗೂ ಅರ್ಥ ಮಾಡಿಸುವ ಹಾಗೆ ಕಲಿತಿಲ್ಲದೇ ಇರುವುದು. ಎರಡನೆಯದು, ಕಲಿಕೆ ನಡೆದಿದ್ದರೂ ಲಿಖಿತ ಅಥವಾ ಮೌಖಿಕ ರೂಪದಲ್ಲಿ ಅಭಿವ್ಯಕ್ತಪಡಿಸಲು ತಿಳಿಯದೇ ಇರುವುದು. ಇದಕ್ಕೆ ಮುಖ್ಯವಾದ ಕಾರಣ, ಭಾಷಾ ಸಾಮರ್ಥ್ಯದ ಕೊರತೆ. ವಾಸ್ತವದ ಕಲಿಕಾ ಸನ್ನಿವೇಶದಲ್ಲಿ ಇದಕ್ಕೆ ಹೆಚ್ಚು ಮಹತ್ವ ಇದೆ.

ಸರ್ವಶಿಕ್ಷಣ ಅಭಿಯಾನದ ನಂತರ ಬಂದ ಶೈಕ್ಷಣಿಕ ಸುಧಾರಣೆಗಳ ಕಾಲದ ಶಿಕ್ಷಣವು ಭಾಷಾ ಕಲಿಕೆಯನ್ನು ಬಹಳಷ್ಟು ಕಡೆಗಣಿಸಿದೆ. ಇದು ಕನ್ನಡಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಇಂಗ್ಲಿಷ್ ಮಾಧ್ಯಮದ ಶಾಲೆಗಳೇ ಆದರೂ ಅಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಗಣಿತ, ವಿಜ್ಞಾನದ ಕಲಿಕೆಗೆ ಪ್ರಾಧಾನ್ಯ ಕೊಡಲಾಗುತ್ತದೆಯೇ ವಿನಾ ಇಂಗ್ಲಿಷ್ ಭಾಷೆಯನ್ನು ಕಲಿಯುವುದಕ್ಕೆ ಅಲ್ಲ. ಇಂಗ್ಲಿಷ್ ಭಾಷೆಯನ್ನು ಸಮರ್ಥವಾಗಿ ಕಲಿಯದೆ ಇಂಗ್ಲಿಷ್‌ನಲ್ಲಿ ಪಠ್ಯವಸ್ತುವನ್ನು ಕಲಿಯುವುದು ಹೇಗೆ ಎಂದರೆ, ಅದು ಪರೀಕ್ಷೆಯಲ್ಲಿ ಬರಬಹುದಾದ ಪ್ರಶ್ನೆಗಳ ಉತ್ತರಗಳನ್ನು ಮಾತ್ರ ಇಂಗ್ಲಿಷ್‌ನಲ್ಲಿ ಅಭ್ಯಾಸ ಮಾಡಿಸುವ ಪದ್ಧತಿ ಆಗಿರುತ್ತದೆ. ಆಗ ಪರೀಕ್ಷೆಯಲ್ಲಿ ಬರಬಹುದಾದ ಸಂಭವನೀಯ ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಬಿಟ್ಟರೆ ಪಠ್ಯವಸ್ತುವಿನ ಬೇರಾವ ವಿಚಾರಗಳನ್ನೂ ಇಂಗ್ಲಿಷ್‌ನಲ್ಲಿ ಪ್ರಕಟಪಡಿಸಲು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ವಿಚಾರ ಅರ್ಥವಾಗಿರುತ್ತದೆ, ಅದನ್ನು ಪ್ರಕಟಪಡಿಸಲು ಬೇಕಾದ ಭಾಷಾ ಸಾಮರ್ಥ್ಯ ಸಾಲುವುದಿಲ್ಲ.

ಕನ್ನಡ ಭಾಷಾ ಸಾಮರ್ಥ್ಯ ಸ್ವಲ್ಪ ಚೆನ್ನಾಗಿರುವ ವಿದ್ಯಾರ್ಥಿಗಳು, ಅರ್ಥವಾದದ್ದನ್ನು ಕನ್ನಡದಲ್ಲಿ ಹೇಳು ಎಂದರೆ ಹೇಳುತ್ತಾರೆ. ಆದರೆ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಬೇಕೆಂಬ ಹಪಹಪಿಯು ಇಂಗ್ಲಿಷ್ ಭಾಷೆಯನ್ನು ಕಲಿಯುವಲ್ಲಿಯೇ ಇಲ್ಲದಿರುವಾಗ, ಇನ್ನು ಕನ್ನಡವನ್ನು ಕಲಿಯುವಲ್ಲಿ ಎಷ್ಟರಮಟ್ಟಿಗೆ ಇರಬಹುದು? ಪರಿಸರದಿಂದ ಕನ್ನಡವನ್ನು ಸ್ವಲ್ಪ ಅಚ್ಚುಕಟ್ಟಾಗಿ ತಿಳಿದ ವಿದ್ಯಾರ್ಥಿಗಳು ‘ಕನ್ನಡದಲ್ಲಿ ಹೇಳು’ ಎಂದಾಗ ಹೇಳುತ್ತಾರೆ. ಕನ್ನಡ ಭಾಷಾ ಸಾಮರ್ಥ್ಯ ಇಲ್ಲದ ವಿದ್ಯಾರ್ಥಿಗಳಿಗೆ ತಮಗಿರುವ ತಿಳಿವಳಿಕೆಯನ್ನು ಕನ್ನಡದಲ್ಲೂ ಹೇಳಲು ಆಗುವುದಿಲ್ಲ, ಇಂಗ್ಲಿಷ್‌ನಲ್ಲೂ ಹೇಳಲು ಆಗುವುದಿಲ್ಲ. ಉತ್ತರಪತ್ರಿಕೆಯ ಮೌಲ್ಯಮಾಪನ ಮಾಡುವಾಗ ಈ ಸನ್ನಿವೇಶವು ತುಂಬ ಚೆನ್ನಾಗಿ ಅರ್ಥವಾಗುತ್ತದೆ.

ಇಂಗ್ಲಿಷ್ ಮಾಧ್ಯಮದ ಉತ್ತರ ಪತ್ರಿಕೆಗಳಲ್ಲಿ ಎರಡೇ ಮುಖ್ಯ ವಿಧಗಳಿರುತ್ತವೆ. ಒಂದೋ ಖಚಿತ, ಸ್ಪಷ್ಟ ಮತ್ತು ಸಮರ್ಪಕ ಉತ್ತರಗಳು. ಇದಲ್ಲದಿದ್ದರೆ ಏನೂ ಇಲ್ಲದ ಉತ್ತರ ಪತ್ರಿಕೆಗಳು. ಸ್ಪಷ್ಟ ಮತ್ತು ಸರಿಯಾದ ಉತ್ತರ ಪತ್ರಿಕೆಯು ವಿದ್ಯಾರ್ಥಿಯು ಒಂದೋ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ ಅಥವಾ ಇಂಗ್ಲಿಷ್‌ನಲ್ಲಿ ಕೊಟ್ಟ ಉತ್ತರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಉತ್ತರವನ್ನು ಮಾತ್ರ ಬಲ್ಲವನಾಗಿದ್ದರೆ ಕೆಲವು ಪ್ರಶ್ನೆಗಳಿಗೆ ಉತ್ತರಿಸಿಯೇ ಇರುವುದಿಲ್ಲ. ಅಂದರೆ ಆ ಪ್ರಶ್ನೆಗೆ ಸಂಬಂಧಿಸಿದ ಉತ್ತರವನ್ನು ಅವನಿಗೆ ಅಭ್ಯಾಸ ಮಾಡಿಸಿಯೇ ಇರುವುದಿಲ್ಲ ಎಂದು ಅರ್ಥ ಮಾಡಿಕೊಳ್ಳಬಹುದು. ಇಂಗ್ಲಿಷ್ ಭಾಷೆಯನ್ನೇ ಬಲ್ಲವನಾಗಿದ್ದರೆ ಯಾವ ಪ್ರಶ್ನೆಗೂ ಆತ ಉತ್ತರಿಸದೇ ಬಿಡುವುದಿಲ್ಲ. ಉತ್ತರ ತಪ್ಪೇ ಇದ್ದಾಗಲೂ ತಾನು ಅರ್ಥ ಮಾಡಿಕೊಂಡದ್ದನ್ನು ಬರೆದಿರುತ್ತಾನೆ.

ಕನ್ನಡ ಮಾಧ್ಯಮದ ಉತ್ತರ ಪತ್ರಿಕೆಗಳಾದಾಗ ಅದರಲ್ಲಿ ಮೂರು ಬಗೆಯ ವರ್ಗೀಕರಣಕ್ಕೆ ಮಹತ್ವವಿದೆ. ಕನ್ನಡವನ್ನು ಚೆನ್ನಾಗಿ ಬಲ್ಲವರು ಅಥವಾ ಕನ್ನಡದಲ್ಲಿ ಉತ್ತರ ಬಲ್ಲವರದು ಇಂಗ್ಲಿಷ್ ಮಾಧ್ಯಮದ ರೀತಿಯಲ್ಲೇ ಮೊದಲ ವರ್ಗೀಕರಣ. ಎರಡನೆಯದು, ಉತ್ತರ ಮತ್ತು ಭಾಷೆ ಎರಡೂ ಗೊತ್ತಿಲ್ಲದೆ ಉತ್ತರಿಸದೇ ಇರುವವರು. ಮೂರನೆಯ ವರ್ಗೀಕರಣ ಬಹಳ ಆಸಕ್ತಿದಾಯಕ. ಖಚಿತವಾಗಿ ಇದೇ ಉತ್ತರ ಎಂದು ಅವರಿಗೆ ಗೊತ್ತಿರುವುದಿಲ್ಲ. ಆದರೆ ಅಂದಾಜಿನ ಮೇಲೆ ಉತ್ತರವನ್ನು ಬರೆದಿರುತ್ತಾರೆ. ಬರೆದ ಅನಗತ್ಯ ವಿವರಗಳ ನಡುವೆ ಎಲ್ಲೋ ಒಂದು ಕಡೆ ಉತ್ತರ ಇರುತ್ತದೆ ಅಥವಾ ಖಚಿತ ಉತ್ತರಕ್ಕೆ ಸಮೀಪವಾದ ತಿಳಿವಳಿಕೆ ಇರುತ್ತದೆ. ಪೂರ್ಣ ಅಂಕಗಳು ಬಾರದೆ ಇದ್ದರೂ ಅಂಕವನ್ನೇ ಕೊಡದೆ ಇರಲು ಆಗುವುದಿಲ್ಲ. ಈ ವರ್ಗದ ವಿದ್ಯಾರ್ಥಿಗಳಿಗೆ ಪಠ್ಯವಸ್ತುವಿನ ಬಗ್ಗೆ ಸಮರ್ಪಕ ತಿಳಿವಳಿಕೆ ಇರುವುದಿಲ್ಲ. ಭಾಷಾ ಸಾಮರ್ಥ್ಯ ಇರುವುದರಿಂದಾಗಿ, ತನಗೆ ಸಮರ್ಪಕ ತಿಳಿವಳಿಕೆ ಇಲ್ಲದಿದ್ದರೂ ಅರ್ಥ ಆದ ಪರಿಕಲ್ಪನೆಯನ್ನೇ ಬಳಸಿಕೊಂಡು ಬರೆಯುವ ಸಾಮರ್ಥ್ಯ ಇರುತ್ತದೆ.



ವಿದ್ಯಾರ್ಥಿಗಳನ್ನು ಮೌಖಿಕವಾಗಿ ಮೌಲ್ಯಮಾಪನಕ್ಕೆ ಒಳಪಡಿಸಿದಾಗ, ತಿಳಿದದ್ದನ್ನು ಪ್ರಕಟಪಡಿಸಲು ಇನ್ನೊಂದು ಅಡಚಣೆ ಇರುತ್ತದೆ. ಉತ್ತರದ ಮೌಲ್ಯಮಾಪನ ಅದೇ ಸ್ಥಳದಲ್ಲಿ, ಅದೇ ಕ್ಷಣದಲ್ಲಿ ನಡೆಯುವುದರಿಂದ, ಆತ್ಮವಿಶ್ವಾಸದ ಕೊರತೆಯು ಗೊತ್ತಿರುವುದನ್ನು ಹೇಳಲು ಸಾಧ್ಯವಾಗದ ಸ್ಥಿತಿಗೆ ವಿದ್ಯಾರ್ಥಿಯನ್ನು ತಳ್ಳುತ್ತದೆ. ಈ ಕೊರತೆಯು ಕೌಟುಂಬಿಕ ಮತ್ತು ಸಾಮುದಾಯಿಕ ಸನ್ನಿವೇಶದಲ್ಲಿ ಮಕ್ಕಳ ನಿರ್ವಹಣೆಯ ಸಮಸ್ಯೆಯಿಂದಾಗಿ ಮತ್ತು ಶಾಲಾ ಸನ್ನಿವೇಶದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ ಆತ್ಮವಿಶ್ವಾಸ ತುಂಬುವ ಕಾರ್ಯವು ನಡೆದಿಲ್ಲದೇ ಇರುವ ಕಾರಣದಿಂದಾಗಿ ಆಗುತ್ತದೆ. ಜೊತೆಗೆ ಭಾಷಾ ಸಾಮರ್ಥ್ಯದ ಕೊರತೆಯೂ ಇದರೊಂದಿಗೆ ಸೇರಿಕೊಳ್ಳುತ್ತದೆ. ಅಂದರೆ, ಕಲಿತುದನ್ನು ಪ್ರಕಟಪಡಿಸುವ ಸಾಮರ್ಥ್ಯವು ವಿದ್ಯಾರ್ಥಿಗಳಲ್ಲಿ ಬೆಳೆಯುವ ಹಾಗೆ ಮಾಡಬೇಕಾಗಿದೆ.

ಎರಡನೆಯದಾಗಿ, ವಿದ್ಯಾರ್ಥಿಗಳ ವರ್ತನೆಯ ಮೇಲಿನ ಆರೋಪಗಳನ್ನು ಗಮನಿಸಬೇಕು. ವರ್ತನೆಗಳು ತಲೆಮಾರಿನಿಂದ ತಲೆಮಾರಿಗೆ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣುತ್ತವೆ. ಉದಾಹರಣೆಗೆ, ಒಂದು ತಲೆಮಾರು ಯೋಗ್ಯ ಅಧ್ಯಾಪಕರನ್ನು ಪಾದಪೂಜೆ ಮಾಡಿ ಗೌರವಿಸಿರಬಹುದು. ಮತ್ತೊಂದು ತಲೆಮಾರು ಅಂಥದ್ದನ್ನೆಲ್ಲ ಮಾಡದೆ, ‘ಚೆನ್ನಾಗಿ ಪಾಠ ಮಾಡುತ್ತಾರೆ ಕಣಯ್ಯ’ ಎನ್ನಬಹುದು. ಯೋಗ್ಯವಾದದ್ದನ್ನು ಗೌರವಿಸಬೇಕು ಎನ್ನುವ ಪ್ರಜ್ಞೆಯಲ್ಲಿ ಎರಡೂ ತಲೆಮಾರುಗಳ ನಡುವೆ ಇಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಆ ಕಲಿಕೆ ವಿದ್ಯಾರ್ಥಿಗಳಲ್ಲಿ ನಡೆದಿದೆ. ಆದರೆ ಅದನ್ನು ಪ್ರಕಟಪಡಿಸುವ ಕ್ರಮದಲ್ಲಿ ವ್ಯತ್ಯಾಸ ಆಗಿದೆ. ಇದು ಸಹಜ ಪ್ರಕ್ರಿಯೆ. ಆದರೆ ವಿದ್ಯಾರ್ಥಿಗಳ ವರ್ತನೆಯಲ್ಲೇ ದೋಷಗಳು ಬೆಳೆಯುತ್ತಿವೆ. ಒಂದು ವಿಚಾರವನ್ನು ವಿರೋಧಿಸುವುದು ಎಂದರೆ ಆ ವಿಚಾರ ಹೇಳುವವನ ಭೌತಿಕ ನಾಶವನ್ನು ಬಯಸುವುದಲ್ಲ. ಆದರೆ ವಿಚಾರ ಹೇಳುವವನೇ ನಾಶವಾಗಬೇಕು ಎಂದು ಬಯಸುವ ಆಲೋಚನೆಗಳು ಬೆಳೆಯುತ್ತಿವೆ. ಇದಕ್ಕೆ, ಆಲೋಚನಾ ಕ್ರಮ ಹೇಗಿರಬೇಕೆಂದು ಅರ್ಥ ಮಾಡಿಸಲು ಸಾಧ್ಯವಾಗದ, ತನ್ನ ಆಲೋಚನೆಯನ್ನು ಯಾವ ವಿಧಾನದಲ್ಲಿ ಮಂಡಿಸಬೇಕು ಎಂದು ಕಲಿಸಲು ಸಾಧ್ಯವಾಗದ ಶಿಕ್ಷಣ ವ್ಯವಸ್ಥೆಯ ಜವಾಬ್ದಾರಿ ಇದೆ.

ಒಂದೆರಡು ತಲೆಮಾರುಗಳ ಹಿಂದೆ ಕೂಡ ವರ್ತನಾ ಕಲಿಕೆಯಲ್ಲಿ ಶಾಲಾ ಕಾಲೇಜುಗಳ ಪಾತ್ರ ದೊಡ್ಡ ಪ್ರಮಾಣದಲ್ಲಿ ಇರಲಿಲ್ಲ. ಅಧ್ಯಾಪಕರು ತರಗತಿಯಲ್ಲಿ ಸಾಂದರ್ಭಿಕವಾಗಿ ಹೇಳಿದ್ದೆಷ್ಟೋ ಅಷ್ಟೆ. ಆದರೆ ಆಗ ಕೃಷಿಕೇಂದ್ರಿತ ಜೀವನ ವ್ಯವಸ್ಥೆ, ಕೂಡು ಕುಟುಂಬಗಳ ಪ್ರಭಾವಗಳಿಂದಾಗಿ ಪರಿಸರದ ಅನುಭವಗಳಿಂದ ವರ್ತನೆಗಳ ಕಲಿಕೆ ನಡೆಯುತ್ತಿತ್ತು. ಈಗ ಬದಲಾದ ಪರಿಸರದಲ್ಲಿ ವರ್ತನಾ ಕಲಿಕೆ ಹೆಚ್ಚು ನಕಾರಾತ್ಮಕವಾಗುತ್ತಾ ಹೋಗಿದೆ. ಆದರೆ ಶಾಲೆಗಳಲ್ಲಿ ವರ್ತನಾ ಕಲಿಕೆಯೇ ಇಲ್ಲ! ಅಂದಮೇಲೆ ಪದವೀಧರರಾದರೂ ಅವರ ವರ್ತನೆ ಸರಿಯಿಲ್ಲ ಎಂದರೆ ಆಗುವುದಿಲ್ಲ. ಪದವಿಗೂ ವರ್ತನೆಗೂ ಸಂಬಂಧ ಇದೆಯೆಂದು ಭಾವಿಸಬೇಕಾದರೆ ಪದವಿಯಲ್ಲಿ ವರ್ತನೆಯನ್ನು ಕಲಿಸುವ ವ್ಯವಸ್ಥೆ ಇರಬೇಕು. ಆದರೆ ಆ ವ್ಯವಸ್ಥೆ ಇಲ್ಲ. ಆದ್ದರಿಂದ ಶಿಕ್ಷಣದಲ್ಲಿ ವರ್ತನಾ ಕಲಿಕೆಗೆ ಪೂರಕವಾದ ಅಂಶ ಮತ್ತು ಅದಕ್ಕಾಗಿ ಸಮರ್ಥ ಅಧ್ಯಾಪಕರ ವ್ಯವಸ್ಥೆಯನ್ನು ಮಾಡಬೇಕಾದ ಅಗತ್ಯವಿದೆ.

ಚುರುಮುರಿ

ಪ್ರಶ್ನಾತೀತರು!

• ಸುಮಂಗಲಾ

ಬೆಕ್ಕಣ್ಣ ಬೆಳ್‌ಬೆಳಗ್ಗೆ ಹೊಸ ಉತಾವಳಿಯಲ್ಲಿತ್ತು. ‘ಮೋದಿಮಾಮ ಪತ್ರಕರ್ತರಿಗೆ ಮುಖನೇ ತೋರಿಸಂಗಿಲ್ಲ ಅಂತ ಹಂಗಿಸತಿದ್ದೆ ಯಲ್ಲ… ನೋಡೀಗ… ಪಿಟಿಐ ಅಂತಾ ದೊಡ್ಡ ಸುದ್ದಿಮನೆಗೇ ಮೋದಿಮಾಮ ದರ್ಶನ ಕೊಟ್ಟು, ಅವರನ್ನೇ ಸಂದರ್ಶನ ಮಾಡ್ಯಾನೆ’ ಸುದ್ದಿಯನ್ನು ನನ್ನ ಮುಖಕ್ಕೆ ಹಿಡಿಯಿತು.

‘ಸಾಮಾಜಿಕ ಮಾಧ್ಯಮಗಳಿಂದ ಚುನಾವಣೆ ಗೆಲ್ಲಕ್ಕೆ ಆಗಂಗಿಲ್ಲ ಅಂತ ಆಣಿಮುತ್ತನ್ನೂ ಉದುರಿಸ್ಯಾರೆ ಅವರು. 2024ರ ಚುನಾವಣೆ ಹತ್ತಿರ ಬಂತಲ್ಲ, ಹಿಂಗಾಗಿ ಬ್ಯಾರೆ ಥರದ ತಂತ್ರ ಹೂಸೆಯಾಕೆ ಹತ್ತಿರಬೇಕಲೇ’ ಎಂದೆ.

‘ತಂತ್ರದ ಹಂಗೇಕೆ ಎಮಗೆ, ಅಭಿವೃದ್ಧಿ ಮಂತ್ರವೇ ಸಾಕೆಮಗೆ’ ಬೆಕ್ಕಣ್ಣ ಹಾಡುತ್ತಲೇ ಹೇಳಿತು, ‘ಚಂದ್ರಯಾನದಿಂದ ಹಿಡಿದು ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33 ಪರ್ಸೆಂಟ್ ಮೀಸಲಾತಿವರೆಗೆ ಎಷ್ಟ್ ವಿಚಾರಗಳಲ್ಲಿ ಅಭಿವೃದ್ಧಿ ಸಾಧಿಸೀವಲ್ಲ’.

‘ಮೀಸಲಾತಿ ಅಂತ ಹೇಳಿಕೊಳ್ತಾನೇ ಮಹುವಾಗೆ ಮಾತಾಡೋ ಅವಕಾಶನೂ ಕೊಡದೆ ಸಂಸತ್ತಿನಿಂದ ಹೊರಗೆ ಹಾಕಿದ್ರಲ್ಲಲೇ’.

‘ನೋಡಾ ಒಂದ್ ತಿಳಕೋ, ಈಗಿನ ಕಾಲದಾಗೆ ಮನಿ ಬೀಗದಕೈನೂ ಯಾರಿಗಾರೆ ಕೊಡಬೌದು, ಆದರೆ ಯಾವುದೇ ಇ-ಮೇಲ್ ಖಾತೆಗಳ ಲಾಗಿನ್, ಪಾಸ್‌ವರ್ಡುಗಳನ್ನೆಲ್ಲ ಯಾರಿಗೂ ಕೊಡಬಾರದು. ಆಕಿ ಅಷ್ಟೆಲ್ಲ ಓದಿಕೊಂಡಾಕಿ, ಇಷ್ಟ್ ತಿಳಿವಳಿಕಿ ಇಲ್ಲೇನ್? ಅಷ್ಟೇ ಅಲ್ಲದೇ ಆಕಿ ಪ್ರಶ್ನೆಗಾಗಿ ಕಾಸು, ಉಡುಗೂರೆ ಎಲ್ಲಾ ತಗೊಂಡಾಳೆ’ ಬೆಕ್ಕಣ್ಣ ಜೋರುದನಿಯಲ್ಲಿ ವಾದ ಮಂಡಿಸಿತು.

‘ಆಕಿ ಸಂಸತ್ ಸದಸ್ಯರ ಪೋರ್ಟಲ್ ಲಾಗಿನ್, ಪಾಸ್‌ವರ್ಡು ಕೊಟ್ಟಿದ್ದು ತಪ್ಪಾಯಿತು. ಆದರೆ ಕಾಸು ತಗೊಂಡಾಳೆ ಅಂತ ಎಲ್ಲಿ ಸಾಬೀತಾಗೈತಿ? ಆಕಿನ್ನ ಉಚ್ಚಾಟಿಸಿದ ಹಂಗೇ ಆಕೆ ಎತ್ತಿದ ಅದಾನಿ ಕುರಿತ ಪ್ರಶ್ನೆಗಳನ್ನೂ ಉಚ್ಚಾಟನೆ ಮಾಡೂದೇನು?’

‘ಶಾಂತಂಪಾಪಂ! ಅದಾನಿ ಪ್ರಶ್ನಾತೀತ. ಅವ್ರ ಬಗ್ಗೆ ಪ್ರಶ್ನೆ ಎತ್ತಿದವ್ರು ಸೀದಾ ನರಕಕ್ಕೇ ಹೋಗತಾರೆ. ಆ ನರಕ ಎಂಥಾದು ಅನ್ನೂದು ಪ್ರಶ್ನೆ ಎತ್ತಿದವ್ರಿಗೆ ಮಾತ್ರ ಗೊತ್ತಾಗತೈತಿ! ಹ್ಹಹ್ಹಾ’ ಬೆಕ್ಕಣ್ಣ ಗಹಗಹಿಸಿತು.

ಸಂಗತ

ಆಚರಣೆಯ ಆಶಯ ಅರಿಯೋಣ

ಆಚರಣೆಗಳು ದಿನೇ ದಿನೇ ಮೌಲ್ಯ ಕಳೆದುಕೊಳ್ಳುತ್ತಿವೆ. ಅವು ಸ್ಫೂರ್ತಿ ತುಂಬಲು ಮತ್ತು ಕ್ರಿಯಾಶೀಲತೆ ಬೆಳೆಯಲು ಕಾರಣವಾಗಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಸಹಕಾರಿ ಸಪ್ತಾಹ ಕಾರ್ಯಕ್ರಮವೊಂದಕ್ಕೆ ಈಚೆಗೆ ತೆರಳಿದ್ದೆ. ಹೆಚ್ಚಿಗೆ ಜನ ಸೇರಿರಲಿಲ್ಲ. ಸಂಘಟಕರು ಕಾರ್ಯಕ್ರಮವನ್ನು ಬೇಗ ಮುಗಿಸುವ ಅವಸರದಲ್ಲಿದ್ದರು. ಅಧ್ಯಕ್ಷತೆ ವಹಿಸಬೇಕಾಗಿದ್ದ ಗಣ್ಯರು ಬರಲಿಲ್ಲ. ಬಂದಿದ್ದವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ನಿವೃತ್ತ ಶಿಕ್ಷಕರೊಬ್ಬರು ವಿಶೇಷ ಉಪನ್ಯಾಸ ನೀಡಿದರು. ಅವರು ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ಮಾತನಾಡಿದರು, ಆದರೆ ಸಹಕಾರಿ ರಂಗದ ಬಗ್ಗೆ ಚಕಾರ ಎತ್ತಲಿಲ್ಲ.

ತುರ್ತಾಗಿ ಒಂದು ಕೆಲಸಕ್ಕೆ ಹೋಗಬೇಕು ಎಂದು ಅಧ್ಯಕ್ಷರು ಭಾಷಣ ಮಾಡದೇ ಹೊರಟುಹೋದರು. ಸಿಹಿ ಹಂಚಿದ ಮೇಲೆ ಕಾರ್ಯಕ್ರಮ ಮುಕ್ತಾಯವಾಯಿತು. ಸರ್ಕಾರಿ ಪ್ರಾಯೋಜಿತ ಬಹಳಷ್ಟು ಆಚರಣೆಗಳು ಇದೇ ಮಾದರಿಯಲ್ಲಿ ನಡೆಯುತ್ತಿವೆ. ಆಚರಣೆಗಳ ಮೌಲ್ಯ ಕ್ಷೀಣಿಸತೊಡಗಿದೆ.

ಸಪ್ತಾಹ, ಜಯಂತಿ, ಮಹತ್ವದ ದಿನಾಚರಣೆಗಳ ಹಿಂದೆ ಸಮಾಜದ ಸಮಗ್ರ ವಿಕಾಸಕ್ಕೆ ಸ್ಫೂರ್ತಿ ತುಂಬುವ ಉದ್ದೇಶ ಮತ್ತು ಧ್ಯೇಯ ಅಡಗಿರುತ್ತವೆ. ಸಹಕಾರಿ ಸಪ್ತಾಹದಲ್ಲಿ ಸಹಕಾರಿ ರಂಗದ ಸಬಲೀಕರಣ, ಮುಚ್ಚಿದ ಸಹಕಾರಿ ಸಂಘಗಳ ಪುನಶ್ಚೇತನ, ಸಹಕಾರಿ ಸಂಘಟನೆಯಿಂದ ಆಗುವ ಸಾಮೂಹಿಕ ಉನ್ನತಿ, ನಾಯಕತ್ವದ ಗುಣ, ಹಂಚಿ ತಿನ್ನುವ ಸಹಕಾರಿ ಮನೋಭಾವವನ್ನು ಬೆಳೆಸುವ ಕುರಿತು ಚಿಂತನ–ಮಂಥನ ನಡೆಸುವ ಉದ್ದೇಶ ಇರುತ್ತದೆ. ಸಪ್ತಾಹ ಆಚರಣೆ ಒಂದು ವಾರ ನಡೆಯಬೇಕು. ಆದರೆ ಬಹಳಷ್ಟು ಕಡೆ ಶಿಷ್ಟಾಚಾರ ಎಂಬಂತೆ ಒಂದು ಸಭೆ–ಸಮಾರಂಭ ಮಾಡಿ ಮುಕ್ತಾಯಗೊಳಿಸುತ್ತಾರೆ.

ಇಂತಹ ಸಪ್ತಾಹಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಸಂಬಂಧಿಸಿದ ಕ್ಷೇತ್ರದ ಆಗುಹೋಗುಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಬೇಕು. ತಜ್ಞರ ಅಭಿಪ್ರಾಯ ತಿಳಿದುಕೊಳ್ಳಬೇಕು. ಹೊಸ ಹೊಸ ಬೆಳವಣಿಗೆ ಅರಿತುಕೊಳ್ಳಲು ವ್ಯವಸ್ಥೆ ಮಾಡಬೇಕು. ಇವೆಲ್ಲ ಸಪ್ತಾಹ ಆಚರಣೆ ಸಂದರ್ಭದಲ್ಲಿ ನಡೆಯಬೇಕಾದ ಕಾರ್ಯಗಳು. ಆದರೆ ಬಹಳಷ್ಟು ಆಚರಣೆಗಳು ನೆಪಮಾತ್ರಕ್ಕೆ ನಡೆಯುತ್ತಿವೆ.

ಮಹಾನ್ ವ್ಯಕ್ತಿಗಳ ಜಯಂತಿ, ಪುಣ್ಯಸ್ಮರಣೆ, ರಾಷ್ಟ್ರೀಯ ಹಬ್ಬಗಳು, ವಿವಿಧ ದಿನಾಚರಣೆಗಳು ಮತ್ತು ಸಪ್ತಾಹಗಳ ಸಂಖ್ಯೆ ತುಂಬ ದೊಡ್ಡದಿದೆ. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ದಿನಗಳನ್ನು ಆಚರಿಸಲಾಗುತ್ತಿದೆ. ಗ್ರಾಮ ಮಟ್ಟದ ಆಚರಣೆಗೆ ಪಂಚಾಯಿತಿ ಅಧಿಕಾರಿ, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ಸಂಘ ಸಂಸ್ಥೆಗಳಲ್ಲಿ ನಡೆಯುವ ಆಚರಣೆಗೆ ಆ ಸಂಸ್ಥೆಗಳ ಮುಖ್ಯಸ್ಥರು ಹೊಣೆಗಾರರು. ಅವರು ತಮ್ಮ ಸಿಬ್ಬಂದಿಗೆ ಸಿದ್ಧತೆ ನಡೆಸುವ ಹೊಣೆ ವಹಿಸುತ್ತಾರೆ. ಅವರು ಹಳೆಯ ಕಡತ ನೋಡಿ, ಹಿಂದಿನ ಮಾದರಿಯನ್ನೇ ಪುನರಾವರ್ತನೆ ಮಾಡುತ್ತಾರೆ. ಅಲ್ಲಿ ಹೊಸ ಚಿಂತನೆಗೆ ಅವಕಾಶವೇ ಇರುವುದಿಲ್ಲ.

ಅಂತರರಾಷ್ಟ್ರೀಯ ಮಹಿಳಾ ದಿನ, ಜಲ ದಿನ, ಆರೋಗ್ಯ ದಿನ, ಹುಲಿ ಸಂರಕ್ಷಣಾ ದಿನ, ಪ್ರವಾಸಿ ದಿನ, ಮತದಾನ ಜಾಗೃತಿ ದಿನ, ಎಂಜಿನಿಯರ್‌ಗಳ ದಿನ, ಪೋಷಕಾಂಶ ಸಪ್ತಾಹ, ಸಾಕ್ಷರತಾ ಸಪ್ತಾಹ, ವಿಜ್ಞಾನ ಸಪ್ತಾಹ… ಹೀಗೆ ಸಾಲು ಸಾಲು ಆಚರಣೆಗಳಿವೆ. ಹೊಸ ಆಚರಣೆಗಳೂ ಸೇರ್ಪಡೆಯಾಗುತ್ತವೆ. ಚಂದ್ರಯಾನ-3 ಯಶಸ್ವಿಯಾದ ಬಳಿಕ, ಆಗಸ್ಟ್ 23ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನ ಆಚರಿಸಲು ಕೇಂದ್ರ ಸರ್ಕಾರ ಮುಂದಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಮಹಾನ್ ವ್ಯಕ್ತಿಗಳ ಜನ್ಮದಿನಾಚರಣೆಯಲ್ಲಿ, ಶಾಲಾ ಪಠ್ಯದಲ್ಲಿ ಅವರ ಬಗ್ಗೆ ಇರುವ ವಿಷಯವನ್ನೇ ಗಿಳಿ ಪಾಠದಂತೆ ಒಪ್ಪಿಸಲಾಗುತ್ತದೆ. ಪಠ್ಯದ ಆಚೆಗೂ ಗಣ್ಯರ ಸಾಧನೆಗಳನ್ನು ದಿನಾಚರಣೆಯಲ್ಲಿ ಪರಿಚಯಿಸಬೇಕು. ಸಂಘಟಕರು ಆಸಕ್ತಿ ವಹಿಸಿದರೆ ಮಾತ್ರ ಇದು ಸಾಧ್ಯ. ಕೆಲವು ದಿನಾಚರಣೆಗಳು ಸಮುದಾಯ ಆಧಾರಿತವಾಗಿ ನಡೆಯುತ್ತಿವೆ. ಆ ಸಮುದಾಯದ ಜನ ಮಾತ್ರ ಭಾಗವಹಿಸುತ್ತಾರೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಸರ್ಕಾರಿ, ಅರೆ ಸರ್ಕಾರಿ, ಸಂಘ–ಸಂಸ್ಥೆಗಳ ಮೂಲಕ ನಡೆಯುವ ಆಚರಣೆಗಳಲ್ಲಿ ಸಮಾಜದ ಎಲ್ಲ ವರ್ಗದವರು ಭಾಗವಹಿಸುವ ಸೌಹಾರ್ದದ ವಾತಾವರಣವನ್ನು ನಿರ್ಮಿಸಬೇಕು. ಆಚರಣೆಗಳು ಜನರನ್ನು ಒಂದುಗೂಡಿಸುವ ಕೆಲಸ ಮಾಡಬೇಕೇ ವಿನಾ ವಿಭಜಿಸುವ ಕೆಲಸವನ್ನಲ್ಲ.

ಪ್ರತಿವರ್ಷ ಕೈಗಾರಿಕೆಗಳಲ್ಲಿ ಅಂತರರಾಷ್ಟ್ರೀಯ ಸುರಕ್ಷಾ ಸಪ್ತಾಹ ಆಚರಿಸಲಾಗುತ್ತದೆ. ‘ಶೂನ್ಯಹಾನಿ’ ಈ ವರ್ಷದ ಘೋಷವಾಕ್ಯ. ಕೈಗಾರಿಕೆಗಳಲ್ಲಿ ಈ ಸಪ್ತಾಹ ಆಚರಣೆಯನ್ನು ಕೈಗಾರಿಕಾ ಇಲಾಖೆ ಕಡ್ಡಾಯಗೊಳಿಸಿದೆ. ‘ಸುರಕ್ಷತೆ ಮೊದಲು’ ಎಂಬ ಉತ್ತಮ ಘೋಷವಾಕ್ಯವನ್ನು ಮತ್ತೆ ಮತ್ತೆ ಹೇಳಲಾಗುತ್ತದೆ. ಆದರೆ ಬಹಳಷ್ಟು ಕೈಗಾರಿಕೆಗಳು ಸಪ್ತಾಹ ಆಚರಿಸುವುದಿಲ್ಲ. ಕಾರ್ಖಾನೆಗಳ ಮುಂದೆ ಬ್ಯಾನರ್ ಕಟ್ಟಿ, ಫೋಟೊ ತೆಗೆದು, ಆಚರಿಸಿದಂತೆ ಸರ್ಕಾರಿ ಅಧಿಕಾರಿಗಳಿಗೆ ಮಾಹಿತಿ ಕಳಿಸುತ್ತಾರೆ. ‘ಕಾರ್ಮಿಕರನ್ನು ಒಳಗೊಂಡು ಸುರಕ್ಷತಾ ದಿನವನ್ನು ಯಾಕೆ ಆಚರಿಸುವುದಿಲ್ಲ?’ ಎಂದು ಕಾರ್ಖಾನೆ ಅಧಿಕಾರಿಯೊಬ್ಬರನ್ನು ಕೇಳಿದಾಗ, ‘ಕಾರ್ಮಿಕರಿಗೆ ಸುರಕ್ಷತೆಯ ಬಗ್ಗೆ ಹೆಚ್ಚಿಗೆ ಮಾಹಿತಿ ನೀಡಿದರೆ ಸುರಕ್ಷತೆಗೆ ಬೇಕಾಗುವ ಉಪಕರಣಗಳನ್ನು ಪೂರೈಸಲು ಬೇಡಿಕೆ ಇಡುತ್ತಾರೆ, ಚಳವಳಿ ಮಾಡುತ್ತಾರೆ. ಅದು ದೊಡ್ಡ ತಲೆನೋವು’ ಎಂದರು!

ದಿನಾಚರಣೆ, ಸಪ್ತಾಹಗಳ ಆಚರಣೆಯು ಸ್ಫೂರ್ತಿ, ಕ್ರಿಯಾಶೀಲತೆ ಬೆಳೆಯುವುದಕ್ಕೆ ಮತ್ತು ಉತ್ತಮ ಫಲಿತಾಂಶ ಬರುವುದಕ್ಕೆ ಕಾರಣವಾಗಬೇಕು. ಸಂಬಂಧಿಸಿದ ಎಲ್ಲರಲ್ಲೂ ಹೊಸ ಉತ್ಸಾಹ, ಹುಮ್ಮಸ್ಸು ಮೂಡಿಸಬೇಕು.

ವಾಚಕರ ವಾಣಿ

ಕನ್ನಡಕ್ಕೆ ಮನ್ನಣೆ: ಅಭಿನಂದನಾರ್ಹ ನಡೆ

‘ಲೋಕಸಭಾ ಕಲಾಪಕ್ಕೆ ಕನ್ನಡದ ಸೊಗಡು’ ಮತ್ತು ‘ಕೇಶವಾನಂದ ಭಾರತಿ ತೀರ್ಪು ಕನ್ನಡದಲ್ಲಿ ಲಭ್ಯ’ ಎಂಬ ಇತ್ತೀಚಿನ ಸುದ್ದಿಗಳನ್ನು ಓದಿ ಬಹಳ ಸಂತಸವಾಯಿತು. ಲೋಕಸಭೆಯ ಪ್ರತಿಯೊಂದು ಕಾರ್ಯಕಲಾಪವೂ ಈವರೆಗೆ ಬಹುಮಟ್ಟಿಗೆ ಹಿಂದಿ ಇಲ್ಲವೇ ಇಂಗ್ಲಿಷ್‌ನಲ್ಲಿ ಮಾತ್ರ ನಡೆಯುತ್ತಿತ್ತು. ಈಗ ಅದನ್ನು ಕನ್ನಡ ಸೇರಿದಂತೆ ದೇಶದ ಇಪ್ಪತ್ತೊಂದು ಭಾಷೆಗಳಿಗೆ ಭಾಷಾಂತರಿಸಲು ಸಂಸತ್ ಭವನದಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಅಂತೆಯೇ ಭಾರತೀಯ ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಯನ್ನು ವಿವರಿಸಿರುವ ಐತಿಹಾಸಿಕ ಕೇಶವಾನಂದ ಭಾರತಿ ಪ್ರಕರಣದ ತೀರ್ಪನ್ನು, ವೆಬ್ ಪುಟ ಸೃಷ್ಟಿಸಿ ಕನ್ನಡ ಸೇರಿದಂತೆ ಹತ್ತು ಭಾಷೆಗಳಲ್ಲಿ ಲಭ್ಯವಾಗುವಂತೆ ಸುಪ್ರೀಂ ಕೋರ್ಟ್ ಕ್ರಮ ಕೈಗೊಂಡಿರುವುದು ಕೂಡ ಒಂದು ಐತಿಹಾಸಿಕ ಸಂಗತಿ. ಒಕ್ಕೂಟದ ಎರಡು ಉನ್ನತ ಸಂಸ್ಥೆಗಳೂ ಅಭಿನಂದನೆಗೆ ಅರ್ಹವಾಗಿವೆ.

ಇಂತಹ ವ್ಯವಸ್ಥೆ ಎಂದೋ ಆಗಬೇಕಿತ್ತು. ಕರ್ನಾಟಕದಲ್ಲಿ ಆಡಳಿತ ವ್ಯವಹಾರ ಸಂಪೂರ್ಣವಾಗಿ ಈಗಲೂ ಕನ್ನಡದಲ್ಲಿ ಆಗುತ್ತಿಲ್ಲ. ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷೆಗಳ ಬಳಕೆಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಗತಿ ಆಗಲೇ ಇಲ್ಲ. ಹೈಕೋರ್ಟ್ ಬಿಟ್ಟು, ಕೆಳಹಂತದ ನ್ಯಾಯಾಲಯಗಳಲ್ಲಿ ವಾದ, ಪ್ರತಿವಾದ, ತೀರ್ಪಿನಂತಹ ಎಲ್ಲ ಪ್ರಕ್ರಿಯೆಗಳೂ ಕನ್ನಡದಲ್ಲಿ ನಡೆದರೆ ಚೆನ್ನ. ಆದರೆ ಕೆಲ ಜನಪರ ವಕೀಲರು ಕನ್ನಡದಲ್ಲಿ ವಾದ ಮಾಡುತ್ತಾರೆ. ಹೇಳಿಕೆ, ಸಾಕ್ಷ್ಯ ನೀಡಿಕೆ ಮಾತ್ರ ಕನ್ನಡದಲ್ಲಿ ನಡೆಯುತ್ತವೆ. ಉಳಿದಂತೆ ಎಲ್ಲ ಕೆಳಹಂತದ ನ್ಯಾಯಾಲಯಗಳಲ್ಲಿನ ಪ್ರಕ್ರಿಯೆ ಕೂಡ ಇಂಗ್ಲಿಷ್‌ನಲ್ಲಿ!

ಇಲ್ಲಿ ನ್ಯಾಯ ಕೇಳಿಬರುವ ಕಕ್ಷಿದಾರರಲ್ಲಿ ನೂರಕ್ಕೆ ತೊಂಬತ್ತರಷ್ಟು ಮಂದಿಗೆ ಕನ್ನಡ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ಸಮನ್ಸ್ ಕೂಡ ಇಂಗ್ಲಿಷ್‌ನಲ್ಲಿ ಇರುತ್ತದೆ. ಇದರ ಅರ್ಥ ತಿಳಿಯಲು ಅವರು ಪಡುವ ಪಡಿಪಾಟಲು ನೋಡಿದರೆ ಕರುಳು ಹಿಂಡಿದಂತೆ ಆಗುತ್ತದೆ. ಕರ್ನಾಟಕ ಎಂದು ಹೆಸರಾಗಿ ಐವತ್ತು ವರ್ಷಗಳಾಯಿತು. ಈ ಸುವರ್ಣ ಗಳಿಗೆಯಲ್ಲಿ ಒಂದಷ್ಟು ಒಳ್ಳೆಯ ತೀರ್ಮಾನಗಳನ್ನು ಸರ್ಕಾರ ತೆಗೆದುಕೊಳ್ಳಲಿ. ಆಗ ಮಾತ್ರ, ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂಬ ಘೋಷವಾಕ್ಯ ಅರ್ಥಪೂರ್ಣವಾಗುತ್ತದೆ.

ಎಚ್.ಟಿ.ಕೃಷ್ಣಮೂರ್ತಿ, ಶಿವಮೊಗ್ಗ

ಸರ್ವರ್ ಸಮಸ್ಯೆ ಬಗೆಹರಿಯುವುದೆಂದು?

ಎಸ್‌ಎಸ್‌ಸಿ ಮೂಲಕ ಸಿಆರ್‌ಪಿಎಫ್, ಬಿಎಸ್‌ಎಫ್‌ನಂತಹ ಅರೆಸೇನಾ ಪಡೆಗಳಿಗೆ ಅಧಿಸೂಚನೆ ಹೊರಡಿಸಿರುವುದು ಸರಿಯಷ್ಟೆ. ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಅರೆಸೇನಾ ಪಡೆಗಳ ಉದ್ಯೋಗ ನೇಮಕಾತಿ ಪರೀಕ್ಷೆಯನ್ನು ಕನ್ನಡ ಸೇರಿದಂತೆ ಇತರ ಕೆಲವು ಭಾರತೀಯ ಭಾಷೆಗಳಲ್ಲಿ ನಡೆಸುತ್ತಿರುವುದು ಅಭಿನಂದನಾರ್ಹ. ಕನ್ನಡದ ಮಕ್ಕಳು ಈ ಪರೀಕ್ಷೆ ತೆಗೆದುಕೊಳ್ಳಲು ತುಂಬಾ ಉತ್ಸಾಹದಲ್ಲಿದ್ದಾರೆ. ಈ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿದೆ. ಆದರೆ ವಿಪರೀತ ಸರ್ವರ್ ಬ್ಯುಸಿಯಿಂದ ಉದ್ಯೋಗ ಆಕಾಂಕ್ಷಿಗಳು ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ.

ಇದು ಎಸ್‌ಎಸ್‌ಸಿಯ ಯಾವತ್ತಿನ ಅತಿ ದೊಡ್ಡ ಸಮಸ್ಯೆಯೇ ಆಗಿದೆ. ಅದರ ಶಾಖಾ ಕಚೇರಿ ಬೆಂಗಳೂರಿನಲ್ಲಿಯೂ ಇದೆ. ಈ ಬಗ್ಗೆ ಅದು ಗಮನಹರಿಸಬೇಕಿದೆ. ಅಂತೆಯೇ ನಮ್ಮ ಸಂಸದರು ಸಹ ಸೂಕ್ತ ಕ್ರಮಕ್ಕೆ ಮುಂದಾಗಬೇಕಿದೆ. ಈ ಸಮಸ್ಯೆ ಬಗೆಹರಿಯದೇ ಹೋದರೆ, ಸರ್ಕಾರ ಬಲಗೈಯಲ್ಲಿ ಕೊಟ್ಟಿದ್ದನ್ನು ಎಡಗೈಯಲ್ಲಿ ಕಸಿದುಕೊಂಡಂತೆ ಆಗುತ್ತದೆ ಅಷ್ಟೆ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಭ್ರಷ್ಟ ಅಧಿಕಾರಿಗಳಿಗೆ ತ್ವರಿತವಾಗಿ ಶಿಕ್ಷೆ ಆಗಲಿ

ಘೋಷಿತ ಆದಾಯಕ್ಕಿಂತ ಹೆಚ್ಚು ಸಂಪಾದನೆ ಮಾಡಿದ ಸರ್ಕಾರಿ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ಮಾಡಿದಾಗ, ಅಪಾರ ಪ್ರಮಾಣದ ಚರ ಮತ್ತು ಸ್ಥಿರಾಸ್ತಿ ಪತ್ತೆಯಾಗುತ್ತಿರುತ್ತದೆ. ಇದು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತದೆ. ಆದರೆ, ಇಂತಹ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದರೆ ಸಾಲದು, ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಬೇಕು. ತಪ್ಪಿತಸ್ಥರಿಗೆ ಕಾಲಮಿತಿಯಲ್ಲಿ ಶಿಕ್ಷೆಯಾಗಬೇಕು. ಆಗಮಾತ್ರ ಲೋಕಾಯುಕ್ತ ಸಂಸ್ಥೆಯು ಭ್ರಷ್ಟ ಅಧಿಕಾರಿಗಳ ಪಾಲಿಗೆ ಸಿಂಹಸ್ವಪ್ನವಾಗಲು ಸಾಧ್ಯ.

ಪ್ರತಿಯೊಂದು ಸರ್ಕಾರಿ ಕಚೇರಿಯ ಮುಂಭಾಗದಲ್ಲಿ, ಲಂಚ ಕೇಳಿದರೆ ತಮಗೆ ದೂರು ನೀಡುವಂತೆ ದೊಡ್ಡ ಅಕ್ಷರಗಳಲ್ಲಿ ಲೋಕಾಯುಕ್ತ ಪೊಲೀಸರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಪ್ರದರ್ಶಿಸಲಾಗಿರುತ್ತದೆ. ಆದರೆ ಅಧಿಕಾರಿಗಳು ನೇರವಾಗಿ ಲಂಚ ಕೇಳಿದರೂ ಯಾರೂ ದೂರು ನೀಡಲು ಬಯಸುವುದಿಲ್ಲ. ಕಾರಣ, ತಮ್ಮ ಕೆಲಸ ಆದರೆ ಸಾಕು ಎಂಬ ದಯನೀಯ ಸ್ಥಿತಿ.

ಅಂಜನ್ ಕುಮಾರ್ ಎನ್., ಕಸಿನಾಯಕನಹಳ್ಳಿ, ಮಧುಗಿರಿ

ಚಲನಚಿತ್ರೋತ್ಸವ: ನಡೆಯಲಿ ಸಿದ್ಧತೆ

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು. ಆದರೆ ಇಲ್ಲಿಯವರೆಗೂ ಹಲವು ಅಕಾಡೆಮಿಗಳಿಗೆ ಅಧ್ಯಕ್ಷರನ್ನು, ಸದಸ್ಯರನ್ನು ನೇಮಿಸಿಲ್ಲ. ಪ್ರತಿವರ್ಷ ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಆಯೋಜನೆಗೊಳ್ಳುತ್ತಿತ್ತು. ಆದರೆ, ಚಲನಚಿತ್ರೋತ್ಸವದ ಉಸ್ತುವಾರಿ ವಹಿಸುತ್ತಿದ್ದ ಕರ್ನಾಟಕ ಚಲನಚಿತ್ರ ಅಕಾಡೆಮಿಗೆ ಇನ್ನೂ ಅಧ್ಯಕ್ಷರನ್ನೇ ನೇಮಿಸಿಲ್ಲ. ಜಾಗತಿಕ ಸಿನಿಮಾಗಳ ಆಯ್ಕೆ ಸಮಿತಿ ರಚನೆಯಾಗಿಲ್ಲ.

ಚಿತ್ರೋತ್ಸವದ ಸಿದ್ಧತೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ಮಾಹಿತಿ ಇಲ್ಲ. ಇದು ಸರ್ಕಾರದ ತೀರಾ ನಿರಾಶಾದಾಯಕ ನಡೆ ಮಾತ್ರವಲ್ಲ, ಪ್ರಪಂಚದಾದ್ಯಂತ ಸಿನಿಮಾರಂಗದಲ್ಲಿ ಆಗುತ್ತಿರುವ ಪ್ರಯೋಗಗಳನ್ನು ಅರಿಯಲು ಕುತೂಹಲದಿಂದ ಎದುರು ನೋಡುತ್ತಿರುವ ಆಸಕ್ತರಿಗೆ ನಿರಾಸೆ ಉಂಟುಮಾಡುವ ಸಂಗತಿ. ಈಗಲಾದರೂ ರಾಜ್ಯ ಸರ್ಕಾರ ಎಚ್ಚೆತ್ತು, ಚಲನಚಿತ್ರೋತ್ಸವ ನಡೆಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಿ.

ಚಂದ್ರಪ್ರಭ ಕಠಾರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಶ್ನೆಗಾಗಿ ಕಾಸು ಪ್ರಕರಣ

ಶಿಫಾರಸು ಇದ್ದರೂ ತನಿಖೆ ಇಲ್ಲ

ಲೋಕಸಭೆಯ 'ಸದಸ್ಯರ ಪೋರ್ಟಲ್'ಗೆ ಲಾಗಿನ್ ಆಗಲು ಬಳಸುವ ಐ.ಡಿ. ಮತ್ತು ಪಾಸ್‌ವರ್ಡ್ ಅನ್ನು ಅನಧಿಕೃತ ವ್ಯಕ್ತಿಯೊಂದಿಗೆ ಹಂಚಿಕೊಂಡಿದ್ದಾರೆ ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಲೋಕಸಭಾ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ. ಮಹುವಾ ಅವರ ವಿರುದ್ಧ ಇದ್ದ ಆರೋಪಗಳ ಪರಿಶೀಲನೆಗೆ ನೇಮಿಸಿದ್ದ ನೀತಿ ಸಮಿತಿಯು, ಉಚ್ಚಾಟನೆಯೂ ಸೇರಿ ಇನ್ನೂ ಮೂರು ಶಿಫಾರಸುಗಳನ್ನು ಮಾಡಿತ್ತು. ಆದರೆ ಸರ್ಕಾರವು ಈಗ ಉಚ್ಚಾಟನೆಯನ್ನಷ್ಟೇ ಮಾಡಿದೆ. ಈ ಆರೋಪಗಳಿಗೆ ಸಂಬಂಧಿಸಿದಂತೆ ಕಾಲಮಿತಿಯಲ್ಲಿ ತನಿಖೆ ನಡೆಸಬೇಕು ಎಂದೂ ಸಮಿತಿ ಶಿಫಾರಸು ಮಾಡಿತ್ತು. ತನಿಖೆಗೆ ಆದೇಶಿಸುವ ಬಗ್ಗೆ ಸರ್ಕಾರವು ಮಾತೇ ಆಡಿಲ್ಲ

● ಜಯಸಿಂಹ ಆರ್.

ಬಿಜೆಪಿಯ ನಿಶಿಕಾಂತ್ ದುಬೆ ಅವರು ಮಹುವಾ ಮೊಯಿತ್ರಾ ಮೇಲೆ ನೀಡಿದ್ದ ದೂರಿನಲ್ಲಿ, 'ತಮ್ಮ ಉದ್ಯಮಿ ಗೆಳೆಯ ದರ್ಶನ್ ಹಿರಾನಂದಾನಿ ಅವರಿಗೆ ಅನುಕೂಲ ಮಾಡಿಕೊಡಲು ಮಹುವಾ ಅವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ದರ್ಶನ್ ಅವರಿಗೆ ಅನುಕೂಲವಾಗುವಂತೆ ಪ್ರಶ್ನೆ ಕೇಳಲು ಹಣ ಪಡೆದಿದ್ದಾರೆ ಎಂಬ ಆರೋಪವಿದೆ. ಇದನ್ನು ಮರೆಮಾಚಲು ಅವರು ಉದ್ಯಮಿ ಗೌತಮ್ ಅದಾನಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಮೇಲೆ ವಾಗ್ದಾಳಿ ನಡೆಸುತ್ತಿದ್ದರು' ಎಂದು ಆರೋಪಿಸಿದ್ದರು.

ಮಹುವಾ ಅವರು ಹಣಕ್ಕಾಗಿ ಪ್ರಶ್ನೆ ಕೇಳಿದ್ದಾರೆ ಮತ್ತು ಅದಾನಿ, ಮೋದಿ ಮತ್ತು ಅಮಿತ್ ಶಾ ವಿರುದ್ಧ ಉದ್ದೇಶಪೂರ್ವಕವಾಗಿ ಲೋಕಸಭೆಯಲ್ಲಿ ವಾಗ್ದಾಳಿ ನಡೆಸಿದ್ದಾರೆ ಎಂದು ಸುಪ್ರೀಂ ಕೋರ್ಟ್ ವಕೀಲ ಜೈ ಅನಂತ್ ದೇಹದ್ರಾಯ್ ಅವರು ಇದೇ ಅಕ್ಟೋಬರ್‌ನಲ್ಲಿ ಸಿಬಿಐಗೆ ಸಲ್ಲಿಸಿದ್ದ ದೂರಿನ ಪ್ರತಿಯನ್ನೂ ದುಬೆ ಅವರು, ಲೋಕಸಭಾ ಸ್ಪೀಕರ್‌ಗೆ ಬರೆದಿದ್ದ ಪತ್ರದೊಂದಿಗೆ ಲಗತ್ತಿಸಿದ್ದರು.

ಈ ದೂರುಗಳ ಅನ್ವಯ ಪರಿಶೀಲನೆಗೆ ಮುಂದಾದ ನೀತಿ ಸಮಿತಿಯು, ತನ್ನ ಮುಂದೆ ಎರಡು ಪ್ರಮುಖ ಪ್ರಶ್ನೆಗಳನ್ನು ಇರಿಸಿಕೊಂಡಿತ್ತು. ಅದರಲ್ಲಿ ಮೊದಲನೆಯದು, 'ಮಹುವಾ ಅವರು ಸಂಸದರ ಪೋರ್ಟಲ್‌ನ ತಮ್ಮ ಲಾಗಿನ್ ಐ.ಡಿ ಮತ್ತು ಪಾಸ್‌ವರ್ಡ್ ಹಾಗೂ ಸಂಸದರ ಇ-ಮೇಲ್ ಐ.ಡಿ ಮತ್ತು ಪಾಸ್‌ವರ್ಡ್‌ಗಳನ್ನು ಅನಧಿಕೃತ ವ್ಯಕ್ತಿಗಳೊಂದಿಗೆ ಹಂಚಿಕೊಂಡಿದ್ದಾರೆ. ಇದು ಸಂಸತ್ತಿನ ನಡಾವಳಿಗೆ ವಿರುದ್ಧವೇ?' ಎಂಬುದಾಗಿತ್ತು.

ಎರಡನೆಯದು, 'ಮಹುವಾ ಅವರು ಉದ್ಯಮಿ ದರ್ಶನ್ ಹಿರಾನಂದಾನಿ ಅವರಿಂದ ನಗದು, ಉಡುಗೊರೆಗಳು ಮತ್ತು ಇತರ ಸವಲತ್ತುಗಳನ್ನು ಪಡೆದುಕೊಳ್ಳುವ ಮೂಲಕ ಸಂಸತ್ತಿನ ನಡಾವಳಿಗಳನ್ನು ಉಲ್ಲಂಘಿಸಿದ್ದಾರೆಯೇ?' ಎಂಬುದಾಗಿತ್ತು.

ಈ ಎರಡೂ ಪ್ರಶ್ನೆಗಳನ್ನು ಪರಿಶೀಲಿಸಲು ಸಮಿತಿಯು ವಕೀಲ ಜೈ ಅನಂತ್ ದೇಹದ್ರಾಯ್, ದರ್ಶನ್ ಹಿರಾನಂದಾನಿ ಮತ್ತು ಮಹುವಾ ಮೊಯಿತ್ರಾ ಅವರಿಂದ ವಿವರಣೆಗಳನ್ನು ಕೇಳಿತ್ತು. ದೇಹದ್ರಾಯ್ ಅವರು ಸಮಿತಿ ಮುಂದೆ ಹಾಜರಾಗಿ ಉತ್ತರ ನೀಡಿದ್ದರು. ಹಿರಾನಂದಾನಿ ಅವರು ದುಬೈನಿಂದಲೇ ತಮ್ಮ ಉತ್ತರದ ದೃಢೀಕೃತ ಪ್ರತಿಯನ್ನು ಕಳುಹಿಸಿದ್ದರು. ಮಹುವಾ ಅವರು ಸಮಿತಿ ಮುಂದೆ ಹಾಜರಾಗಿ ವಿವರಣೆ ನೀಡಿದ್ದರು. ಜತೆಗೆ ಗೃಹ ಸಚಿವಾಲಯ, ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದಲೂ ಹಲವು ಮಾಹಿತಿಗಳನ್ನು ಸಮಿತಿ ಕೇಳಿತ್ತು. ಆ ಎಲ್ಲಾ ಮಾಹಿತಿಗಳು ಮತ್ತು ವಿವರಣೆಗಳನ್ನು ಪರಿಶೀಲಿಸಿದ ಸಮಿತಿಯು, ವರದಿಯನ್ನು ಸಿದ್ದಪಡಿಸಿತ್ತು.

'ಮಹುವಾ ಅವರು ಈವರೆಗೆ 61 ಪ್ರಶ್ನೆಗಳನ್ನು ಕೇಳಿದ್ದಾರೆ. ಅದರಲ್ಲಿ 47 ಬಾರಿ ಸಂಸದರ ಪೋರ್ಟಲ್‌ನ ಅವರ ಖಾತೆಗೆ ದುಬೈನಿಂದ ಲಾಗಿನ್ ಆಗಲಾಗಿದೆ. ಅವರು ಈ ಅವಧಿಯಲ್ಲಿ (2019–2023) ಹಲವು ಬಾರಿ ದುಬೈಗೆ ಹೋಗಿದ್ದರೂ, ಅವರು ಅಲ್ಲಿದ್ದ ಒಮ್ಮೆಯೂ ಸಂಸದರ ಪೋರ್ಟಲ್‌ನ ಅವರ ಖಾತೆಗೆ ಲಾಗಿನ್ ಆಗಿಲ್ಲ. ಅವರ ಖಾತೆಯನ್ನು ಬೇರೆ ಯಾರೋ ಅನಧಿಕೃತ ವ್ಯಕ್ತಿ ಬಳಸುತ್ತಿದ್ದರು. ಅದು ದರ್ಶನ್ ಹಿರಾನಂದಾನಿಯೇ ಆಗಿದ್ದರು ಮತ್ತು ಅವರೇ ಆ ಪ್ರಶ್ನೆಗಳನ್ನು ಪೋರ್ಟಲ್‌ಗೆ ಅಪ್‌ಲೋಡ್ ಮಾಡಿದ್ದಾಗಿ ಹೇಳಿದ್ದಾರೆ. ಇದು ಸಂಸತ್ತಿನ ನಡಾವಳಿಯ ಉಲ್ಲಂಘನೆ. ಇದರಿಂದ ರಾಷ್ಟ್ರೀಯ ಭದ್ರತೆಗೂ ಧಕ್ಕೆಯಾಗುತ್ತದೆ. ರಹಸ್ಯ ಮಾಹಿತಿಗಳಿಗೆ ಕನ್ನ ಹಾಕುವ ಅಪಾಯವಿರುತ್ತದೆ. ಹೀಗಾಗಿ ಮಹುವಾ ಅವರಿಗೆ ಶಿಕ್ಷೆ ನೀಡಬೇಕು. ಅದು ಸಂಸತ್ತಿನಿಂದ ಉಚ್ಚಾಟನೆ ಮಾಡುವುದಕ್ಕಿಂತ ಕಡಿಮೆ ಆಗಿರಬಾರದು' ಎಂದು ಸಮಿತಿಯು ಶಿಫಾರಸು ಮಾಡಿತ್ತು. ಇದನ್ನು ಸರ್ಕಾರ ಈಗಾಗಲೇ ಮಾಡಿದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯು ಇನ್ನೊಂದು ಶಿಫಾರಸನ್ನೂ ಮಾಡಿತ್ತು. 'ಸಂಸದರ ಪೋರ್ಟಲ್ ಖಾತೆಯ ಲಾಗಿನ್ ವಿವರಗಳನ್ನು ಅನಧಿಕೃತ ವ್ಯಕ್ತಿಯೊಂದಿಗೆ ಹಂಚಿಕೊಂಡಿದ್ದು, ಇದು ಹೀನ ಮತ್ತು ಅಪರಾಧ ಕೃತ್ಯವಾಗಿದೆ. ಈ ಬಗ್ಗೆ ಸರ್ಕಾರವು ತಕ್ಷಣವೇ ಮತ್ತು ಕಾಲಮಿತಿಯ ತನಿಖೆಗೆ ಆದೇಶಿಸಬೇಕು' ಎಂದು ಸಮಿತಿ ಹೇಳಿತ್ತು. ಆದರೆ, ಈ ಶಿಫಾರಸನ್ನು ಸರ್ಕಾರ ಈವರೆಗೆ ಪರಿಗಣಿಸಿಲ್ಲ ಮತ್ತು ತನಿಖೆಗೆ ಆದೇಶಿಸಿಲ್ಲ.

ಎರಡನೇ ಪ್ರಶ್ನೆಗೆ ಸಂಬಂಧಿಸಿದಂತೆ ಸಮಿತಿಯು, 'ದರ್ಶನ್ ಹಿರಾನಂದಾನಿ ಅವರಿಂದ ರುಮಾಲು, ಲಿಪ್‌ಸ್ಟಿಕ್ ಮತ್ತು ಮೇಕಪ್ ಕಿಟ್ ಅನ್ನು ಉಡುಗೊರೆಯಾಗಿ ಪಡೆದಿರುವುದಾಗಿ, ಟ್ಯಾಕ್ಸಿ ಸೇವೆ ಪಡೆದಿರುವುದಾಗಿ ಸ್ವತಃ ಮಹುವಾ ಅವರೇ ಒಪ್ಪಿಕೊಂಡಿದ್ದಾರೆ. ದರ್ಶನ್ ಅವರಿಗೆ ಮಾಡಿಕೊಟ್ಟ ಅನುಕೂಲಕ್ಕೆ ಪ್ರತಿಯಾಗಿ ಮಹುವಾ ಇವುಗಳನ್ನು ಪಡೆದುಕೊಂಡಿದ್ದಾರೆ' ಎಂದು ವಿವರಿಸಿದೆ.

'ಆದರೆ ದರ್ಶನ್ ಮತ್ತು ಮಹುವಾ ಮಧ್ಯೆ ಹಣಕಾಸು ವ್ಯವಹಾರ ನಡೆಸಿದ್ದರ ಬಗ್ಗೆ ತನಿಖೆ ನಡೆಸಲು ಸಮಿತಿಯು ಶಕ್ತವೂ ಅಲ್ಲ, ನಮ್ಮ ಕೆಲಸವೂ ಅದಲ್ಲ. ಹೀಗಾಗಿ ಈ ಬಗ್ಗೆ ಸರ್ಕಾರವು ತಕ್ಷಣವೇ ಮತ್ತು ಕಾಲಮಿತಿಯಲ್ಲಿ ತನಿಖೆ ನಡೆಸಬೇಕು' ಎಂದು ಸಮಿತಿಯು ಶಿಫಾರಸು ಮಾಡಿತ್ತು. ಈ ಶಿಫಾರಸನ್ನೂ ಸರ್ಕಾರ ಪರಿಗಣಿಸಿಲ್ಲ ಮತ್ತು ಈ ಬಗ್ಗೆ ತನಿಖೆಗೆ ಆದೇಶಿಸಿಲ್ಲ.

'ಸಂಸದರು ಲಾಗಿನ್ ವಿವರ ಹಂಚಿಕೊಳ್ಳುತ್ತಾರೆ'

ಸಂಸದರ ಪೋರ್ಟಲ್‌ನಲ್ಲಿ ತಮ್ಮ ಖಾತೆಯ ಲಾಗಿನ್ ವಿವರಗಳನ್ನು ಹಂಚಿಕೊಂಡ ಒಂದೇ ಕಾರಣಕ್ಕೇ ಮಹುವಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ನೀತಿ ಸಮಿತಿಯು ತನ್ನ ವರದಿಯಲ್ಲಿ ಹೇಳಿತ್ತು. ಆದರೆ ಅದೇ ವರದಿಯಲ್ಲಿ, 'ಬಹುತೇಕ ಸಂಸದರು ತಮ್ಮ ಖಾತೆಯ ಲಾಗಿನ್ ವಿವರಗಳನ್ನು ಸಹಾಯಕರೊಂದಿಗೆ ಹಂಚಿಕೊಳ್ಳುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ' ಎಂದೂ ಹೇಳಿದೆ. 'ಹೀಗೆ ಲಾಗಿನ್ ವಿವರಗಳನ್ನು ಹಂಚಿಕೊಂಡಾಗ, ಪ್ರತಿ ಮೂರು ತಿಂಗಳಿಗೆ ಒಮ್ಮೆ ಪಾಸ್‌ವರ್ಡ್ ಬದಲಿಸಬೇಕು ಎಂದು ನಿಯಮಗಳು ಹೇಳುತ್ತವೆ. ಹೀಗಾಗಿ ಮೂರು ತಿಂಗಳಿಗೆ ಒಮ್ಮೆ ಪಾಸ್‌ವರ್ಡ್ ಬದಲಿಸಬೇಕು. ಹಾಗೆ ಮಾಡದಿದ್ದರೆ, ಹ್ಯಾಕರ್‌ಗಳು ಕನ್ನ ಹಾಕುವ ಸಂಭವವಿರುತ್ತದೆ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಒಂದೆಡೆ ಬಹುತೇಕ ಸಂಸದರು ಲಾಗಿನ್ ವಿವರ ಹಂಚಿಕೊಳ್ಳುತ್ತಾರೆ ಎಂಬುದನ್ನು ಒಪ್ಪಿಕೊಂಡಿರುವ ಸಮಿತಿಯು, ಇನ್ನೊಂದೆಡೆ ಲಾಗಿನ್ ವಿವರ ಹಂಚಿಕೊಂಡ ಕಾರಣಕ್ಕೇ ಮಹುವಾ ಅವರ ಉಚ್ಚಾಟನೆಗೆ ಶಿಫಾರಸು ಮಾಡಿದೆ.

ದೂರಿನ ಬಹುಮುಖ್ಯ ಭಾಗವನ್ನೇ ಕೈಬಿಟ್ಟ ಸಮಿತಿ

ಜೈ ಅನಂತ್ ದೇಹದ್ರಾಯ್ ಅವರು ಸಿಬಿಐಗೆ ಸಲ್ಲಿಸಿದ್ದ ದೂರು ಮತ್ತು ನಿಶಿಕಾಂತ್ ದುಬೆ ಅವರು ಸ್ಪೀಕರ್‌ಗೆ ಬರೆದಿದ್ದ ಪತ್ರದಲ್ಲಿ ಮಹುವಾ ಅವರು ಈವರೆಗೆ ಲೋಕಸಭೆಯಲ್ಲಿ ಕೇಳಿದ್ದ ಪ್ರಶ್ನೆಗಳ ಸಂಖ್ಯೆಯ ಬಗ್ಗೆ ಉಲ್ಲೇಖಿಸಿದ್ದರು. ಆ ಪ್ರಕಾರ ಮಹುವಾ ಅವರು ಲೋಕಸಭೆಯಲ್ಲಿ 2019ರಿಂದ ಈವರೆಗೆ ಒಟ್ಟು 61 ಪ್ರಶ್ನೆಗಳನ್ನು ಕೇಳಿದ್ದಾರೆ. ಅದರಲ್ಲಿ 50 ಪ್ರಶ್ನೆಗಳು ಅದಾನಿ ಗುಂಪಿಗೆ ಸಂಬಂಧಿಸಿದಂತೆ ಮತ್ತು ದರ್ಶನ್ ಹಿರಾನಂದಾನಿ ಕಂಪನಿಗೆ ಸಂಬಂಧಿಸಿದ್ದಾಗಿವೆ. ಈ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕು ಎಂದು ದೇಹದ್ರಾಯ್ ಅವರು ಸಿಬಿಐಗೆ ಸಲ್ಲಿಸಿದ್ದ ದೂರಿನಲ್ಲಿ ಕೋರಿದ್ದರು. ದುಬೆ ಅವರೂ ಇದನ್ನೇ ಆಗ್ರಹಿಸಿದ್ದರು.

ಮಹುವಾ ಅವರು ಕೇಳಿದ್ದ ಎಲ್ಲಾ ದೂರುಗಳು, ಆ ದೂರುಗಳು ದರ್ಶನ್ ಅವರಿಗೆ ಹೇಗೆ ಅನುಕೂಲ ಮಾಡಿಕೊಟ್ಟಿವೆ ಮತ್ತು ಅದಾನಿ ವಿರುದ್ಧ ಯಾವ ಪ್ರಶ್ನೆ ಕೇಳಿದ್ದಾರೆ ಎಂಬ ವಿವರಗಳನ್ನು ದೇಹದ್ರಾಯ್ ತಮ್ಮ ದೂರಿನಲ್ಲಿ ದಾಖಲೆ ಸಮೇತ ವಿವರಿಸಿದ್ದರು. ಈ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಿತ ಸಚಿವಾಲಯವು ನೀಡಿರುವ ಉತ್ತರಗಳನ್ನೂ ದೇಹದ್ರಾಯ್ ತಮ್ಮ ದೂರಿನ ಪ್ರತಿಯಲ್ಲಿ ಲಗತ್ತಿಸಿದ್ದಾರೆ.

2019ರ ಜುಲೈ 8ರಂದು ಮಹುವಾ ಅವರು, 'ಸರ್ಕಾರಿ ಕಂಪನಿಯಾದ ಗೇಲ್ (ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್) ಒಡಿಶಾದ ಪಾರಾದೀಪ್ ಬಂದರು ಟ್ರಸ್ಟ್ ಜೊತೆಗೆ ತೇಲುವ ಅನಿಲ ಸಂಗ್ರಹಾಗಾರ ನಿರ್ಮಿಸುವ ಸಂಬಂಧ 2013ರಲ್ಲಿ ₹2,485 ಕೋಟಿ ಮೊತ್ತದ ಒಪ್ಪಂದಕ್ಕೆ ಸಹಿ ಹಾಕಿತ್ತು. 2015ರಲ್ಲಿ ಗೇಲ್ ಈ ಒಪ್ಪಂದವನ್ನು ಏಕಾಏಕಿ ಕೈಬಿಟ್ಟಿತ್ತು. ನಂತರ ಗೇಲ್ ಮತ್ತು ಐಒಸಿಎಲ್ ಜಂಟಿಯಾಗಿ ಧರ್ಮಾ ಪೋರ್ಟ್ ಕಂಪನಿಯ ಸಂಗ್ರಹಾಗಾರಗಳನ್ನು ಬಾಡಿಗೆಗೆ ಬಳಸಿಕೊಳ್ಳುವ ಒಪ್ಪಂದಕ್ಕೆ ಸಹಿ ಹಾಕಿದ್ದವು. ಮೂಲ ಯೋಜನೆ ₹2,485 ಕೋಟಿ ಮೊತ್ತದ್ದಾಗಿತ್ತು. ಆದರೆ ಆನಂತರ ಎರಡೂ ಕಂಪನಿಗಳು ಮಾಡಿಕೊಂಡಿರುವ ಬಾಡಿಗೆ ಒಪ್ಪಂದದ ಒಟ್ಟು ಮೊತ್ತ ₹34,500 ಕೋಟಿಯಾಗುತ್ತದೆ. ಮೂಲ ಯೋಜನೆಯನ್ನು ಕೈಬಿಟ್ಟಿದ್ದು ಏಕೆ' ಎಂದು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದರು.

ಜತೆಗೆ, 'ಈ ಯೋಜನೆಯ ವೆಚ್ಚವಾದ ₹34,500 ಕೋಟಿಯನ್ನು ಗ್ರಾಹಕರಿಂದಲೇ ಸಂಗ್ರಹಿಸಲು ಯೋಜಿಸಲಾಗಿದೆ ಎಂಬುದು ನಿಜವೇ' ಎಂದೂ ಪ್ರಶ್ನಿಸಿದ್ದರು.

ಇದೇ ಯೋಜನೆಗೆ ಸಂಬಂಧಿಸಿದಂತೆ ಮಹುವಾ ಅವರು ಲೋಕಸಭೆಯಲ್ಲಿ ಮತ್ತಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. 'ಯಾವುದೇ ಟೆಂಡರ್ ಕರೆಯದೆಯೇ ಧರ್ಮಾ ಪೋರ್ಟ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ? ಟೆಂಡರ್ ಕರೆದಿದ್ದರೆ ಅದರ ವಿವರಗಳನ್ನು ನೀಡಿ. ವಾರ್ಷಿಕ ಬಾಡಿಗೆ ವಿವರಗಳನ್ನು ನೀಡಿ' ಎಂದು ಮಹುವಾ ಕೋರಿದ್ದರು.

ಮಹುವಾ ಅವರ ಪ್ರಶ್ನೆಯಲ್ಲಿ ಉಲ್ಲೇಖಿಸಲಾದ 'ಧರ್ಮಾ ಪೋರ್ಟ್' ಕಂಪನಿಯ ಒಡೆತನವು ಅದಾನಿ ಸಮೂಹದ್ದೇ ಆಗಿದೆ. ದೇಹದ್ರಾಯ್ ಅವರು ಸಿಬಿಐಗೆ ನೀಡಿರುವ ದೂರಿನಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. ಈ ಎಲ್ಲಾ ಪ್ರಶ್ನೆಗಳು ಅದಾನಿ ಅವರ ಕುರಿತಾದದ್ದು ಎಂದೂ ಅವರು ಆರೋಪಿಸಿದ್ದಾರೆ. ಈ ಬಗ್ಗೆ ವಿಸ್ತೃತ ತನಿಖೆ ನಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಆದರೆ ಅದಾನಿ ಕುರಿತಾದ ಪ್ರಶ್ನೆಗಳ ಬಗ್ಗೆ ಸಮಿತಿಯು ದೇಹದ್ರಾಯ್, ಹಿರಾನಂದಾನಿ ಮತ್ತು ಮಹುವಾ ಅವರ ಬಳಿ ಯಾವ ಪ್ರಶ್ನೆಯನ್ನೂ ಕೇಳಿಲ್ಲ. ತನ್ನ ವರದಿಯಲ್ಲಿಯೂ ಈ ಆರೋಪದ ಬಗ್ಗೆ ಏನನ್ನೂ ಹೇಳಿಲ್ಲ. ಸರ್ಕಾರವೂ ಈ ಬಗ್ಗೆ ಯಾವ ಪ್ರತಿಕ್ರಿಯೆ ನೀಡಿಲ್ಲ. ದೇಹದ್ರಾಯ್ ಅವರು ನೀಡಿದ್ದ ದೂರನ್ನು ಸಿಬಿಐ ಪರಿಗಣಿಸಿದೆಯೇ ಎಂಬುದರ ಬಗ್ಗೆ ಮಾಹಿತಿ ಇಲ್ಲ. 'ಅದಾನಿಗೆ ಸರ್ಕಾರವು ನೆರವಾಗಿರುವುದು ಬಹಿರಂಗವಾಗುತ್ತದೆ ಎಂದೇ ಸಮಿತಿಯು ಈ ಅಂಶಗಳನ್ನು ಪರಿಶೀಲನೆ ವೇಳೆ ಕಡೆಗಣಿಸಿದೆ' ಎಂದು ಮಹುವಾ ಮೊಯಿತ್ರಾ ಆರೋಪಿಸಿದ್ದರು.

ಆಧಾರ: ಲೋಕಸಭೆಯ ನೀತಿ ಸಮಿತಿಯ ವರದಿ, ನಿಶಿಕಾಂತ್ ದುಬೆ ಅವರು ಲೋಕಸಭಾ ಸ್ಪೀಕರ್ ಅವರಿಗೆ ಬರೆದ ಪತ್ರ, ಪಿಟಿಐ

ನೈಜ, ಕಲ್ಪನೆಯ ಮಿಶ್ರಣ ಈ 'ಕೈವ'

'ಬನಾರಸ್' ಎಂಬ ಭಿನ್ನವಾದ ಸಿನಿಪ್ರಯೋಗದ ಬಳಿಕ ನಿರ್ದೇಶಕ ಜಯತೀರ್ಥ ಅವರು ನೈಜ ಘಟನೆಯ ಜಾಡು ಹಿಡಿದು ಹೊರಟು, ರೌಡಿಸಂ ಲೋಕಕ್ಕೆ ಹೆಜ್ಜೆ ಇಟ್ಟು 'ಕೈವ'ನನ್ನು ತೆರೆಗೆ ತಂದಿದ್ದಾರೆ. ಮಚ್ಚು, ಲಾಂಗುಗಳ ಲೋಕದಲ್ಲಿ ಪ್ರೇಮಕಥೆಯೊಂದು ಸಾಮಾನ್ಯ. ಇಲ್ಲಿಯೂ ಒಂದು ಹದವಾದ ಪ್ರೇಮಕಥೆಯಿದೆ; ಅದೇ ರೀತಿ ರಕ್ತದೋಕುಳಿಯೂ ಹರಿದಿದೆ.

ನಾವು ನೋಡಿದ ಸಿನಿಮಾ

ಕೈವ

- **ರಚನೆ ಮತ್ತು ನಿರ್ದೇಶನ:** ಜಯತೀರ್ಥ
- **ನಿರ್ಮಾಣ:** ರವೀಂದ್ರಕುಮಾರ್
- **ತಾರಾಗಣ:** ಧನವೀರ್, ಮೇಘ ಶೆಟ್ಟಿ, ಮಹಾಂತೇಶ್ ಹಿರೇಮಠ್, ಜಯರಾಮ್ ಕಾರ್ತಿಕ್, ರಮೇಶ್ ಇಂದಿರಾ, ನಂದಗೋಪಾಲ್, ಉಗ್ರಂ ಮಂಜು, ರಾಘು ಶಿವಮೊಗ್ಗ, ಬಿ.ಎಂ.ಗಿರಿರಾಜ್ ಮತ್ತಿತರರು

1983ರಲ್ಲಿ ನಡೆದ ನೈಜ ಕಥೆ ಇದಾಗಿದೆ. ಅದಕ್ಕೆ ಒಂದಿಷ್ಟು ಕಲ್ಪನೆಯ ಹೂರಣವನ್ನು ನಿರ್ದೇಶಕರು ಬೆರೆಸಿದ್ದಾರೆ. ಬೆಂಗಳೂರಿನ ತಿಗಳರಪೇಟೆ ಸುತ್ತಮುತ್ತ ನಡೆಯುವ ಘಟನೆಗಳೇ ಸಿನಿಮಾದ ಕಥಾಹಂದರ. ಕೆಲಸ ಅರಸುತ್ತಾ ನೇಕಾರರ ಅನಾಥ ಹುಡುಗ 'ಕೈವ'(ಧನವೀರ್) ಬೆಂಗಳೂರು ತಲುಪುತ್ತಾನೆ. ಕೈವಾರದ ಈ ಬಂಡೆ ಕ್ರೀಡೆಯಲ್ಲಿ ಮುಂದು. ಕರಗ ಉತ್ಸವದ ಸಂದರ್ಭದಲ್ಲಿ 'ಸಲ್ಮಾ'(ಮೇಘ ಶೆಟ್ಟಿ) ಎಂಬಾಕೆಯ ಭೇಟಿಯಿಂದ 'ಕೈವ' ಕರಗುತ್ತಾನೆ. ಇವರಿಬ್ಬರ ಈ ಪ್ರೀತಿಯ ಪಯಣದ ನಡುವೆ ನಡೆಯುವ ಘಟನೆಯೊಂದು ಇಡೀ ಸಿನಿಮಾಗೆ ತಿರುವು ನೀಡುತ್ತದೆ. 'ಕೈವ' ರಕ್ತದೋಕುಳಿಯಲ್ಲಿ ಮಿಂದೇಳುತ್ತಾನೆ; ಅಲ್ಲಿಂದ ರಕ್ತವರ್ಷ...

ಈ ಸಿನಿಮಾ ಮೂಲಕ ಹೊಸ ಜಾನರ್‌ಗೆ ಜಯತೀರ್ಥ ಕೈಹಾಕಿದ್ದಾರೆ. ಅದರಲ್ಲಿ ಗೆದ್ದಿದ್ದಾರೆ ಎನ್ನಲೂಬಹುದು. 1983ಕ್ಕೆ ಇಳಿದು ಆ ಕಾಲದ ಭೂಗತ ಲೋಕವನ್ನು, ಅವರ ದಂಧೆಗಳನ್ನು 'ಪಕಾಲಿ', 'ತಂಬು' ಮುಂತಾದ ಸಾಲು ಸಾಲು ಭಿನ್ನ ಪಾತ್ರಗಳ ಮೂಲಕ ಅವರು ತೆರೆಗೆ ತಂದಿದ್ದಾರೆ. ಈ ಹಂತದಲ್ಲಿ ಪಾತ್ರಗಳ ಆಯ್ಕೆ ವಿಚಾರದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಜಯರಾಮ್ ಕಾರ್ತಿಕ್, ರಮೇಶ್ ಇಂದಿರಾ, ಉಗ್ರಂ ಮಂಜು, ರಾಘು ಶಿವಮೊಗ್ಗ, ಬಿ.ಎಂ. ಗಿರಿರಾಜ್ ಮತ್ತಿತರರು ಇಲ್ಲಿನ ಪಾತ್ರಗಳಿಗೆ ಜೀವತುಂಬಿದ್ದಾರೆ. ಆರಂಭದಲ್ಲಿ ಧುಮ್ಮಿಕ್ಕುವ ಚಿತ್ರಕಥೆ ಕುತೂಹಲ ಹೆಚ್ಚಿಸುತ್ತದೆ. ಈ ವೇಗಕ್ಕೆ ಸರಿಯಾಗಿ ಪ್ರೇಮಕಥೆಯನ್ನೂ ಹೆಣೆದಿದ್ದರೆ ಸಿನಿಮಾ ಇನ್ನಷ್ಟು ಆಕರ್ಷಕವಾಗುತ್ತಿತ್ತು. ಕೈವ–ಸಲ್ಮಾ ನಡುವಿನ ಹಲವು ದೃಶ್ಯಗಳನ್ನು ಚುಟುಕಾಗಿಸಬಹುದಿತ್ತು. ಠಾಣೆಯೊಳಗೆ 'ಕಬ್ಬಿಣದ ಸರಳುಗಳ ಒಳಗೆ' ಬಂಧಿಯಾಗಿದ್ದ 'ಕೈವ' ಹೇಗೆ ಹೊರಬೀಳುತ್ತಾನೆ ಎನ್ನುವುದು ತರ್ಕಕ್ಕೆ ಸಿಗದ ವಿಷಯ!

ಧನವೀರ್ ಹಾಗೂ ಮೇಘ ಶೆಟ್ಟಿ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಮೇಘ ಅವರ ನಟನೆಗೆ ಹೆಚ್ಚು ಅಂಕ ಸಲ್ಲಬೇಕು. ರಮೇಶ್ ಇಂದಿರಾ ತಮ್ಮ ಮಾತಿನ ಧಾಟಿಯಲ್ಲೇ ಸೆಳೆಯುತ್ತಾರೆ. ಉಗ್ರಂ ಮಂಜು ನಟನೆಯ ಶೈಲಿ ಇಷ್ಟವಾಗುತ್ತದೆ. ಸಂಭಾಷಣೆ ಇಡೀ ಚಿತ್ರದ ಆಸ್ತಿ. 'ಕಲೀಂ' ಎಂಬ ರೌಡಿಯ ಕೊಲೆಯ ದೃಶ್ಯದಲ್ಲಿನ ಸಂಭಾಷಣೆ ಈ ಮಾತಿಗೆ ಸಾಕ್ಷಿಯಂತಿದೆ. ಮರೆಯಾಗುತ್ತಿರುವ ತೊಗಲುಗೊಂಬೆಯಾಟವನ್ನು ಬಳಸಿಕೊಂಡು ಚಿತ್ರದ ಆರಂಭದಲ್ಲಿ ಕರಗದ ಇತಿಹಾಸವನ್ನು ತೆರೆಮೇಲೆ ತಂದಿರುವುದು ಶ್ಲಾಘನೀಯ.

-ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಆರೋಪದ ಮೇಲೆ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಲೋಕಸಭೆಯಿಂದ ಉಚ್ಚಾಟನೆ ಮಾಡಲಾಗಿದೆ. ಲೋಕಸಭೆಯಿಂದ ಹೊರಹೋಗಲು ನಿರಾಕರಿಸಿದ ಅವರನ್ನು ಪೊಲೀಸರು ಎಳೆದುಕೊಂಡು ಹೋದರು' ಎಂಬ ವಿವರ ಇರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪೊಲೀಸರು ಮಹುವಾ ಅವರನ್ನು ಹೊತ್ತೊಯ್ಯುತ್ತಿರುವ ದೃಶ್ಯಗಳು ಆ ವಿಡಿಯೊದಲ್ಲಿದೆ. ಆದರೆ ವಿಡಿಯೊ ಜತೆಗೆ ಹಂಚಿಕೊಂಡಿರುವ ಮಾಹಿತಿಗೂ, ವಿಡಿಯೊಗೂ ಸಂಬಂಧವಿಲ್ಲ.

✓ ಲೋಕಸಭೆಯಿಂದ ಮಹುವಾ ಅವರನ್ನು ಉಚ್ಚಾಟನೆ ಮಾಡಿದ್ದು ಇದೇ ಡಿಸೆಂಬರ್ 8ರಂದು. ಆಗ ಮಹುವಾ ಅವರೇ ಲೋಕಸಭೆಯಿಂದ ಹೊರನಡೆದು ಬಂದಿದ್ದರು. ಅವರನ್ನು ಪೊಲೀಸರು ಎಳೆದೊಯ್ದಿದ್ದರು ಎಂಬುದು ಸುಳ್ಳು. ಈ ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿರುವ ವಿಡಿಯೊ ಹಳೆಯದ್ದು. ಇದೇ ಅಕ್ಟೋಬರ್ 4ರಂದು ದೆಹಲಿಯ ಕೃಷಿ ಭವನದ ಎದುರು ಮಹುವಾ ಅವರೂ ಸೇರಿ ಟಿಎಂಸಿಯ ಹಲವು ನಾಯಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಆಗ ಪೊಲೀಸರು ಅವರನ್ನು ಎಳೆದೊಯ್ದಿದ್ದರು. ಆ ವಿಡಿಯೊವನ್ನೇ ಈಗ ಲೋಕಸಭೆಯಿಂದ ಮಹುವಾ ಅವರನ್ನು ಪೊಲೀಸರು ಎಳೆದೊಯ್ದರು ಎಂಬ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಡಿಸೆಂಬರ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತ್ರಯೋದಶಿ ಗಂ. 07-11 ನಂತರ ಚತುರ್ದಶಿ ಗಂ. 30-25 ನಕ್ಷತ್ರ: ವಿಶಾಖ ಗಂ. 12-14 ಯೋಗ: ಸುಕರ್ಮ ಗಂ 20-58 ಕರಣ: ವಣಿಜ ಗಂ. 07-11, ವೃಶ್ಚಿಕ ಮಾಸದ 25 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 3. ರಾಹುಕಾಲ : ಬೆಳಗ್ಗೆ 07-30 – 09-00
ಸೂರ್ಯೋದಯ : 06-47 ಸೂರ್ಯಾಸ್ತ : 06-01
ಮುಸ್ಲಿಂ ದಿನಾಂಕ : 26 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 7, 3

ಮೇಷ: ನಿಮ್ಮೊಳಗಿನ ವಿಶೇಷವಾದ ಶಕ್ತಿ ಪ್ರಕಾಶಿಸಲಿದೆ. ಅದು ನಿಮಗೆ ಅಚ್ಚರಿಯನ್ನುಂಟು ಮಾಡಬಹುದು. ಸಂಸಾರದ ವಿಷಯಗಳತ್ತ ಹೆಚ್ಚು ಗಮನ ಹರಿಸಬೇಕು. ಸಹವರ್ತಿಗಳು ನಿಮ್ಮ ಬೆಂಬಲಕ್ಕೆ ಬರಲಿದ್ದಾರೆ.

ವೃಷಭ: ಕಚೇರಿಯಲ್ಲಿ ಮಹತ್ವದ ಯೋಜನೆಯೊಂದಕ್ಕೆ ನಿಮ್ಮ ಸೃಜನಾತ್ಮಕ ಕಲೆಯನ್ನು ಬಳಸಿಕೊಳ್ಳಲಿದ್ದೀರಿ. ಈ ಮೂಲಕ ಅಧಿಕಾರಿಗಳ ಗಮನ ಸೆಳೆಯಲಿದ್ದೀರಿ. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರುವುದು ಒಳಿತು.

ಮಿಥುನ: ಧನಾಗಮನ ಉತ್ತಮವಾಗಿರುವ ಕಾರಣ ಬಹುದಿನಗಳ ಸಾಲದಿಂದ ಮುಕ್ತರಾಗಲಿದ್ದೀರಿ. ವೈಯಕ್ತಿಕ ಸಮಸ್ಯೆಗಳು ಬಗೆಹರಿಯಲಿವೆ. ಕಷ್ಟದ ದಿನಗಳು ದೂರವಾಗಿ ಸುಖ ನೆಮ್ಮದಿಯ ಭಾವ ನಿಮ್ಮಲ್ಲಿ ಮೂಡಲಿದೆ.

ಕರ್ಕಾಟಕ: ವಂಶ ಪಾರಂಪರ್ಯವಾಗಿ ಬಂದ ನಿಮ್ಮ ಉದ್ಯೋಗದಲ್ಲಿ ಈಗ ಹೆಚ್ಚಿನ ಏಳಿಗೆ ಕಾಣುವಿರಿ. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ. ದಂತವೈದ್ಯ ವೃತ್ತಿಯವರಿಗೆ ಅನುಕೂಲದ ದಿನವಿದು.

ಸಿಂಹ: ಕಾರ್ಮಿಕರಲ್ಲಿ ಉಂಟಾಗಿದ್ದ ಅನುಮಾನಗಳನ್ನು ನಿವಾರಿಸಿ ಕೆಲಸಗಳು ಸುಗಮವಾಗಿ ಸಾಗಲು ಶ್ರಮ ವಹಿಸಬೇಕಾಗಲಿದೆ. ಬುದ್ಧಿವಂತಿಕೆಯಿಂದ ಕೆಲಸಗಳಲ್ಲಿ ಯಶಸ್ಸುಗಳಿಸಿಕೊಳ್ಳುವಿರಿ. ಯಾವುದಕ್ಕೂ ಹೆದರುವ ಅಗತ್ಯವಿಲ್ಲ.

ಕನ್ಯಾ: ಹಣಕಾಸು ವ್ಯವಹಾರದಲ್ಲಿ ಸೂಕ್ತ ರೀತಿಯ ದಾಖಲೆ ಕಾಪಾಡಿಕೊಳ್ಳುವುದರಿಂದ ಅನುಕೂಲವಾಗಲಿದೆ. ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ತುಲಾ: ಇಂದಿನ ನಿಮ್ಮ ಮೃದು ಧೋರಣೆ, ಹಾಸ್ಯ ಮನೋಭಾವ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸಲಿದೆ. ಸ್ನೇಹದಿಂದ ಇದ್ದರೆ, ನಿಮ್ಮ ಕೆಲಸಕ್ಕೆ ಕುಟುಂಬದ ಸಹಕಾರ ಸಿಗಲಿದೆ. ಇಲ್ಲವಾದಲ್ಲಿ ತೊಂದರೆಯಾಗುವ ಸಾಧ್ಯತೆ ಇದೆ.

ವೃಶ್ಚಿಕ: ನಿಮ್ಮ ಮನಸ್ಥಿತಿ, ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಿರಿ ಸೂಕ್ತವಾದ ಮಾರ್ಗದರ್ಶನ ಸಿಗುವುದು. ನಿಮ್ಮ ಕೆಲಸಕ್ಕೆ ಸಮಯದ ಅಭಾವ ತೋರಲಿದೆ. ನಿರ್ಧಾರ ತೆಗೆದುಕೊಳ್ಳಲು ಗೊಂದಲ ಉಂಟಾಗಲಿದೆ.

ಧನು: ಜಾಹೀರಾತುಗಳಂತಹ ವಿಚಾರದಿಂದ ಪ್ರಚಾರ ಕಾರ್ಯಗಳು ಸಮರ್ಪಕವಾಗಿ ನಡೆಯಲಿದೆ. ಮಗನಿಗೆ ಶ್ರೀಮಂತ ಮನೆತನದ ಸಂಬಂಧ ಕೂಡಿಬರಲಿದೆ. ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸಲಿದ್ದೀರಿ.

ಮಕರ: ಯಾವುದೇ ಕಾರಣಗಳಿಲ್ಲದೆ ಅಥವಾ ಕ್ಷುಲ್ಲಕ ಕಾರಣಕ್ಕಾಗಿ ಸಹೋದರರಲ್ಲಿ ಭಿನ್ನಾಭಿಪ್ರಾಯ ತಲೆದೋರಲಿದೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಲಿದೆ. ವೈದ್ಯರಿಗೆ ಅನುಕೂಲಕರ ದಿನ.

ಕುಂಭ: ನಿಮ್ಮ ಎಣಿಕೆಯಂತೆ ಎಲ್ಲ ಕೆಲಸಗಳು ಸಾಫಲ್ಯವನ್ನು ಕಂಡು ಮನಸ್ಸು ಸಂತಸದ ಸಾಗರವೆನಿಸಬಹುದು. ನಿಮ್ಮ ಕೆಲವು ನೀತಿ ನಿರ್ಬಂಧಗಳಿಂದ ಒಂಟಿಯಾಗಿರಬೇಕಾಗಲಿದೆ. ಪಶು ಸಂಗೋಪನೆಯಿಂದ ಲಾಭ ಇದೆ.

ಮೀನ: ಮಕ್ಕಳು ಮಾಡಿದ ತಪ್ಪುಗಳಿಗೆ ಅವರಿಗೆ ಅತಿಯಾಗಿ ಶಿಕ್ಷಿಸುವ ಬದಲು ತಿಳಿವಳಿಕೆ ಹೇಳಬೇಕು. ಲಾಭ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸುವಿರಿ. ನಿಮ್ಮ ಭಾವನೆಗಳ ಬಗ್ಗೆ ಪ್ರಾಮಾಣಿಕರಾಗಿರಿ.

ಪ್ರಪಂಚದ ಅತಿ ಕ್ರೂರ ಪ್ರಾಣಿ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಶಾಲಾ ಮಕ್ಕಳನ್ನು ಶೈಕ್ಷಣಿಕ ಪ್ರವಾಸಕ್ಕಾಗಿ ಮೃಗಾಲಯಕ್ಕೆ ಕರೆದೊಯ್ಯಲಾಗಿತ್ತು. ಅಲ್ಲಿ ಹುಲಿ, ಸಿಂಹ, ಕರಡಿ, ಕತ್ತೆ ಕಿರುಬ, ಚಿಂಪಾಂಜಿ, ಗೊರಿಲ್ಲ, ಮುಂತಾದ ಭಯಾನಕ ಕಾಡುಪ್ರಾಣಿಗಳನ್ನು ಪಂಜರದಲ್ಲಿ ಕೂಡಿಹಾಕಿಟ್ಟದ್ದನ್ನು ಚಿಕ್ಕ ಮಕ್ಕಳು, ಮೂಕವಿಸ್ಮಿತರಾಗಿ ನೋಡುತ್ತಿದ್ದರು. ಹೀಗೆ ಬೇರೆ ಬೇರೆ ಪಂಜರಗಳಲ್ಲಿದ್ದ ಪ್ರಾಣಿ ಪಕ್ಷಿಗಳನ್ನು ವೀಕ್ಷಿಸುತ್ತಾ ಬಂದ ಮಕ್ಕಳಿಗೆ, ಗುಹೆಯಾಕಾರದ ಒಂದು ಕೋಣೆಯ ಮುಂದೆ 'ಈ ಪ್ರಪಂಚದ ಅತ್ಯಂತ ಕ್ರೂರ ಪ್ರಾಣಿ' ಎಂಬ ಫಲಕ ಕಣ್ಣಿಗೆ ಬಿತ್ತು. ಅವರು ಭಯಭೀತರಾಗಿಯೇ ಅಲ್ಲಿರುವ ಅತ್ಯಂತ ಕ್ರೂರಪ್ರಾಣಿ ಯಾವುದಿರಬಹುದು ಎಂಬ ಕುತೂಹಲದಿಂದ ಒಳಹೊಕ್ಕು ನೋಡಿದರೆ, ಅಲ್ಲಿ ಪಂಜರದ ಹಿಂದೆ ದೊಡ್ಡದೊಂದು ಕನ್ನಡಿ ಇರಿಸಲಾಗಿತ್ತು.

ಒಳಹೊಕ್ಕವರಿಗೆ ತಮ್ಮ ಪ್ರತಿಬಿಂಬವೇ ಕಾಣಿಸುತ್ತಿತ್ತು. ಮಕ್ಕಳಿಗೆ ಏನೂ ಅರ್ಥವಾಗಲಿಲ್ಲ.

ಆಗ ಒಳ ಬಂದ ಶಿಕ್ಷಕರಿಗೆ 'ಇಲ್ಲಿ ಯಾವ ಪ್ರಾಣಿಯೂ ಇಲ್ಲವಲ್ಲ ಸರ್' ಎಂದು ಮಕ್ಕಳು ಹೇಳಿದರು. ಆಗ ಆ ಶಿಕ್ಷಕರು ನಸುನಗುತ್ತಾ 'ಮಕ್ಕಳೇ ಅಲ್ಲಿರುವ ಕನ್ನಡಿಯಲ್ಲಿ ಯಾರ ಪ್ರತಿಬಿಂಬ ಕಾಣಿಸುತ್ತಿದೆ ಹೇಳಿ' ಎಂದು ಕೇಳಿದರು. ಆಗ ಮಕ್ಕಳು ಒಕ್ಕೊರಲಿನಿಂದ 'ನಮ್ಮದೇ ಪ್ರತಿಬಿಂಬ ಸರ್' ಎಂದುತ್ತರಿಸಿದರು.

ಆಗ ಶಿಕ್ಷಕರು 'ಅಂದರೆ ಈ ಪ್ರಪಂಚದಲ್ಲಿ ಮನುಷ್ಯನೇ ಅತ್ಯಂತ ಕ್ರೂರ ಪ್ರಾಣಿ. ಏಕೆಂದರೆ ಈ ಪ್ರಪಂಚದಲ್ಲಿ ತನಗೆ ಮಾತ್ರ ಬದುಕುವ ಹಕ್ಕಿರುವುದು ಎಂಬಂತೆ ಮನುಷ್ಯ ವರ್ತಿಸುತ್ತಾನೆ. ತನ್ನ ದುರಾಸೆಗಾಗಿ ಕಾಡುಗಳನ್ನು ಕಡಿದು ಪ್ರಾಣಿ ಪಕ್ಷಿಗಳಿಗೆ ವಾಸಕ್ಕೆ ಜಾಗವಿಲ್ಲದಂತೆ ಮಾಡುತ್ತಾನೆ. ಕಾಡುಪ್ರಾಣಿಗಳನ್ನು ಸಾಯಿಸಿ ಅವುಗಳ ಅಂಗಾಂಗಗಳನ್ನು ಮಾರಿ ಶ್ರೀಮಂತನಾಗುವಷ್ಟು ದುರಾಸೆ ಅವನದ್ದು. ಬುದ್ಧಿಶಕ್ತಿಯಲ್ಲಿ ಎಲ್ಲ ಪ್ರಾಣಿಗಳಿಗಿಂತಲೂ ಉನ್ನತ ಸ್ಥಾನದಲ್ಲಿರುವ ಮನುಷ್ಯ, ಇಡೀ ಜಗತ್ತನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಬಯಸುತ್ತಾನೆ. ಆದರೆ ಪ್ರಕೃತಿಯ ಮುಂದೆ ಅವನು ತೀರಾ ಕುಬ್ಜ ಎಂಬ ವಾಸ್ತವದ ಅರಿವು ಅವನಿಗಿಲ್ಲ ಹೀಗಾಗಿ ಮನುಷ್ಯನೇ ಈ ಪ್ರಪಂಚದ ಅತ್ಯಂತ ಕ್ರೂರ ಪ್ರಾಣಿ' ಎಂದು ನುಡಿದರು.

ಇತ್ತೀಚೆಗೆ ನಮ್ಮ ಮನೆಯ ಹತ್ತಿರವಿದ್ದ ರಸ್ತೆಯ ಅಗಲೀಕರಣಕ್ಕೆ ಅಲ್ಲಿದ್ದ ಹಲವಾರು ಮರಗಳನ್ನು ಕಡಿಯಲಾಯಿತು. ಆ ಮರಗಳಲ್ಲಿ ಗೂಡು ಕಟ್ಟಿದ್ದ, ಅವುಗಳ ಮೇಲೆ ಬಂದು ಕೂರುತ್ತಿದ್ದ, ಅವುಗಳ ಹಣ್ಣುಗಳನ್ನು ತಿಂದು ನಲಿಯುತ್ತಿದ್ದ ವಿವಿಧ ರೀತಿಯ ಪಕ್ಷಿಗಳು ನಾಪತ್ತೆಯಾದವು.

ಇವೆಲ್ಲವೂ ದಿನೇ ದಿನೇ ಕಣ್ಮರೆಯಾದರೆ ಈ ಭುವಿಯ ಭವಿಷ್ಯ ಹಾಗೆಯೇ ಅದರ ಜೊತೆಗೇ ಬದುಕಬೇಕಾದ ಮುಂದಿನ ಪೀಳಿಗೆಯ ಭವಿಷ್ಯ ಏನಾದೀತು ಎಂದು ಯೋಚಿಸಿದಾಗ ನಿಜಕ್ಕೂ ಆತಂಕವಾಯಿತು. ಮನುಷ್ಯನ ಈ ಕ್ರೌರ್ಯವೇ, ದಿನ ದಿನಕ್ಕೂ ಹೆಚ್ಚುತ್ತಿರುವ ಪ್ರಾಣಿ- ಮಾನವ ಸಂಘರ್ಷಗಳಿಗೆ ಕಾರಣವಲ್ಲವೇ? ಈ ಕ್ರೌರ್ಯವನ್ನು ನಿಯಂತ್ರಿಸಿಕೊಂಡು ಭೂಮಿಯ ಮೇಲೆ ಬದುಕುವ ಕೋಟ್ಯಂತರ ಜೀವಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಸಹಿಷ್ಣುತೆಯಿಂದ ಬದುಕಬೇಕೆಂದು ಅವನ ವಿವೇಕಕ್ಕೆ ಹೊಳೆದರೆ ಲೋಕಕ್ಕೆ ಹಿತವಲ್ಲವೇ?

ಪದಬಂಧ 5526

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಭಿಮಾನಿಯಿಂದ ಹೆಚ್ಚಿದ ಆತ್ಮಗೌರವ! (4)
3.ದಾಯಾದಿಯ ಬೀಳ್ಕೊಡುಗೆ! (3)
4.ಗಮನವಿಟ್ಟು ನೋಡಿ ಆಕಾಶ ಕಾಣುತ್ತದೆ! (3)
6.ಕಾರನ್ನೇರಿದ ಚಾರನ ಕೆಲಸವೆಲ್ಲಾ ಬೇಕಾಬಿಟ್ಟಿ! (4)
8.ಯತಿಗೆ ಅನುಗುಣವಾಗಿ ಉಚಿತ ವಾಗುವಂತೆ! (4)
10.ಅನುಸ್ವಾರ ಬರೆದಾಗ ಕೇಳಿಸಿದ ನಾದ (2)
11.ಸಂಕಟದಿಂದ ಕಟ್ಟುವ ತೆರಿಗೆ! (2)
12.ತರಂಗದಂತಿರುವ ಒಳಮನಸ್ಸು (4)
14.ಹರಿಯ ನೆನೆಯುತ್ತಾ ನಡೆಸಿದ ದೋಣಿ (4)
15.ದಾವಣಿ ಧರಿಸಿ ಹೇಳಿದ ಜನಪದ (3)
16.ಗೊರಟೆಯಲ್ಲ! ಹಣ್ಣಿನ ಮೇಲುಹೊದಿಕೆ! (3)
17.ಎಳೆತನದಿಂದಲೇ ಮೊಳೆತ ಸ್ನೇಹ (4)

ಮೇಲಿಂದ ಕೆಳಕ್ಕೆ

2.ಗರ ಬಡಿದಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರವನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು! (3)
9.ಚೀಲ ತರುವಾಗ ಹಾಕಿದ ಬಾಗಿಲಿನ ಕೊಂಡಿ (3)
10.ತನಗೆ ತಾನು ಮಾತಾಡಿಕೊಳ್ಳುವುದು (3)
11.ವಂದರಿ ಹಿಡಿದಿರುವ ಚಲುವೆ (3)
12.ಅಂಬುಧಿಗೆ ಬಿದ್ದಿರುವ ಬಾಣ (2)
13.ಲಾಗ ಹಾಕುವಾಗ ಆದ ಗದ್ದಲ! (3)
14.ಹಣ್ಣಿಗೆ ಬೇಕಾದ ಬಾಚಣಿಕೆ (3)



5525ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅನುಸ್ವಾರ 3.ಗರ್ಭಕೋಶ 5.ತಕ್ಕಡಿ 6.ನೆನಪು 8.ಕಲಹ 9.ಪರಾರಿ 10.ವರಹ 12.ಪಲ್ಲವಿ 14.ರವಿವಾರ 15.ಹತ್ಯಾಕಾಂಡ

ಮೇಲಿಂದ ಕೆಳಕ್ಕೆ
1.ಅರಮನೆ 2.ರಕುತ 3.ಗರಡಿ 4.ಶಯ್ಯಾಗೃಹ 7.ಪುಢಾರಿ 8.ಕಕವ 9.ಪರಿಸರ 11.ಹಳವಂಡ 12.ಪಗಾರ 13.ವಿವಾಹ

ಸುಡೊಕು 5912

	4		1		3	5		7
7		6	4				3	
	3				7	4		
6	1				4			
						6		4
8	2						1	
		3		2		9		8
9			3		6			5
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5911 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಕೃಷಿ ಸರಕು ರಫ್ತು 18 ಲಕ್ಷ ಟನ್‌ಗೆ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಲ್ಲಿ ಬಾಸ್ಮತಿ ಅಕ್ಕಿ ಸೇರಿದಂತೆ ಕೃಷಿ ಸರಕುಗಳ ರಫ್ತು 17.93 ಲಕ್ಷ ಟನ್‌ನಷ್ಟು ಇಳಿಕೆಯಾಗಿದೆ.

ಆಗಸ್ಟ್‌ನಲ್ಲಿ ಕೃಷಿ ಸರಕುಗಳ ರಫ್ತು 27.94 ಲಕ್ಷ ಟನ್‌ಗಳಷ್ಟಿತ್ತು ಎಂದು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ) ತಿಳಿಸಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೃಷಿ ಸರಕುಗಳ ರಫ್ತು ತಲಾ 33 ಲಕ್ಷ ಟನ್‌ಗಳಷ್ಟಿತ್ತು. ಆದಾಗ್ಯೂ, ಬಾಸ್ಮತಿ ಹೊರತುಪಡಿಸಿ ಇತರೆ ತಳಿಯ ಅಕ್ಕಿಯ ರಫ್ತಿನ ಮೇಲಿನ ಹಲವಾರು ನಿರ್ಬಂಧಗಳಿಂದಾಗಿ ಕೃಷಿ ಸರಕುಗಳ ರಫ್ತು ಸುಮಾರು 18 ಲಕ್ಷ ಟನ್‌ಗಳಿಗೆ ಇಳಿಕೆಯಾಗಿತ್ತು.

ಬಾಸ್ಮತಿ ಅಕ್ಕಿ ರಫ್ತು ಆಗಸ್ಟ್‌ನಲ್ಲಿ ₹18,128 ಕೋಟಿ ಇದ್ದ ರಫ್ತು ಮೌಲ್ಯವು ಸೆಪ್ಟೆಂಬರ್‌ನಲ್ಲಿ ₹ 14,153 ಕೋಟಿಗೆ ಇಳಿಕೆಯಾಗಿದೆ.

ಸೆಪ್ಟೆಂಬರ್‌ನಲ್ಲಿ ಬಾಸ್ಮತಿ ಅಕ್ಕಿ 1.21 ಲಕ್ಷ ಟನ್, ಈರುಳ್ಳಿ 1.51 ಲಕ್ಷ ಟನ್ ಮತ್ತು ಎಮ್ಮೆ ಮಾಂಸ 1.21 ಲಕ್ಷ ಟನ್ ರಫ್ತು ಮಾಡಲಾಗಿತ್ತು ಎಂದು ಅಂಕಿ-ಅಂಶಗಳು ತಿಳಿಸಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

30ನೇ ವರ್ಷದ ಪುಣ್ಯಸ್ಮರಣೆ

ಟಿ. ಕೆ. ಸ್ವಾಮಿ

ಅಬಕಾರಿ ಗುತ್ತಿಗೆದಾರರು ಮತ್ತು ಸಗಟು ಮದ್ಯ ಮಾರಾಟಗಾರರು

10-04-1942 - 11-12-1993

ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶಗಳ ನೆನಪೇ ನಮಗೆ ಸ್ಫೂರ್ತಿ, ಮಾರ್ಗದರ್ಶನ. ನಿಮ್ಮ ಸವಿನೆನಪು ನಮ್ಮ ಮನದಾಳದಲ್ಲಿ ಅವಿಸ್ಮರಣೀಯವಾಗಿದೆ.

ಸದಾ ಸ್ಮರಿಸುವ,
ಶ್ರೀಮತಿ ಪುಟ್ಟತಾಯಮ್ಮ ಅಂಡ್ ಫ್ಯಾಮಿಲಿ

ಚಿರಸ್ಮರಣೆ

ಶ್ರೀ ಎಸ್. ಮೇಲಯ್ಯರವರು

ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್

ನೀವು ನಮ್ಮನ್ನಗಲಿ ಇಂದಿಗೆ 36 ವರ್ಷವಾಯಿತು. ನಾವು ನಿಮ್ಮನ್ನು ನೆನೆಯದ ದಿನವಿಲ್ಲ, ನೀವು ಮನೆಗೆ ಧರ್ಮಜನಂತೆ ಕರ್ಮದಿ ಯೋಗಿಯಂತೆ, ಆದರ್ಶದಿ ರಾಮನಂತೆ ಎಲ್ಲರಿಗೂ ಹಿತ ಕೋರುವ ಹೆತ್ತವರ ಪೂಜಿಸುವ ನಿಮ್ಮ ಹಿರಿತನ ಇಂದಿಗೂ ಎಂದಿಗೂ ಎಲ್ಲರಿಗೂ ದಾರಿದೀಪವಾಗಿದೆ.

ನಿಮಗೆ ಶಾಂತಿ ಕೋರುವ
ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು.

LOOKING TO BUILD, BUY OR SELL A PROPERTY
Please refer Classifieds on Sunday

ಜನವರಿಗೆ ಟಾಟಾ ಮೋಟರ್ಸ್ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು 2024ರ ಜನವರಿ 1ರಿಂದ ತನ್ನ ವಾಣಿಜ್ಯ ವಾಹನದ ಬೆಲೆಗಳನ್ನು ಶೇ 3ರಷ್ಟು ಹೆಚ್ಚಳ ಮಾಡುವುದಾಗಿ ಭಾನುವಾರ ತಿಳಿಸಿದೆ.

ತಯಾರಿಕಾ ವೆಚ್ಚದ ಹೆಚ್ಚಳ ಸೇರಿದಂತೆ ಹಲವು ಕಾರಣದಿಂದಾಗಿ ಈ ನಿರ್ಧಾರಕ್ಕೆ ಬರಲಾಗಿದೆ. ಎಲ್ಲ ಮಾದರಿಯ ವಾಣಿಜ್ಯ ವಾಹನಗಳಿಗೆ ಬೆಲೆ ಏರಿಕೆ ಅನ್ವಯಿಸಲಿದೆ ಎಂದು ಕಂಪನಿ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹256-447
ದ್ವಿತಳಿ (ಬಿ.ವಿ)	₹300-547

ಎಸ್‌ಐಪಿ ಮತ್ತೆ ಎಂ.ಎಫ್. ಎರಡೂ ಒಂದೇನಾ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಅನೇಕರು ಮ್ಯೂಚುಯಲ್ ಫಂಡ್ (ಎಂ.ಎಫ್) ಮತ್ತು ಎಸ್‌ಐಪಿ ನಡುವೆ ಗೊಂದಲ ಮಾಡಿಕೊಳ್ಳುತ್ತಾರೆ. ಮ್ಯೂಚುಯಲ್ ಫಂಡ್ ಎನ್ನುವುದು ಹೂಡಿಕೆ ಉತ್ಪನ್ನವಾದರೆ, ಎಸ್‌ಐಪಿ ಎನ್ನುವುದು ಮ್ಯೂಚುಯಲ್ ಫಂಡ್ ಸೇರಿದಂತೆ ಬೇರೆ ಬೇರೆ ಹೂಡಿಕೆಗಳಲ್ಲಿ ಹಣ ತೊಡಗಿಸಲು ಬಳಕೆಯಾಗುವ ಒಂದು ವಿಧಾನ. ಬನ್ನಿ ಎಸ್‌ಐಪಿಗೂ ಮ್ಯೂಚುಯಲ್ ಫಂಡ್‌ಗೂ ಇರುವ ವ್ಯತ್ಯಾಸವನ್ನು ಅರಿತು ಜಾಗೃತ ಹೂಡಿಕೆದಾರರಾಗೋಣ.

ಮ್ಯೂಚುಯಲ್ ಫಂಡ್ ಮತ್ತು ಎಸ್‌ಐಪಿ ನಡುವಿನ ವ್ಯತ್ಯಾಸ: ದುಡ್ಡನ್ನು ದುಡಿಸಲು ಮ್ಯೂಚುಯಲ್ ಫಂಡ್ ಒಂದು ಉತ್ತಮ ಸಾಧನ. ನಿಮ್ಮ ಹಣವನ್ನು ನಿಮ್ಮ ಪರವಾಗಿ ಮಾರುಕಟ್ಟೆಯಲ್ಲಿ ವೃತ್ತಿಪರವಾಗಿ ಹೂಡಿಕೆ ಮಾಡುವ ವ್ಯವಸ್ಥೆಯೇ ಮ್ಯೂಚುಯಲ್ ಫಂಡ್. ನೀವು ಹೂಡಿದ ಹಣವನ್ನು ಮ್ಯೂಚುವಲ್ ಫಂಡ್ ಕಂಪನಿಯವರು ವಿವಿಧ ಷೇರು, ಬಾಂಡ್ ಮತ್ತಿತರ ಹೂಡಿಕೆಯ ಉತ್ಪನ್ನಗಳಲ್ಲಿ ತೊಡಗಿಸುತ್ತಾರೆ. ಹೂಡಿಕೆಯಿಂದ ಬಂದ ಲಾಭದಲ್ಲಿ ನಿಗದಿತ ಕಮಿಷನ್ ಪಡೆದು ನಿವ್ವಳ ಲಾಭವನ್ನು ಹೂಡಿಕೆದಾರರಿಗೆ ಹಂಚಲಾಗುತ್ತದೆ. ಇಲ್ಲಿ ಹೂಡಿಕೆ ಮತ್ತು ಸಂಬಂಧಪಟ್ಟ ರಿಸ್ಕ್‌ಗಳನ್ನು ವೃತ್ತಿಪರ ಫಂಡ್ ಮ್ಯಾನೇಜರ್‌ಗಳು ನಿರ್ವಹಿಸುತ್ತಾರೆ. ಷೇರುಪೇಟೆಯ ಏರಿಳಿತ ಮತ್ತು ರಿಸ್ಕ್‌ಗೆ ಹೋಲಿಸಿದರೆ, ಮ್ಯೂಚುಯಲ್ ಫಂಡ್‌ನಲ್ಲಿ ರಿಸ್ಕ್ ಕಡಿಮೆ. ಹಾಗಾಗಿ ನಷ್ಟದ ಭಯದಿಂದಾಗಿ ಷೇರಿನಿಂದ ದೂರ ಉಳಿದಿರುವವರಿಗೆ ಮ್ಯೂಚುವಲ್ ಫಂಡ್ ಸೂಕ್ತ ಆಯ್ಕೆ.

ಎಸ್‌ಐಪಿ ಎನ್ನುವುದು ಹೂಡಿಕೆಯ ಉತ್ಪನ್ನವಲ್ಲ ಹೂಡಿಕೆಯ ವಿಧಾನ. ಎಸ್‌ಐಪಿಯನ್ನು ಕನ್ನಡದಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ ಎಂದು ಕರೆಯಬಹುದು. ಷೇರು ಹೂಡಿಕೆ, ಮ್ಯೂಚುಯಲ್ ಫಂಡ್ ಹೂಡಿಕೆ, ಚಿನ್ನ ಖರೀದಿ, ಪಿಪಿಎಫ್ ಹೂಡಿಕೆ, ಅಂಚೆ ಕಚೇರಿ ಹೂಡಿಕೆ, ಫಿಕ್ಸೆಡ್ ಡೆಪಾಸಿಟ್ ಹೀಗೆ ಬಹುತೇಕ ಎಲ್ಲಾ ರೀತಿಯ ಹೂಡಿಕೆಗಳಲ್ಲೂ ಎಸ್‌ಐಪಿ ವಿಧಾನ ಅಳವಡಿಸಿಕೊಳ್ಳಬಹುದು. ಒಂದು ಪೂರ್ವನಿಗದಿತ ದಿನದಂದು, ಪೂರ್ವ ನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆ ಉತ್ಪನ್ನವೊಂದಕ್ಕೆ ವ್ಯವಸ್ಥಿತವಾಗಿ ವರ್ಗಾಯಿಸುವ ವಿಧಾನವೇ ಎಸ್‌ಐಪಿ ಅರ್ಥಾತ್ ವ್ಯವಸ್ಥಿತ ಹೂಡಿಕೆ ಯೋಜನೆ.

ಮ್ಯೂಚುಯಲ್ ಫಂಡ್‌ನಲ್ಲಿ ಎಸ್‌ಐಪಿ ಹೇಗೆ ಕೆಲಸ ಮಾಡುತ್ತದೆ: ಎಸ್‌ಐಪಿಯಲ್ಲಿ ವಾರಕ್ಕೊಮ್ಮೆ, ಹದಿನೈದು ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ನಿರ್ದಿಷ್ಟ ಮೊತ್ತವನ್ನು ಹೂಡಿಕೆ ಮಾಡಬಹುದು. ನೀವು ಮ್ಯೂಚುಯಲ್ ಫಂಡ್‌ನಲ್ಲಿ ಹಣ ಹೂಡಲು ನಿರ್ಧಾರ ಮಾಡಿ, ಬ್ಯಾಂಕ್ ಖಾತೆಯಿಂದ ನಿರ್ದಿಷ್ಟ ಮೊತ್ತವನ್ನು ಮ್ಯೂಚುಯಲ್ ಫಂಡ್‌ಗೆ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್ (ECS) ಮೂಲಕ ನಿಗದಿಪಡಿಸಿದಲ್ಲಿ ಮಾಸಿಕವಾಗಿ ಹಣವನ್ನು ಹೂಡಲೇಬೇಕು. ನಿಗದಿತ ಮೊತ್ತ ನಿರ್ದಿಷ್ಟ ದಿನಾಂಕದಂದು ಬ್ಯಾಂಕ್ ಖಾತೆಯಲ್ಲಿ ಇಲ್ಲದಿದ್ದರೆ ದಂಡ ವಿಧಿಸಲಾಗುತ್ತದೆ. ಒಂದೊಮ್ಮೆ ಮ್ಯೂಚುಯಲ್ ಫಂಡ್ ಖರೀದಿ ನಿಲ್ಲಿಸಬೇಕು ಎಂದರೆ ಬ್ಯಾಂಕ್‌ಗೆ ಮೊದಲೇ ಮಾಹಿತಿ ನೀಡಬೇಕು.

ಮ್ಯೂಚುಯಲ್ ಫಂಡ್ ಅನ್ನು ಉದಾಹರಣೆಯಾಗಿ ತೆಗೆದುಕೊಂಡು ಎಸ್‌ಐಪಿ ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿದುಕೊಳ್ಳೋಣ. ಯಾವುದೇ ಎಸ್‌ಐಪಿಯನ್ನು ಆರಂಭಿಸಬೇಕಾದರೆ ಮೊದಲಿಗೆ ಈ ಪ್ರಮುಖ ನಾಲ್ಕು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಯಾವ ಮ್ಯೂಚುಯಲ್ ಫಂಡ್ ಅಥವಾ ಯೋಜನೆಯಲ್ಲಿ ಹೂಡಿಕೆ ಮಾಡುತ್ತೀರಿ?, ಮ್ಯೂಚುಯಲ್ ಫಂಡ್‌ಗೆ ಪ್ರತಿ ಬಾರಿ ಹೂಡಿಕೆ ಮಾಡಬೇಕಿರುವ ಮೊತ್ತ ಎಷ್ಟು?, ಹೂಡಿಕೆಯನ್ನು ಪ್ರತಿ ವಾರ, ಪ್ರತಿ ತಿಂಗಳು ಅಥವಾ 3 ತಿಂಗಳಿಗೊಮ್ಮೆ ಮಾಡುವಿರೋ?, ನಿಮ್ಮ ಅಕೌಂಟ್‌ನಿಂದ ಹೂಡಿಕೆಗೆ ಹಣ ವರ್ಗಾವಣೆಯಾಗಬೇಕಿರುವ ದಿನಾಂಕ ಯಾವುದು? ಈ 4 ವಿಚಾರ ತೀರ್ಮಾನಿಸಿದ ಮೇಲೆ ನೀವು ಮುಂದುವರಿಯಬಹುದು.

ಉದಾಹರಣೆ: ನಾನು ನಿಪ್ಪಾನ್ ಇಂಡಿಯಾ ಗ್ರೋತ್ ಫಂಡ್‌ನಲ್ಲಿ ಪ್ರತಿ ತಿಂಗಳು ₹10 ಸಾವಿರ ಹೂಡಿಕೆಗೆ ನಿರ್ಧರಿಸಿದ್ದೇನೆ. ಪ್ರತಿ ತಿಂಗಳ 5ನೇ ದಿನದಂದು ನಾನು ಮ್ಯೂಚುವಲ್ ಫಂಡ್ ಎಸ್‌ಐಪಿಗೆ ಹಣ ಪಾವತಿಸಲು ತೀರ್ಮಾನಿಸಿದ್ದೇನೆ ಮತ್ತು ಡಿಸೆಂಬರ್ 2022 ರಿಂದಲೇ ಈ ಹೂಡಿಕೆ ಪ್ರಕ್ರಿಯೆ ಆರಂಭಿಸಿದ್ದೇನೆ ಎಂದಿಟ್ಟುಕೊಳ್ಳಿ. ಇದರಂತೆ ಹೋದರೆ ಡಿಸೆಂಬರ್ 2022 ರಿಂದ ಡಿಸೆಂಬರ್ 2023ರ ವರೆಗೆ ತಿಂಗಳಿಗೆ ₹ 10 ಸಾವಿರದಂತೆ ₹1 ಲಕ್ಷದ 30 ಸಾವಿರ ಹೂಡಿಕೆ ಮ್ಯೂಚುಯಲ್ ಫಂಡ್‌ಗೆ ವರ್ಗಾವಣೆಗೊಂಡಿರುತ್ತದೆ. ಮಾರುಕಟ್ಟೆ ಏರುಗತಿಯಲ್ಲಿದ್ದಾಗ ನಿಮ್ಮ ಹೂಡಿಕೆ ಮೊತ್ತಕ್ಕೆ ಕಡಿಮೆ ಮ್ಯೂಚುಯಲ್ ಫಂಡ್ ಯುನಿಟ್‌ಗಳು ಲಭಿಸುತ್ತವೆ, ಆದರೆ ಮಾರುಕಟ್ಟೆ ಹೆಚ್ಚು ಇಳಿಕೆ ಕಂಡಾಗ ನಿಮಗೆ ಹೆಚ್ಚು ಮ್ಯೂಚುಯಲ್ ಫಂಡ್ ಯುನಿಟ್‌ಗಳು ಹಂಚಿಕೆಯಾಗುತ್ತವೆ. ಎಸ್‌ಐಪಿಯನ್ನು ದೀರ್ಘಾವಧಿಗೆ ಮಾಡುವುದರಿಂದ ಮಾರುಕಟ್ಟೆಯ ಏರಿಳಿತದ ಲಾಭ ನಿಮಗೆ ಲಭಿಸಿ ಮ್ಯೂಚುಯಲ್ ಫಂಡ್ ಹೂಡಿಕೆ ವೇಳೆ ವೆಚ್ಚದ ಸರಾಸರಿ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

ಎಸ್‌ಐಪಿ ಹೂಡಿಕೆ ಎಲ್ಲಿ ಮಾಡಬಹುದು: ಮ್ಯೂಚುಯಲ್ ಫಂಡ್ ಏಜೆಂಟ್‌ಗಳ ಮೂಲಕ, ಬ್ಯಾಂಕ್ ಶಾಖೆಗಳಲ್ಲಿ ಮ್ಯೂಚುಯಲ್ ಫಂಡ್ ಹೂಡಿಕೆ ಮಾಡಲು ಸಾಧ್ಯವಿದೆ. ಡಿಜಿಟಲ್ ಪ್ಲಾಟ್ ಫಾರಂಗಳ ಮೂಲಕ ಅಂದರೆ, ಬ್ಯಾಂಕ್ ವೆಬ್‌ಸೈಟ್‌ಗಳು, ಮ್ಯೂಚುಯಲ್ ಫಂಡ್ ಹೂಡಿಕೆ ಆ್ಯಪ್‌ಗಳಾದ ಗ್ರೋ, ಪೇಟಿಎಂ ಮನಿ, ಇಟಿ ಮನಿ ಮುಂತಾದ ವೇದಿಕೆಗಳನ್ನು ಬಳಸಿಕೊಂಡು ಕೂಡ ಹೂಡಿಕೆ ಮಾಡಬಹುದು.

ಬ್ಯಾಂಕ್ ಅಥವಾ ಏಜೆಂಟ್‌ಗಳ ಮೂಲಕ ಮ್ಯೂಚುಯಲ್ ಫಂಡ್ ಹೂಡಿಕೆ ಮಾಡಿದರೆ ಹೆಚ್ಚು ಕಮಿಷನ್ ಕೊಡಬೇಕಾಗುತ್ತದೆ. ನೇರವಾಗಿ ನೀವೇ ಡಿಜಿಟಲ್ ಫ್ಲಾಟ್ ಫಾರಂಗಳಲ್ಲಿ ಹೂಡಿಕೆ ಮಾಡಿದರೆ ಕಮಿಷನ್ ಕೊಡಬೇಕಿಲ್ಲ. ಮ್ಯೂಚುಯಲ್ ಫಂಡ್ ಪರಿಭಾಷೆಯಲ್ಲಿ ಬ್ಯಾಂಕ್ ಅಥವಾ ಏಜೆಂಟ್‌ಗಳ ಮೂಲಕ ಹೂಡಿಕೆ ಮಾಡುವ ಮ್ಯೂಚುಯಲ್ ಫಂಡ್ ಅನ್ನು ರೆಗ್ಯೂಲರ್ ಮ್ಯೂಚುವಲ್ ಫಂಡ್ ಎಂದು ಕರೆದರೆ, ನೇರವಾಗಿ ನೀವೇ ಹೂಡಿಕೆ ಮಾಡುವ ಫಂಡ್ ಅನ್ನು ಡೈರೆಕ್ಟ್ ಮ್ಯೂಚುಯಲ್ ಫಂಡ್ ಎಂದು ಕರೆಯುತ್ತಾರೆ. ಕಡಿಮೆ ವೆಚ್ಚದಲ್ಲಿ ಮ್ಯೂಚುಯಲ್ ಫಂಡ್ ಹೂಡಿಕೆ ಮಾಡಬೇಕು ಎಂದರೆ ಡೈರೆಕ್ಟ್ ಮ್ಯೂಚುಯಲ್ ಫಂಡ್ ಒಳ್ಳೆಯ ಆಯ್ಕೆ. ಮ್ಯೂಚುಯಲ್ ಫಂಡ್ ಹೂಡಿಕೆಯನ್ನು ₹100, ₹ 500 ರಿಂದಲೂ ಆರಂಭಿಸಲು ಸಾಧ್ಯವಿದೆ.

ಗಮನಿಸಿ: ಈ ಲೇಖನದಲ್ಲಿ ಬಳಸಿರುವ ಕೆಲ ಕಂಪನಿಗಳ ಹೆಸರುಗಳು ಉದಾಹರಣೆ ಮಾತ್ರ. ಅವು ಹೂಡಿಕೆ ಶಿಫಾರಸು ಅಲ್ಲ

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ದಾಖಲೆಯ ಜಿಗಿತ ಕಂಡ ಸೂಚ್ಯಂಕಗಳು

ಡಿಸೆಂಬರ್ 8ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಸಾರ್ವಕಾಲಿಕ ದಾಖಲೆಯ ಏರಿಕೆ ಕಂಡಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 69,825 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.47 ರಷ್ಟು ಜಿಗಿದಿದೆ. 20,969 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 3.46 ರಷ್ಟು ಜಿಗಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಆರ್‌ಬಿಐನಿಂದ ಬಡ್ಡಿ ದರ ಯಥಾಸ್ಥಿತಿ, ಭಾರತದ ಆರ್ಥಿಕತೆ ಉತ್ತಮ ಪ್ರಗತಿ ಕಾಣಲಿದೆ ಎಂಬ ಅಂದಾಜುಗಳು ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಪವರ್ ಸೂಚ್ಯಂಕ ಶೇ 13, ಬಿಎಸ್‌ಇ ಆಯಿಲ್ ಮತ್ತು ಗ್ಯಾಸ್ ಸೂಚ್ಯಂಕ ಶೇ 7.6, ಬಿಎಸ್‌ಇ ಬ್ಯಾಂಕ್ ಸೂಚ್ಯಂಕ ಶೇ 5.3 , ಬಿಎಸ್‌ಇ ಎನರ್ಜಿ ಸೂಚ್ಯಂಕ ಶೇ 5.2 ರಷ್ಟು ಗಳಿಸಿಕೊಂಡಿವೆ. ಆದರೆ ಬಿಎಸ್‌ಇ ಎಫ್‌ಎಂಸಿಜಿ ಸೂಚ್ಯಂಕ ಶೇ 0.3 ರಷ್ಟು ಕುಸಿದಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟೋಟಲ್ ಗ್ಯಾಸ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಎನರ್ಜಿ ಸಲ್ಯೂಷನ್ಸ್, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಮತ್ತು ಅದಾನಿ ಪವರ್ ಶೇ 21 ರಿಂದ ಶೇ 64 ರಷ್ಟು ಜಿಗಿದಿವೆ. ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಜಿಎಂಆರ್ ಏರ್‌ಪೋರ್ಟ್ಸ್, ಎಸಿಸಿ, ಎನ್‌ಎಚ್‌ಪಿಸಿ, ಎಚ್‌ಪಿಸಿಎಲ್, ಆರ್‌ಇಸಿ, ಟ್ಯೂಬ್ ಇನ್ವೆಸ್ಟ್ ಮೆಂಟ್ಸ್ ಆಫ್ ಇಂಡಿಯಾ, ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಗಳಿಸಿಕೊಂಡಿವೆ. ಆದರೆ ವರ್ಲ್‌ಪೂಲ್ ಆಫ್ ಇಂಡಿಯಾ, ಪಿಬಿ ಫಿನ್‌ಟೆಕ್, ಟೋರೆಂಟ್ ಫಾರ್ಮಾ, ಲುಪಿನ್, ಅದಿತ್ಯಾ ಬಿರ್ಲಾ ಕ್ಯಾಪಿಟಲ್, ಅಬೋಟ್ ಇಂಡಿಯಾ, ಇಮಾಮಿ ಮತ್ತು ಡೆಲಿವರಿ ಶೇ 3 ರಿಂದ ಶೇ 8 ರಷ್ಟು ಕುಸಿದಿವೆ.

ಮುನ್ನೋಟ: ಆರ್‌ಬಿಐ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಇಟ್ಟಿರುವುದು ಮಾರುಕಟ್ಟೆಗೆ ಪೂರಕವಾಗಿದೆ. ಮುಂದಿನ ದಿನಗಳಲ್ಲಿ ಬಡ್ಡಿ ದರ ಇಳಿಕೆಯ ಸಾಧ್ಯತೆಯೂ ಇದೆ. ಇದು ಹೂಡಿಕೆದಾರರ ಪಾಲಿಗೆ ಆಶಾದಾಯಕವಾಗಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಏಳು ಕಂಪನಿಗಳ ಎಂಕ್ಯಾಪ್ ₹3 ಲಕ್ಷ ಕೋಟಿಯಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ 10 ಕಂಪನಿಗಳ ಪೈಕಿ ಏಳು ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ಕಳೆದ ವಾರ ₹3.04 ಲಕ್ಷ ಕೋಟಿಯಷ್ಟು ವೃದ್ಧಿಸಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಲ್‌ಐಸಿ ಹೆಚ್ಚು ಗಳಿಕೆ ಕಂಡಿರುವ ಕಂಪನಿಗಳಾಗಿವೆ.



ಕಳೆದ ವಾರ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) 2,334 ಅಂಶಗಳಷ್ಟು ಏರಿಕೆ ಕಂಡಿತ್ತು. ಹಾಗಾಗಿ, ಕಂಪನಿಗಳ ಮಾರುಕಟ್ಟೆ ಮೌಲ್ಯ ಹೆಚ್ಚಳವಾಗಿದೆ.

ಎಷ್ಟು ಗಳಿಕೆ?: ಎಚ್‌ಡಿಎಫ್‌ಸಿ ಬ್ಯಾಂಕ್ ಮೌಲ್ಯ ₹74,076 ಕೋಟಿ, ಎಲ್‌ಐಸಿ ₹65,558 ಕೋಟಿ, ಐಸಿಐಸಿಐ ಬ್ಯಾಂಕ್ ₹45,466 ಕೋಟಿ, ಟಿಸಿಎಸ್ ₹42,737 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ₹42,454 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹37,617 ಕೋಟಿ ಮತ್ತು ಇನ್ಫೊಸಿಸ್ ₹15,916 ಕೋಟಿಯಷ್ಟು ಎಂ -ಕ್ಯಾಪ್ ಗಳಿಸಿವೆ.

ಹಿಂದೂಸ್ತಾನ್ ಯೂನಿಲಿವರ್ ₹9,884 ಕೋಟಿ, ಭಾರ್ತಿ ಏರ್‌ಟೆಲ್ ₹8,569 ಕೋಟಿ ಮತ್ತು ಐಟಿಸಿ ಕಂಪನಿಯ ಮಾರುಕಟ್ಟೆ ಮೌಲ್ಯ ₹935 ಕೋಟಿಯಷ್ಟು ಇಳಿಕೆಯಾಗಿದೆ.

ಪ್ರಮುಖ 10 ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮೌಲ್ಯಯುತ ಕಂಪನಿ ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ. ನಂತರದ ಸ್ಥಾನದಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್, ಭಾರ್ತಿ ಏರ್‌ಟೆಲ್, ಐಟಿಸಿ, ಎಸ್‌ಬಿಐ ಮತ್ತು ಎಲ್‌ಐಸಿ ಇವೆ.

ಸಂಕ್ಷಿಪ್ತ ಸುದ್ದಿ

ದೇಶದಲ್ಲಿ ವಿದ್ಯುತ್ ಬಳಕೆ ಶೇ 9ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಏಪ್ರಿಲ್-ನವೆಂಬರ್ ಅವಧಿಯಲ್ಲಿ ದೇಶದಲ್ಲಿ ವಿದ್ಯುತ್ ಬಳಕೆಯು ಶೇ 9ರಷ್ಟು ಹೆಚ್ಚಾಗಿದ್ದು, 1.09 ಲಕ್ಷ ಕೋಟಿ ಯೂನಿಟ್‌ಗೆ ತಲುಪಿದೆ.

2022-23ನೇ ಸಾಲಿನ ಏಪ್ರಿಲ್-ನವೆಂಬರ್‌ನಲ್ಲಿ ವಿದ್ಯುತ್ ಬಳಕೆಯು 1.01 ಲಕ್ಷ ಕೋಟಿ ಯೂನಿಟ್ ಇದ್ದರೆ, 2021–22ರಲ್ಲಿ 91,600 ಕೋಟಿ ಯೂನಿಟ್ ಇತ್ತು. 2022–23ರ ಪೂರ್ಣ ಆರ್ಥಿಕ ವರ್ಷದಲ್ಲಿ ವಿದ್ಯುತ್ ಬಳಕೆಯು 1.50 ಲಕ್ಷ ಕೋಟಿ ಯೂನಿಟ್ ಇದ್ದರೆ, ಕಳೆದ ವರ್ಷದ ಇದೇ ಅವಧಿಯಲ್ಲಿ 1.37 ಲಕ್ಷ ಕೋಟಿ ಯೂನಿಟ್ ಇತ್ತು ಎಂದು ವಿದ್ಯುತ್ ಸಚಿವಾಲಯ ವಿವರಿಸಿದೆ.

ಪ್ರಸಕ್ತ ವರ್ಷದ ಮೊದಲ ಎಂಟು ತಿಂಗಳಲ್ಲಿ ಶೇ 9ರಷ್ಟು ವಿದ್ಯುತ್ ಬಳಕೆ ಹೆಚ್ಚಳವಾಗಿದೆ. ಇದು ಆರ್ಥಿಕ ಚಟುವಟಿಕೆಗಳ ಚೇತರಿಕೆಯನ್ನು ತೋರಿಸುತ್ತದೆ ಎಂದು ಕೈಗಾರಿಕಾ ತಜ್ಞರು ತಿಳಿಸಿದ್ದಾರೆ.

ಕಲ್ಲಿದ್ದಲು ಆಮದು ಶೇ 40ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಭಾರತವು ಆಮದು ಮಾಡಿಕೊಳ್ಳುವ ಕಲ್ಲಿದ್ದಲು ಪ್ರಮಾಣವು ಪ್ರಸಕ್ತ ಆರ್ಥಿಕ ಸಾಲಿನ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಶೇ 4.2ರಷ್ಟು ಇಳಿಕೆಯಾಗಿ, 14.81 ಕೋಟಿ ಟನ್‌ಗೆ ತಲುಪಿದೆ.

ಕಳೆದ ಹಣಕಾಸು ಸಾಲಿನಡಿ ದೇಶದ ಕಲ್ಲಿದ್ದಲು ಆಮದು ಗುರಿ ಒಟ್ಟು 15.47 ಕೋಟಿ ಟನ್ ಇತ್ತು.

ಕಳೆದ ಸಾಲಿನ ಏಪ್ರಿಲ್–ಅಕ್ಟೋಬರ್‌ನಲ್ಲಿ ಕೋಕಿಂಗ್ ಅಲ್ಲದ ಕಲ್ಲಿದ್ದಲು ಆಮದು ಪ್ರಮಾಣ 10.4 ಕೋಟಿ ಟನ್ ಇತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಇದೇ ಅವಧಿಯಲ್ಲಿ 9.45 ಕೋಟಿ ಟನ್‌ಗೆ ಇಳಿಕೆಯಾಗಿದೆ ಎಂದು ಇ–ವಾಣಿಜ್ಯ ಸಂಸ್ಥೆಯಾದ ಎಂ-ಜಂಕ್ಷನ್ ಸರ್ವಿಸ್ ಲಿಮಿಟೆಡ್‌ನ ಅಂಕಿ–ಅಂಶ ತಿಳಿಸಿವೆ.

ಅಲ್ಲದೇ, ಪ್ರಸಕ್ತ ಸಾಲಿನ ಮೊದಲು ಏಳು ತಿಂಗಳ ಅವಧಿಯಲ್ಲಿ 3.37 ಕೋಟಿ ಟನ್ ಕೋಕಿಂಗ್ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 3.27 ಕೋಟಿ ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗಿತ್ತು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ನಿವೃತ್ತಿ ಹೊಂದಿರುವವರು, ಗೃಹಿಣಿಯರು, ಅರೆಕಾಲಿಕ ಕೆಲಸ ಮಾಡುವವರನ್ನು ನೇಮಕ ಮಾಡಿಕೊಳ್ಳಲಾಗುವುದು. ಸಂಪರ್ಕಿಸಿ: 9845316068

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 8050198999, 6366430266

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ12,000- 17,000, 8951315839, 7022770052

WANTED FOR Bank Loan Collection Field Executive 2 Wheeler Must, Good Salary + Attractive Incentive. 10th, 12th Pass/ Any Degree. 8762900934/ 8867443657

ವ್ಯಾಪಾರ

Business to Business

Business

ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಪ್ರವಾಸ

Pilgrimage Tours

ದುಬೈ ಟೂರ್ ಪ್ಯಾಕೇಜ್ 6 ದಿನಗಳು 13/02/2024 ಬುರ್ಜ್‌ಅಲ್ ಅರಬ್, ಜುಮೇರಿಯಾ ಮಸೀದಿ, ಪಾಮ್ ಜುಮೇರಿಯಾ ದ್ವೀಪ, ಶೇಕ್ಜಾಯೇದ್ ರಸ್ತೆ, ಅಬುದಾಬಿ, ದುಬಾಯಿಫೇಮ್ ಬುರ್ಜ್ಖಲೀಫ್, ದುಬೈ ಮಾಲ್, ಮಿರಾಕಲ್ ಗಾರ್ಡನ್ ಗ್ಲೋಬಲ್ ಹಳ್ಳಿ. ಸುವರ್ಣ ಯಾತ್ರ ಪ್ಯಾಕೇಜ್ 9480843945

Travel

17.12.2023 ರಿಂದ ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ,ಮಹಾಕಾಳೇಶ್ವರ, 14.02.2024 ಕಾಶಿ,ಬುದ್ಧಗಯಾ ಬೈದ್ಯನಾಥ್,ಅಯೋಧ್ಯಾ, 02.03.2024 ಮಹಾಶಿವರಾತ್ರಿ ಪ್ರಯುಕ್ತ ನೇಪಾಳ ಪಶುಪತಿನಾಥ ದರ್ಶನ. 24.12.2023 ಪಂಚರಾಮ ಕ್ಷೇತ್ರಗಳು,ಶಕ್ತಿಪೀಠ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 8431888138

ಭಾರತಪರಂಪರ ದರ್ಶನ 15.12.2023, 7ದಿನ ನವಗ್ರಹಸಹಿತ,ತಮಿಳುನಾಡು. 16.1.2024 11ದಿನ ಗುಜರಾತ್ ಮಧ್ಯಪ್ರದೇಶ, 4ಜ್ಯೋತಿರ್ಲಿಂಗ 8.2.2024 ಕಾಶಿ,ಅಯೋಧ್ಯ 7ದಿನ. 9448792891.

ಭವಿಷ್ಯ

Astrology

ಒಂದೇ ಕರೆಯಲ್ಲಿಶಾಶ್ವತ ಪರಿಹಾರ ಸ್ತ್ರೀಪುರುಷ.ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿಪರಿಹಾರ ಪಂಡಿತ್:ಮೋಡಿ.ಬೆಟ್ಟಪ್ಪ ಉಚಿತ:ಭವಿಷ್ಯ:ಖಚಿತ ಪರಿಹಾರ,ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಹೆಸರು ಬದಲಾವಣೆ

ನಿಮ್ಮ ಹೆಸರು ಬದಲಾವಣೆ ಆಗಿದೆಯೇ?

ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ

www.dhclassifieds.com
ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಯುದ್ಧನೌಕೆ ಮೇಲೆ ಡ್ರೋನ್ ದಾಳಿ: ಫ್ರಾನ್ಸ್

ಪ್ಯಾರಿಸ್ (ಎಪಿ): 'ಯೆಮನ್ ಕಡೆಯಿಂದ ಬಂದ ಡ್ರೋನ್‌ಗಳು ಕೆಂಪು ಸಮುದ್ರದಲ್ಲಿ ನಮ್ಮ ಯುದ್ಧನೌಕೆಯನ್ನು ಗುರಿಯಾಗಿಸಿಕೊಂಡು ದಾಳಿಗೆ ಮುಂದಾಗಿದ್ದವು, ಸದ್ಯ ಅವುಗಳನ್ನು ಹೊಡೆದುರುಳಿಸಲಾಗಿದೆ' ಎಂದು ಫ್ರಾನ್ಸ್ ಭಾನುವಾರ ಹೇಳಿದೆ.

ತನ್ನ ಯುದ್ಧನೌಕೆ ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದ್ದು ಯಾರು ಎಂಬ ಬಗ್ಗೆ ಏನನ್ನೂ ಹೇಳಿಲ್ಲ.

ಎರಡನ್ನೂ ಹೊಡೆದು ಉರುಳಿಸಲಾಯಿತು ಎಂದು ಫ್ರಾನ್ಸ್ ಸೇನೆಯು ತಿಳಿಸಿದೆ.

'ವಿಕಸಿತ ಭಾರತ@2047': ವರ್ಚುವಲ್ ಮೂಲಕ ಪ್ರಧಾನಿ ಸಂವಾದ ಇಂದು

ಯುವಜನರ ಮಾತು ಆಲಿಸಲಿರುವ ಕೇಂದ್ರ

ನವದೆಹಲಿ (ಪಿಟಿಐ): '2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ರಾಷ್ಟ್ರವಾಗಿಸುವ ಗುರಿ ಸಾಧಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಯುವಜನರ ಅಭಿಪ್ರಾಯಗಳನ್ನು ಪರಿಗಣಿಸಲಿದೆ' ಎಂದು ನೀತಿ ಆಯೋಗದ ಸಿಇಒ ಬಿ.ವಿ. ಆರ್.ಸುಬ್ರಹ್ಮಣ್ಯಂ ಹೇಳಿದ್ದಾರೆ.



ಸುಬ್ರಹ್ಮಣ್ಯಂ

ಸುದ್ದಿಗಾರರ ಜೊತೆಗೆ ಭಾನುವಾರ ಮಾತನಾಡಿದ ಅವರು,'ವಿಶ್ವವಿದ್ಯಾಲಯಗಳು ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಯುವಜನರ ಅಭಿಪ್ರಾಯಗಳನ್ನು ಪಡೆಯುವ ಕೆಲಸ ನಡೆಯಲಿದೆ' ಎಂದು ತಿಳಿಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಈ ನಿಮಿತ್ತ ಸೋಮವಾರ ರಾಜಭವನಗಳ ಮೂಲಕ ಸುಮಾರು 700 ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಉದ್ದೇಶಿಸಿ ಮಾತನಾಡಲಿದ್ದು, ಯುವಜನರ ಅಭಿಪ್ರಾಯ ಪಡೆಯುವ ಬಗ್ಗೆ ಚರ್ಚಿಸುವರು' ಎಂದರು.

ಅವರ ಪ್ರಕಾರ, '2047ರ ವೇಳೆಗೆ ದೇಶವನ್ನು ಅಭಿವೃದ್ಧಿ ರಾಷ್ಟ್ರವಾಗಿಸಲು ಆರ್ಥಿಕತೆಯ ಗಾತ್ರವನ್ನು 30 ಟ್ರಿಲಿಯನ್ ಡಾಲರ್ ಮೊತ್ತಕ್ಕೆ ಏರಿಸುವ ಸಂಬಂಧ ದೂರದರ್ಶಿ ಕೈಪಿಡಿ ರಚಿಸಲಾಗುತ್ತಿದೆ. ಇದನ್ನು ಜನವರಿಯಲ್ಲಿ ಪ್ರಧಾನಿ ಬಿಡುಗಡೆ ಮಾಡುವರು'.

'ದೇಶವೀಗ ಇತಿಹಾಸ ಸೃಷ್ಟಿಸುವ ಹಾದಿಯಲ್ಲಿದೆ. 21ನೇ ಶತಮಾನ ಭಾರತದ ಶತಮಾನವಾಗಿದೆ. ಶಿಕ್ಷಣ, ಆರೋಗ್ಯ, ಗ್ರಾಮೀಣ ಆರ್ಥಿಕತೆ, ಮೂಲಸೌಕರ್ಯ, ಡಿಜಿಟಲ್ ಮೂಲ ಸೌಲಭ್ಯಕ್ಷೇತ್ರದ ಪ್ರಗತಿ ಇದನ್ನು ಸಾಧಿಸಲು ಚಿಮ್ಮುಹಲಗೆಯಾಗಲಿವೆ' ಎಂದರು.

'ಗುರಿ ಸಾಧನೆಗೆ ಸಾಮಾನ್ಯ ದೃಷ್ಟಿಕೋನಕ್ಕಿಂತಲೂ ಹೊಸ ಚಿಂತನೆಗಳು ಅಗತ್ಯ. ಹೊಸ ಚಿಂತನೆಗಳುಳ್ಳ ಯುವಜನರನ್ನು ದೇಶ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿ 'ಅಭಿವೃದ್ಧಿ ಭಾರತ' ನಿರ್ಮಿಸುವ ಕಾರ್ಯಕ್ಕಾಗಿ ಒಗ್ಗೂಡಿಸುವ ಅಗತ್ಯವಿದೆ' ಎಂದು ಹೇಳಿದರು.

'2047ರಲ್ಲಿನ ವೇಳೆಗೆ ಅಭಿವೃದ್ಧಿ ಭಾರತದ ಸ್ವರೂಪವು ಹೇಗಿರಬೇಕು ಎಂಬ ಬಗ್ಗೆ ಯುವಜನರು ಹಾಗೂ ಸಾರ್ವಜನಿಕರು ತಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ತಿಳಿಸಲು ಅನುವಾಗುವಂತೆ ವೆಬ್‌ಸೈಟ್ ರೂಪಿಸಲಿದ್ದು, ತಿಂಗಳಲ್ಲಿ ಆರಂಭವಾಗಲಿದೆ. ಭಿನ್ನ ಆಯಾಮಗಳಲ್ಲಿ ಗುರಿ ಸಾಧಿಸಲು ಏನನ್ನು ಮಾಡಬೇಕು ಎಂಬುದರ ಕುರಿತ ಅನಿಸಿಕೆಗಳನ್ನು ತಿಳಿಸಬಹುದಾಗಿದೆ ಎಂದರು.

'ವಿಕಸಿತ ಭಾರತ @ 2047' ಕುರಿತು 10 ವಲಯಗಳಿಗೆ ಅನ್ವಯಿಸಿ ದೂರದರ್ಶಿ ಕ್ರಿಯಾಯೋಜನೆಯನ್ನು ರೂಪಿಸುವ ಹೊಣೆಯನ್ನು ಕೇಂದ್ರ ಸರ್ಕಾರವು ಇದೇ ವರ್ಷ ನೀತಿ ಆಯೋಗಕ್ಕೆ ವಹಿಸಿತ್ತು. ದೇಶದ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವ ವೇಳೆಗೆ ಅಭಿವೃದ್ಧಿ ಭಾರತದ ಗುರಿಯನ್ನು ಸಾಧಿಸುವುದು ಇದರ ಉದ್ದೇಶವಾಗಿದೆ.

ಸುಳ್ಳು ಸುದ್ದಿ ಪತ್ತೆಗೆ ಐದು ಸಂಸ್ಥೆ ಆಯ್ಕೆ

ಒಂದನೇ ಪುಟದಿಂದ...

'ಈ ಸಂಸ್ಥೆಗಳು ತಮ್ಮದೇ ವ್ಯವಸ್ಥೆಯಡಿ ಸುಳ್ಳು ಸುದ್ದಿಗಳನ್ನು ಪತ್ತೆ ಮಾಡುತ್ತಿವೆ. ಒಂದು ಕಂಪೆನಿಯು ಸುಳ್ಳು ಸುದ್ದಿಯನ್ನು ಕೃತಕ ಬುದ್ಧಿಮತ್ತೆ (ಎ.ಐ) ವ್ಯವಸ್ಥೆ ಬಳಸಿ ಪತ್ತೆ ಮಾಡಿದರೆ, ಮತ್ತೊಂದು ಕಂಪೆನಿಯು ವಾಟ್ಸ್ಆ್ಯಪ್ ಮೂಲಕ ಹರಡುವ ಸುಳ್ಳು ಸುದ್ದಿಗಳನ್ನು ಪತ್ತೆ ಹಚ್ಚುತ್ತಿದೆ' ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಎಡಿಜಿಪಿ ನೇತೃತ್ವದಲ್ಲಿ ಐಡಿಟಿಯು ಕಾರ್ಯಾಚರಣೆ ಆರಂಭವಾದ ನಂತರ, ಒಂದೇ ವ್ಯವಸ್ಥೆಯಡಿ ಎಲ್ಲ ಸಂಸ್ಥೆಗಳು ಕೆಲಸ ಮಾಡಲಿವೆ' ಎಂದರು.

ಕಂಪೆನಿಗಳ ವಿವರ

ಗೌರಿ ಮೀಡಿಯಾ ಟ್ರಸ್ಟ್: ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆ ನಂತರ, ಅವರ ಹೆಸರಿನಲ್ಲಿ ಗೌರಿ ಮೀಡಿಯಾ ಟ್ರಸ್ಟ್ ಸ್ಥಾಪಿಸಲಾಗಿದೆ. ಟ್ರಸ್ಟ್ ಅಡಿಯಲ್ಲಿ ಸುಳ್ಳು ಸುದ್ದಿ ಪತ್ತೆ, ಜಾಲತಾಣ ನಿರ್ವಹಣೆ, ಪುಸ್ತಕಗಳ ಪ್ರಕಟಣೆ ಮಾಡಲಾಗುತ್ತಿದೆ.

ಲಾಜಿಕಲಿ ಇನ್ಫೊ ಮೀಡಿಯಾ: ಇದು ಲೀರಿಕ್ ಜೈನ್ ಅವರು ಸ್ಥಾಪಿಸಿರುವ ಕಂಪೆನಿ. ಇಂಗ್ಲೆಂಡ್‌ನಲ್ಲಿ ಕೇಂದ್ರ ಕಚೇರಿ ಇದೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ಶಾಖೆಗಳಿವೆ.

ಟ್ರೈಲೈಕ್ ಟೆಕ್ನಾಲಜಿ ಲಿ.: ಇದು ಜಾರ್ಖಂಡ್‌ನವರು ಸ್ಥಾಪಿಸಿರುವ ಕಂಪೆನಿ. ಸರ್ಚ್ ಎಂಜಿನ್ ಮಾದರಿಯಲ್ಲಿ ಕಂಪೆನಿ ಕೆಲಸ ಮಾಡುತ್ತಿದೆ. ಜೊತೆಗೆ, 13 ಟ್ಯಾಬ್ಸ್ ಎಂಬ ಅಧೀನ ಕಂಪೆನಿಯನ್ನು ಹೊಂದಿದೆ.

ಒಡಬ್ಲ್ಯು ಡಾಟಾ ಲೀಡ್ಸ್: ಪತ್ರಕರ್ತ ಸೈಯದ್ ನಜಕತ್ ಸ್ಥಾಪನೆ ಮಾಡಿರುವ ಕಂಪೆನಿ.

ನ್ಯೂಸ್ ಪ್ಲಸ್ ಕಮ್ಯೂನಿಕೇಷನ್ಸ್: ಈ ಕಂಪೆನಿ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ದಾಳಿ ಮತ್ತಷ್ಟು ತೀವ್ರಗೊಳಿಸಿದ ಇಸ್ರೇಲ್

ರಫಾಹ್ (ಗಾಜಾಪಟ್ಟಿ) (ಎಪಿ): ಇಸ್ರೇಲ್– ಹಮಾಸ್ ನಡುವೆ ಕದನವಿರಾಮ ಘೋಷಣೆಗೆ ಆಗ್ರಹಪಡಿಸುವ ಅಂತರರಾಷ್ಟ್ರೀಯ ಯತ್ನಕ್ಕೆ ಅಮೆರಿಕ ತಡೆಯೊಡ್ಡಿದ ಬೆನ್ನಲ್ಲೇ ಖಾನ್ ಯೂನಿಸ್ ಸೇರಿದಂತೆ ಗಾಜಾದ ಎಲ್ಲ ಪ್ರದೇಶಗಳ ಮೇಲೆ ಇಸ್ರೇಲ್ ಭಾನುವಾರ ದಾಳಿಯನ್ನು ತೀವ್ರಗೊಳಿಸಿದೆ.

ಕದನವಿರಾಮ ಘೋಷಣೆ ಹಾಗೂ ಹಮಾಸ್‌ನಿಂದ ಒತ್ತೆಯಾಳುಗಳ ಬೇಷರತ್ ಬಿಡುಗಡೆಗೆ ಆಗ್ರಹಪಡಿಸುವ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮತಕ್ಕೆ ಹಾಕಲಾಗಿದ್ದ ನಿರ್ಣಯದ ಅನುಮೋದನೆಯನ್ನು ಅಮೆರಿಕ ತನ್ನ 'ವಿಟೊ' ಪರಮಾಧಿಕಾರ ಬಳಸಿ ತಡೆಹಿಡಿದಿದೆ.'ಹಮಾಸ್ ಬಂಡುಕೋರರು ಈವರೆಗೆ ಸುಮಾರು 117 ಒತ್ತೆಯಾಳುಗಳನ್ನು ಹತ್ಯೆ ಮಾಡಿದ್ದಾರೆ. ಅಕ್ಟೋಬರ್ 7ರಂದು ವಶಕ್ಕೆ ಪಡೆಯಲಾದ 20 ಮಂದಿಯನ್ನು ಕೊಂದಿದ್ದಾರೆ ಎಂದು ಪ್ರಧಾನಿ ನೆತನ್ಯಾಹು ಕಚೇರಿ ತಿಳಿಸಿದೆ.

ನೊಬೆಲ್ ಶಾಂತಿ ಪುರಸ್ಕಾರ: ನರ್ಗೆಸ್ ಪರ ಮಕ್ಕಳಿಂದ ಸ್ವೀಕಾರ

ಹೆಲ್ಸಿನ್‌ಕಿ (ಎಪಿ): ಬಂಧಿತ ಇರಾನ್ ಹೋರಾಟಗಾರ್ತಿ ನರ್ಗೆಸ್ ಮೊಹಮ್ಮದಿ ಅವರಿಗೆ ಸಂದಿರುವ ನೊಬೆಲ್ ಶಾಂತಿ ಪುರಸ್ಕಾರವನ್ನು ಅವರ ಇಬ್ಬರು ಮಕ್ಕಳು ನಾರ್ವೆಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಸ್ವೀಕರಿಸಿದರು.

ನರ್ಗೆಸ್

ಓಸ್ಲೊ ಸಿಟಿ ಹಾಲ್‌ನಲ್ಲಿ ನಡೆದ ಸಮಾರಂಭಕ್ಕೆ ತಂದೆಯೊಂದಿಗೆ ಆಗಮಿಸಿದ್ದ ಅಲಿ ಮತ್ತು ಕೈನಾ ರಹ್ಮಾನಿ, ತಾಯಿಯ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.

ಮೊಹಮ್ಮದಿ ಅವರು ಇರಾನ್‌ನಲ್ಲಿ ಮಹಿಳೆಯರ ಹಕ್ಕುಗಳು, ಪ್ರಜಾಪ್ರಭುತ್ವದ ಪರವಾಗಿ ಮತ್ತು ಮರಣ ದಂಡನೆ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಇರಾನ್‌ನಲ್ಲಿ ತುಳಿತಕ್ಕೆ ಒಳಗಾದ ಮಹಿಳೆಯರ ಪರ ಧ್ವನಿ ಎತ್ತಿದ, ಮಾನವ ಹಕ್ಕುಗಳಿಗಾಗಿ ಹೋರಾಡಿದ ಮತ್ತು ಎಲ್ಲರಿಗೂ ಸ್ವಾತಂತ್ರ್ಯ ಸಿಗಬೇಕೆನ್ನುವ ಆಶಯದಿಂದ ಕೆಲಸ ಮಾಡಿದ ಕಾರಣಕ್ಕಾಗಿ ನರ್ಗೆಸ್ ಅವರನ್ನು ನೊಬೆಲ್ ಶಾಂತಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

'ಬೆಂಬಲ ಅಗತ್ಯ': ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೈನಾ ರಹ್ಮಾನಿ ಅವರು ತಮ್ಮ ತಾಯಿ ಕಳುಹಿಸಿದ ಸಂದೇಶವನ್ನು ಓದಿದರು. 'ಇಸ್ಲಾಮಿಕ್ ರಿಪಬ್ಲಿಕ್ ಸರ್ಕಾರದ ವಿರುದ್ಧ ಹೋರಾಡಲು ಇರಾನ್ ಸಮಾಜಕ್ಕೆ ಜಾಗತಿಕ ಮತ್ತು ಪತ್ರಕರ್ತರ ಬೆಂಬಲ ಅಗತ್ಯವಿದೆ. ಈವರೆಗೆ ನೀವು ಮಾಡಿದ ಸಹಾಯಕ್ಕೆ ಧನ್ಯವಾದ' ಎಂದು ನರ್ಗೆಸ್ ಅವರು ಪತ್ರದಲ್ಲಿ ತಿಳಿಸಿದ್ದರು.

ಅಖಿಲ ಭಾರತ ಬಿಎಸ್‌ಪಿ ಸಭೆಯಲ್ಲಿ ಘೋಷಣೆ • ಪಕ್ಷದ ಪ್ರಕಟಣೆಯಲ್ಲಿ ಇಲ್ಲ ಉಲ್ಲೇಖ

ಮಾಯಾವತಿ ಉತ್ತರಾಧಿಕಾರಿ ಆಕಾಶ್

ಲಖನೌ (ಪಿಟಿಐ): ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಅವರು ತಮ್ಮ ಸೋದರಳಿಯ ಆಕಾಶ್ ಆನಂದ್ ಅವರನ್ನು ರಾಜಕೀಯ ಉತ್ತರಾಧಿಕಾರಿಯನ್ನಾಗಿ ಭಾನುವಾರ ಘೋಷಿಸಿದ್ದಾರೆ ಎಂದು ಪಕ್ಷದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಆಕಾಶ್ ಅವರು ಈಗ ಬಿಎಸ್‌ಪಿ ರಾಷ್ಟ್ರೀಯ ಸಂಚಾಲಕ ಆಗಿದ್ದಾರೆ.

'ಲಖನೌದಲ್ಲಿ ನಡೆದ ಅಖಿಲ ಭಾರತ ಬಿಎಸ್‌ಪಿ ಸಭೆಯಲ್ಲಿ ಮಾಯಾವತಿ ಅವರು ಈ ನಿರ್ಧಾರ ಪ್ರಕಟಿಸಿದರು. ಉತ್ತರಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳನ್ನು ಹೊರತುಪಡಿಸಿದರೆ ಪಕ್ಷವು ದುರ್ಬಲವಾಗಿರುವ ಬೇರೆಲ್ಲ ಕಡೆ ಸಂಘಟನೆಯನ್ನು ಸದೃಢವಾಗಿಸುವ ಜವಾಬ್ದಾರಿಯನ್ನು ಆಕಾಶ್ ಅವರಿಗೆ ನೀಡಲಾಗಿದೆ' ಎಂದು ಶಹಜಹಾನ್‌ಪುರ ಜಿಲ್ಲಾ ಬಿಎಸ್‌ಪಿ ಘಟಕದ ಮುಖ್ಯಸ್ಥ ಉದಯ್‌ವೀರ್ ಸಿಂಗ್ ತಿಳಿಸಿದ್ದಾರೆ.

ಈ ಬೆಳವಣಿಗೆಯನ್ನು ಬಿಎಸ್‌ಪಿ ವಿಧಾನ ಪರಿಷತ್ ಸದಸ್ಯ ಭೀಮ್‌ರಾವ್ ಅಂಬೇಡ್ಕರ್ ಅವರು ಕೂಡ ದೃಢಪಡಿಸಿದ್ದಾರೆ. 'ಆಕಾಶ್ ಆನಂದ್ ಮೂಲಕ ನಮಗೆ ಯುವ ನಾಯಕ ದೊರಕಿದ್ದಾರೆ. ಪಕ್ಷವು ದುರ್ಬಲವಾಗಿರುವ ರಾಜ್ಯಗಳಲ್ಲಿ ಆಕಾಶ್ ಅವರು ಪಕ್ಷ ಬಲಪಡಿಸುವ ಕೆಲಸ ಮಾಡಲಿದ್ದಾರೆ' ಎಂದರು.

ಈ ಬೆಳವಣಿಗೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪಕ್ಷದ ಉತ್ತರಪ್ರದೇಶ ಘಟಕದ ಮುಖ್ಯಸ್ಥ ವಿಶ್ವನಾಥ್ ಪಾಲ್ ಅವರು, 'ಸಂಪೂರ್ಣ ಬಹುಜನ ಸಮುದಾಯವೇ ಸಂತೋಷಪಟ್ಟಿದೆ' ಎಂದರು. ಆದರೆ, ಪಕ್ಷದ ಅಧಿಕೃತ ಪ್ರಕಟಣೆಯಲ್ಲಿ ಉತ್ತರಾಧಿಕಾರಿ ಘೋಷಣೆ ಕುರಿತು ಮಾಹಿತಿ ನೀಡಿಲ್ಲ.

'ನಮ್ಮ ಮತ, ಅವರ ಆಡಳಿತ' ಎಂಬ ಶೋಷಣೆಯ ವ್ಯವಸ್ಥೆಯಿಂದ ಬಡವರು, ಹಿಂದುಳಿದವರು ಮತ್ತು ದೌರ್ಜನ್ಯಕ್ಕೊಳಗಾದ ವರ್ಗಗಳನ್ನು ಮುಕ್ತಗೊಳಿಸಬೇಕು. ಇದಕ್ಕಾಗಿ ಮುಂಬರುವ ಲೋಕಸಭಾ ಚುನಾವಣೆ ವೇಳೆಗೆ ಬಿಎಸ್‌ಪಿ ನೆಲೆಯನ್ನು ವಿಸ್ತರಿಸಬೇಕು ಎಂದು ಮಾಯಾವತಿ ಅವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ಲೋಕಸಭೆ ಚುನಾವಣೆಗೆ ತಯಾರಿ ಮಾಡಿಕೊಳ್ಳುವ ಕುರಿತು ವಿವಿಧ ರಾಜ್ಯಗಳ ಹಿರಿಯ ಪದಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿದ್ದಾರೆ ಎಂದು ಅಧಿಕೃತ ಪ್ರಕಟಣೆಯಲ್ಲಿ ಹೇಳಲಾಗಿದೆ.

'ಅಂಬೇಡ್ಕರ್‌ವಾದಿ ಪಕ್ಷವಾದ ಬಿಎಸ್‌ಪಿಯು ಬಹುಜನ ಸಮಾಜದ ವಿವಿಧ ವರ್ಗಗಳನ್ನು ಬೆಸೆಯುವ ಮೂಲಕ ಈ ಸಮಾಜದ ರಾಜಕೀಯ ಶಕ್ತಿ ಹೆಚ್ಚಿಸಲು ಶ್ರಮಿಸುತ್ತಿದೆ. ಪಕ್ಷದ ಮುಖ್ಯ ಉದ್ದೇಶ ಅಧಿಕಾರದ ಕೀಲಿಕೈ ವಶಕ್ಕೆ ತೆಗೆದುಕೊಳ್ಳುವುದು. ರಾಷ್ಟ್ರ ಮತ್ತು ಸಾರ್ವಜನಿಕ ಹಿತಕ್ಕೆ ಬದಲಾಗಿ ಹಣಬಲ, ಆಕರ್ಷಕ ಭರವಸೆಗಳು ಮತ್ತು ಸಂಚು ರೂಪಿಸುವ ಮೂಲಕ ಅಸ್ತಿತ್ವ ಉಳಿಸಿಕೊಂಡಿರುವ ಪ್ರತಿಪಕ್ಷಗಳನ್ನು ಎದುರಿಸಲು ದುಪ್ಪಟ್ಟು ಶ್ರಮ ವಹಿಸಿ' ಎಂದು ಮಾಯಾವತಿ ಅವರು ಕಾರ್ಯಕರ್ತರಿಗೆ ಹೇಳಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯಾವ ಮೈತ್ರಿಕೂಟವೂ ಬಹುಜನ ಚಳವಳಿಯ ಪಾಲಿಗೆ ಉತ್ತಮವಾಗಿಲ್ಲ ಎಂದಿರುವ ಮಾಯಾವತಿ ಅವರು, ಯಾವುದೇ ಮೈತ್ರಿಕೂಟದ ಜೊತೆ ಕೈಜೋಡಿಸುವುದಿಲ್ಲ ಎಂದು ಪುನರುಚ್ಚರಿಸಿದರು ಎನ್ನಲಾಗಿದೆ.

ಚಂದ್ರಶೇಖರ್‌ಗೆ ಸೆಡ್ಡು?

ಆಕಾಶ್ ಆನಂದ್ ಅವರು ಮಾಯಾವತಿ ಅವರ ತಮ್ಮ ಆನಂದ್ ಕುಮಾರ್ ಅವರ ಮಗ. ಲಂಡನ್‌ನ ಕಾಲೇಜೊಂದರಿಂದ ಎಂಬಿಎ ಪದವಿ ಪಡೆದಿದ್ದಾರೆ. ಎಕ್ಸ್ ಖಾತೆಯಲ್ಲಿ ಆಕಾಶ್ ಅವರು ತಮ್ಮನ್ನು, 'ಬಾಬಾ ಸಾಹೇಬರ ದೃಷ್ಟಿಕೋನದ ಯುವ ಬೆಂಬಲಿಗ' ಎಂದು ಹೇಳಿಕೊಂಡಿದ್ದಾರೆ. ಬಿಎಸ್‌ಪಿ ಶಾಸಕ ಭೀಮ್‌ರಾವ್ ಅಂಬೇಡ್ಕರ್ ಅವರ ಪ್ರಕಾರ, ಆಕಾಶ್ ಅವರಿಗೆ 27 ವರ್ಷ ವಯಸ್ಸು.

'ಆಕಾಶ್ ಅವರು 2017ರಿಂದಲೂ ಬಿಎಸ್‌ಪಿ ಜೊತೆ ಗುರುತಿಸಿಕೊಂಡಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಆಕಾಶ್ ಅವರು ಆಗ್ರಾದಲ್ಲಿ ರ‍್ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡಿದ್ದರು' ಎಂದು ಭೀಮ್‌ರಾವ್ ಹೇಳಿದ್ದಾರೆ. 2017ರಲ್ಲಿ ಸಹರಾನಪುರದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರ ಮೂಲಕ ಮಾಯಾವತಿ ಅವರು ಆಕಾಶ್ ಅವರನ್ನು ರಾಜಕೀಯಕ್ಕೆ ಕರೆತಂದಿದ್ದರು.

ಉತ್ತರ ಪ್ರದೇಶದ ರಾಜಕಾರಣದಲ್ಲಿ ಬಿಎಸ್‌ಪಿ ಶಕ್ತಿ ಕುಂದಿರುವ ಈ ಹೊತ್ತಿನಲ್ಲಿ ಆಕಾಶ್ ಅವರನ್ನು ಮಾಯಾವತಿ ಅವರು ತಮ್ಮ ರಾಜಕೀಯ ಉತ್ತರಾಧಿಕಾರಿ ಎಂದು ಘೋಷಿಸಿದ್ದಾರೆ.

ದಲಿತ ನಾಯಕ ಮತ್ತು ಭೀಮ್ ಆರ್ಮಿ ಸಂಸ್ಥಾಪಕ ಚಂದ್ರಶೇಖರ್ (ರಾವಣ್) ಅವರ ಪ್ರಭಾವವನ್ನು ಕುಗ್ಗಿಸುವ ಉದ್ದೇಶದಿಂದ ಆಕಾಶ್ ಅವರನ್ನು ಬಿಎಸ್‌ಪಿಯಲ್ಲಿ ಮುಖ್ಯ ಹುದ್ದೆಗೆ ತರಲಾಗುತ್ತಿದೆ ಎಂದು ಮೂಲಗಳು ವಿವರಿಸಿವೆ. ಚಂದ್ರಶೇಖರ್ ಅವರು ಮಾಯಾವತಿ ಅವರ ಮತಬ್ಯಾಂಕ್‌ಗೆ ಧಕ್ಕೆ ತಂದಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

'ಆಕಾಶ್ ಅವರು ಯುವ ನಾಯಕ... ಅವರು ಜಾತಿಗಳ ಆಚೆಗೂ ಪ್ರಭಾವ ಹೊಂದಿದ್ದಾರೆ... ಅವರು ಯುವಕರನ್ನು ಪಕ್ಷದ ಕಡೆ ಸೆಳೆಯಬಲ್ಲರು' ಎಂದು ಬಿಎಸ್‌ಪಿ ನಾಯಕ ಸುರೇಂದ್ರ ಸಿಂಗ್ ಹೇಳುತ್ತಾರೆ. ಆಕಾಶ್ ಅವರು 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪಕ್ಷದಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸಿದ್ದರು. 2022ರ ವಿಧಾನಸಭಾ ಚುನಾವಣೆ ವೇಳೆ ಪಕ್ಷದ ಸಾಮಾಜಿಕ ಜಾಲತಾಣ ಅಭಿಯಾನದ ಮೇಲ್ವಿಚಾರಣೆ ನಡೆಸಿದ್ದರು.

ಉತ್ತರಪ್ರದೇಶದ ಲಖನೌನಲ್ಲಿ ಭಾನುವಾರ ನಡೆದ ಬಿಎಸ್‌ಪಿ ಪದಾಧಿಕಾರಿಗಳ ಸಭೆಯಲ್ಲಿ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ತಮ್ಮ ಸೋದರಳಿಯ ಆಕಾಶ್ ಆನಂದ್ ಅವರ ಜೊತೆ ಕಾಣಿಸಿಕೊಂಡರು –ಪಿಟಿಐ ಚಿತ್ರ

ಬಿಜೆಪಿ ಜೊತೆ ಚುನಾವಣಾ ಮೈತ್ರಿ; ಕೇರಳ ಜೆಡಿಎಸ್ ನಿಲುವು ಅಸ್ಪಷ್ಟ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಜೆಡಿಎಸ್ ಪಕ್ಷದ ಕೇರಳ ಘಟಕವು ಎರಡು ದೋಣಿಗಳ ಮೇಲೆ ಕಾಲಿಟ್ಟಂತಿದ್ದು, ಬಿಜೆಪಿ ಜೊತೆಗೆ ಮೈತ್ರಿ ಹೊಂದುವ ಪಕ್ಷದ ತೀರ್ಮಾನ ಕುರಿತಂತೆ ತನ್ನ ಅಸ್ಪಷ್ಟ ನಿಲುವನ್ನೇ ಮುಂದುವರಿಸಿದೆ.

ಬಿಜೆಪಿ ಜೊತೆಗಿನ ಮೈತ್ರಿ ಕುರಿತು ಪಕ್ಷದ ರಾಷ್ಟ್ರೀಯ ವರಿಷ್ಠ ಎಚ್.ಡಿ.ದೇವೇಗೌಡ ನಿರ್ಧಾರ ಕೈಗೊಂಡಿದ್ದಾರೆ. ಆದರೆ, ಪಕ್ಷದ ಕೇರಳ ಘಟಕವು ಸದ್ಯ ಸಿಪಿಎಂ ನೇತೃತ್ವದ ಆಡಳಿತರೂಢ ಮೈತ್ರಿಕೂಟದ ಭಾಗವಾಗಿದೆ.

'ಮೈತ್ರಿ ಕುರಿತಂತೆ ದೇವೇಗೌಡರ ತೀರ್ಮಾನವನ್ನು ವಿರೋಧಿಸುತ್ತೇವೆ' ಎಂದು ಕೇರಳ ಘಟಕದ ನಾಯಕರು ಈಗಾಗಲೇ ಪ್ರಕಟಿಸಿದ್ದಾರೆ. ಆದರೂ, ದೇವೇಗೌಡರ ನೇತೃತ್ವದ ಜೆಡಿಎಸ್ ಜೊತೆಗೇ ಒಡನಾಟವನ್ನು ಹೊಂದಿದ್ದಾರೆ.

'ಗೌಡರ ನಿರ್ಧಾರ ಪಕ್ಷದ ಅಧಿಕೃತ ತೀರ್ಮಾನವಲ್ಲ. ಹೀಗಾಗಿ, ನಮ್ಮದೇ ಮೂಲ ಪಕ್ಷವಾಗಿ ಉಳಿಯಲಿದೆ' ಎಂದೂ ಕೇರಳ ಘಟಕದ ನಾಯಕರು ಪ್ರತಿಪಾದಿಸಿದ್ದರು. ಆದರೆ, ಈ ನಿಟ್ಟಿನಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ.

'ಎನ್‌ಡಿಎ ಸೇರುವ ತೀರ್ಮಾನ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೂ ಗೊತ್ತಿತ್ತು' ಎಂದು ಹಿಂದೆ ಗೌಡರು ಹೇಳಿದ್ದರು. ಇದರ ಬೆನ್ನಲ್ಲೇ, ಈ ಮಾತನ್ನು ವಿಜಯನ್ ಅವರು ತಳ್ಳಿಹಾಕಿದ್ದರು.

ಕೇರಳದಲ್ಲಿ ಜೆಡಿಎಸ್‌ನ ಇಬ್ಬರು ಶಾಸಕರಿದ್ದಾರೆ. ಕೆ.ಕೃಷ್ಣನ್ ಕುಟ್ಟಿ ಮೈತ್ರಿ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದರೆ, ಮ್ಯಾಥ್ಯೂ ಟಿ.ಥಾಮಸ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು. ಮೈತ್ರಿ ಕುರಿತಂತೆ ಗೌಡರ ಜೊತೆಗಿನ ಸಂಘರ್ಷ ಅಥವಾ ಹೊಸ ಪಕ್ಷ ರಚಿಸುವ ಸಾಧ್ಯತೆಗಳು ಶಾಸನಸಭೆಯ ಸದಸ್ಯತ್ವ ಅನರ್ಹತೆಗೂ ದಾರಿಯಾಗಬಹುದು.

ಪಕ್ಷದ ರಾಜ್ಯ ಘಟಕದ ನಿಲುವಿನಲ್ಲಿ ಅಸ್ಪಷ್ಟತೆ ಕುರಿತು ಗಮನ ಸೆಳೆದಾಗ ಥಾಮಸ್ ಅವರು, ಭವಿಷ್ಯದ ಹೆಜ್ಜೆ ಕುರಿತೂ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದರು. ಇನ್ನೊಂದೆಡೆ, ಪಕ್ಷದ ನಾಯಕರಾದ ಸಿ.ಎಂ.ಇಬ್ರಾಹಿಂ ಮತ್ತು ಸಿ.ಕೆ. ನಾನು ಅವರು ಕರೆದಿರುವ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಕುರಿತಂತೆಯೂ ರಾಜ್ಯ ಘಟಕವು ಅಂತರವನ್ನು ಕಾಯ್ದುಕೊಂಡಿದೆ.

ಇನ್ನೊಂದೆಡೆ, 'ಬೆಂಗಳೂರಿನಲ್ಲಿ ಸೋಮವಾರ ನಡೆಯಲಿರುವ ಸಭೆಯಲ್ಲಿ ಕೇರಳ ಘಟಕದ ಕೆಲವು ಮುಖಂಡರೂ ಭಾಗವಹಿಸಲಿದ್ದಾರೆ' ಎಂದು ನಾನು ತಿಳಿಸಿದ್ದಾರೆ.

19ರಂದು 'ಇಂಡಿಯಾ' ಸಭೆ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಡಿಸೆಂಬರ್ 19ರಂದು ದೆಹಲಿಯಲ್ಲಿ ಸಭೆ ನಡೆಸಲಿದೆ. ಬಿಜೆಪಿ ವಿರುದ್ಧ ಪ್ರಮುಖ ಕಾರ್ಯಸೂಚಿಗಳನ್ನು ನಿಗದಿಪಡಿಸುವುದು, ಸ್ಥಾನ ಹಂಚಿಕೆ ಮತ್ತು ಜಂಟಿಯಾಗಿ ರ‍್ಯಾಲಿಗಳನ್ನು ಆಯೋಜಿಸುವ ಬಗ್ಗೆ ಮಾತುಕತೆಯು ಮೈತ್ರಿಕೂಟದ ಮುಂದಿರುವ ವಿಷಯಗಳು. ಈ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎನ್ನಲಾಗಿದೆ.

'ಇಂಡಿಯಾ' ಪಕ್ಷಗಳ ನಾಯಕರ ನಾಲ್ಕನೇ ಸಭೆಯನ್ನು ದೆಹಲಿಯಲ್ಲಿ ಡಿಸೆಂಬರ್ 19ರಂದು ಆಯೋಜಿಸಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನಾನಲ್ಲ, ನಾವು' ಎಂಬ ಒಗ್ಗಟ್ಟಿನ ಮಂತ್ರದ ಜೊತೆ ಮುಂದೆ ಸಾಗಲು ಪಕ್ಷಗಳು ನಿರ್ಧರಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರತ್ಯುತ್ತರ ನೀಡುವ ಸಲುವಾಗಿ 'ನಾನಲ್ಲ, ನಾವು' ಘೋಷಣೆ ಅಡಿ 'ಇಂಡಿಯಾ' ಪಕ್ಷಗಳು ಕೆಲಸ ಮಾಡಲಿವೆ ಎನ್ನಲಾಗಿದೆ.

ರಾಜಸ್ಥಾನ, ಛತ್ತೀಸಗಢ ಮತ್ತು ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸಾಧನೆ ಕಳಪೆಯಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆಯುವ ಮೂಲಕ ಸತತವಾಗಿ ಮೂರನೇ ಬಾರಿಗೆ ಅಧಿಕಾರಕ್ಕೇರಲಿದೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ 'ಇಂಡಿಯಾ' ಸಭೆ ಮಹತ್ವದ್ದಾಗಿದೆ. ಮುಂಬರಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಪರ್ಯಾಯವಾದ ಸಕಾರಾತ್ಮಕ ಕಾರ್ಯಸೂಚಿ ರೂಪಿಸುವ ಸವಾಲು ವಿರೋಧಪಕ್ಷಗಳ ಎದುರಿದೆ.

ಜಾತಿ ಗಣತಿ, ಹಳೆ ಪಿಂಚಣಿ ಯೋಜನೆ ಮರು ಜಾರಿ ಸೇರಿ ಹಲವಾರು ವಿಷಯಗಳನ್ನು ವಿರೋಧ ಪಕ್ಷಗಳು ವಿಧಾನಸಭೆ ಚುನಾವಣಾ ಪ್ರಚಾರದ ವೇಳೆ ಮುನ್ನೆಲೆಗೆ ತಂದಿದ್ದವು. ಈ ಕುರಿತು ಪ್ರತಿಕ್ರಿಯೆ ನೀಡಿದ ನಾಯಕರೊಬ್ಬರು, 'ಚುನಾವಣಾ ಪ್ರಚಾರದ ವೇಳೆ ಮುನ್ನೆಲೆಗೆ ತಂದಿದ್ದ ವಿಷಯಗಳನ್ನು ಮತದಾರರು ತಿರಸ್ಕರಿಸಿದ್ದಾರೆ ಎಂಬುದನ್ನು ಚುನಾವಣಾ ಫಲಿತಾಂಶವು ಬಿಂಬಿಸುತ್ತಿದೆ ಎನ್ನಲು ಸಾಧ್ಯವಿಲ್ಲ' ಎಂದಿದ್ದಾರೆ.

ಇದೇ ವೇಳೆ, ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ಭಿನ್ನ ರೀತಿಯಲ್ಲಿ ಕಾರ್ಯತಂತ್ರ ರೂಪಿಸಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ವಿಷ್ಣುದೇವ್ ಸಾಯ್: ಮೂರು ದಶಕಗಳಿಗೂ ಅಧಿಕ ಅವಧಿಯ ರಾಜಕೀಯ ಜೀವನ

ಸರಪಂಚ ಸ್ಥಾನದಿಂದ ಸಿ.ಎಂ ಗಾದಿಗೆ

ರಾಯಪುರ (ಪಿಟಿಐ): ಛತ್ತೀಸಗಢದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ವಿಷ್ಣುದೇವ್ ಸಾಯ್ ಅವರು ಗ್ರಾಮದ ಸರಪಂಚ ಆಗಿ ತಮ್ಮ ಸಾರ್ವಜನಿಕ ಜೀವನ ಆರಂಭಿಸಿದ್ದರು. ಮೂರು ದಶಕಗಳಿಗೂ ಅಧಿಕ ಕಾಲದ ರಾಜಕೀಯ ಪಯಣದಲ್ಲಿ ಹಂತಹಂತವಾಗಿ ಮೇಲೇರಿ ಇದೀಗ ಮುಖ್ಯಮಂತ್ರಿ ಹುದ್ದೆ ನಿಭಾಯಿಸಲು ಸಜ್ಜಾಗಿದ್ದಾರೆ.

ಬುಡಕಟ್ಟು ಸಮುದಾಯದ ಪ್ರಾಬಲ್ಯವಿರುವ ಜಶ್‌ಪುರ ಜಿಲ್ಲೆಯ ಬಗಿಯಾ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ (1964ರಲ್ಲಿ) ಅವರಿಗೆ ರಾಜಕೀಯವು ರಕ್ತಗತವಾಗಿಯೇ ಬಂದಿತ್ತು. ಅವರ ಅಜ್ಜ ಬುದ್ಧನಾಥ್ ಸಾಯ್ 1947ರಿಂದ 1952ರ ಅವಧಿಗೆ ನಾಮನಿರ್ದೇಶಿತ ಶಾಸಕ ಆಗಿದ್ದರು. ದೊಡ್ಡಪ್ಪ ನರಹರಿ ಪ್ರಸಾದ್ ಸಾಯ್, ಜನಸಂಘದಿಂದ ಎರಡು ಸಲ (1962–67 ಮತ್ತು 1972–77) ಶಾಸಕರಾಗಿಯೂ, ಒಂದು ಬಾರಿ ಸಂಸದರಾಗಿಯೂ (1977–79) ಆಯ್ಕೆಯಾಗಿದ್ದರು. ಇನ್ನೊಬ್ಬ ದೊಡ್ಡಪ್ಪ ಕೇದಾರ ನಾಥ ಸಾಯ್, ಒಂದು ಅವಧಿಗೆ (1967–72) ಶಾಸಕರಾಗಿದ್ದರು.

ಕುಂಕುರಿ ಸರ್ಕಾರಿ ಶಾಲೆಯಲ್ಲಿ ಕಲಿತ ಅವರು ಪದವಿ ಪಡೆಯಲು ಅಂಬಿಕಾಪುರಕ್ಕೆ ತೆರಳಿದ್ದರೂ, ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿ ತಮ್ಮ ಗ್ರಾಮಕ್ಕೆ ವಾಪಸಾಗಿದ್ದರು. 1989ರಲ್ಲಿ ಬಗಿಯಾ ಗ್ರಾಮದ ಸರಪಂಚ ಆಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಅಲ್ಲಿಂದ ಶುರುವಾದ ಅವರ ರಾಜಕೀಯ ಜೀವನ ಬಹಳಷ್ಟು ಏಳು–ಬೀಳುಗಳಿಂದ ಕೂಡಿದೆ.

ಬಿಜೆಪಿ ಮುಖಂಡ ದಿಲೀಪ್ ಸಿಂಗ್ ಜುದೇವ್ ಅವರ ಸಲಹೆಯಂತೆ 1990ರಲ್ಲಿ ಚುನಾವಣಾ ರಾಜಕೀಯಕ್ಕೆ ಕಾಲಿಟ್ಟಿದ್ದರು. ಅದೇ ವರ್ಷ ಅವಿಭಜಿತ ಮಧ್ಯಪ್ರದೇಶದ ಜಶ್‌ಪುರ ಜಿಲ್ಲೆಯ ತಪಕರಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. 1993ರಲ್ಲಿ ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಂಡಿದ್ದರು.

1998ರಲ್ಲಿ ಸಮೀಪದ ಪಥ್ಲಗಾಂವ್ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. 2003 ಮತ್ತು 2008ರ ಚುನಾವಣೆಗಳಲ್ಲೂ ಇದೇ ಕ್ಷೇತ್ರದಿಂದ ಕಣಕ್ಕಿಳಿದು ಪರಾಭವಗೊಂಡಿದ್ದರು.

ಆದರೆ ಲೋಕಸಭಾ ಚುನಾವಣೆಗಳಲ್ಲಿ ಅವರದ್ದು ಯಶಸ್ಸಿನ ಓಟ. ರಾಯಗಢ ಕ್ಷೇತ್ರದಿಂದ ನಾಲ್ಕು ಸಲ ಸಂಸದರಾಗಿದ್ದ (1999, 2004, 2009 ಮತ್ತು 2014) ಅವರು 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಉಕ್ಕು ಮತ್ತು ಗಣಿ ಖಾತೆಯ ರಾಜ್ಯ ಸಚಿವರಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಪಕ್ಷದ ಟಿಕೆಟ್ ಕೈತಪ್ಪಿತ್ತು.

2006ರಿಂದ 2010ರವರೆಗೆ ಬಿಜೆಪಿ ಛತ್ತೀಸಗಢ ಘಟಕದ ಅಧ್ಯಕ್ಷರಾಗಿದ್ದ ಅವರು 2014ರಲ್ಲಿ ಅಲ್ಪ ಅವಧಿಗೆ (ಜನವರಿಯಿಂದ ಆಗಸ್ಟ್‌ವರೆಗೆ) ಈ ಜವಾಬ್ದಾರಿ ನಿಭಾಯಿಸಿದ್ದರು. 2018ರ ಚುನಾವಣೆಯಲ್ಲಿ ಬಿಜೆಪಿ ಸೋತ ಬಳಿಕ 2020ರಲ್ಲಿ ಅವರಿಗೆ ಮತ್ತೆ ಪಕ್ಷವನ್ನು ಮುನ್ನಡೆಸುವ ಹೊಣೆ ವಹಿಸಲಾಗಿತ್ತು.

ವಿಧಾನಸಭಾ ಚುನಾವಣೆಗೆ ಒಂದು ವರ್ಷ ಇರುವಾಗ 2022ರಲ್ಲಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ, ಒಬಿಸಿ ಮುಖಂಡ ಅರುಣ್ ಸಾವ್ ಅವರನ್ನು ನೇಮಕ ಮಾಡಲಾಗಿತ್ತು. ವಿಷ್ಣುದೇವ್ ಇದೇ ವರ್ಷದ ಜುಲೈನಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ನೇಮಕ ಆಗಿದ್ದರು.

ಭರವಸೆ ಕೊಟ್ಟಿದ್ದ ಅಮಿತ್ ಶಾ

ವಿಷ್ಣುದೇವ್ ಸಾಯ್

ಕಳೆದ ತಿಂಗಳು ಕುಂಕುರಿ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡುತ್ತಾ ಗೃಹ ಸಚಿವ ಅಮಿತ್ ಶಾ ಅವರು, ಸಾಯ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದ್ದರು. ಮಾತ್ರವಲ್ಲ, ಪಕ್ಷವು ಅಧಿಕಾರಕ್ಕೇರಿದರೆ ಅವರನ್ನು 'ದೊಡ್ಡ ವ್ಯಕ್ತಿ'ಯನ್ನಾಗಿಸುವೆವು ಎಂಬ ಭರವಸೆಯನ್ನೂ ಕೊಟ್ಟಿದ್ದರು.

ನಾಲ್ಕನೇ ಸಿ.ಎಂ: ಸಾಯ್ ಅವರು ಛತ್ತೀಸಗಢದ ನಾಲ್ಕನೇ ಮುಖ್ಯಮಂತ್ರಿ ಎನಿಸಿಕೊಳ್ಳಲಿದ್ದಾರೆ. ಅಜಿತ್ ಜೋಗಿ (ಕಾಂಗ್ರೆಸ್), ರಮಣ್ ಸಿಂಗ್ (ಬಿಜೆಪಿ) ಮತ್ತು ಭೂಪೇಶ್ ಬಘೆಲ್ (ಕಾಂಗ್ರೆಸ್) ಅವರು ಈ ಹಿಂದೆ ಸಿ.ಎಂ ಆಗಿದ್ದರು. ರಮಣ್ ಸಿಂಗ್ 2003ರಿಂದ 2018ರವರೆಗೆ ಸತತ ಮೂರು ಅವಧಿಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಛತ್ತೀಸಗಢ: ಸಾಯ್ ಹೊಸ ಸಿ.ಎಂ

ಒಂದನೇ ಪುಟದಿಂದ...

ಅಲ್ಲದೆ, ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್, ರೇಣುಕಾ ಸಿಂಗ್ ಅವರ ಹೆಸರುಗಳೂ ಈ ಸ್ಥಾನಕ್ಕೆ ಚಾಲ್ತಿಯಲ್ಲಿದ್ದವು.

ಆದರೆ, ಬಿಜೆಪಿ ವೀಕ್ಷಕರು ಶಾಸಕರ ಅಭಿಪ್ರಾಯ ಆಲಿಸಿ ಸಾಯ್ ಅವರ ಹೆಸರನ್ನು ಒಕ್ಕೊರಲಿನಿಂದ ಪ್ರಕಟಿಸಿದರು. ಬುಡಕಟ್ಟು ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಸರಗುಜಾ ಮಾತ್ರವೇ ಅಲ್ಲದೆ, ಬಸ್ತಾರ್ ಪ್ರದೇಶದಲ್ಲಿ ಹೆಚ್ಚಿನ ಸ್ಥಾನಗಳನ್ನು ಬಿಜೆಪಿ ಪಡೆದಿರುವುದು ಸಾಯ್ ಅವರ ಆಯ್ಕೆಯಲ್ಲಿ ಕೆಲಸ ಮಾಡಿವೆ ಎಂದು ಮೂಲಗಳು ಹೇಳಿವೆ.

ಬಸ್ತಾರ್ ಪ್ರದೇಶದ 12 ಕ್ಷೇತ್ರಗಳ ಪೈಕಿ ಎಂಟು ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿದೆ. 2018ರಲ್ಲಿ ಈ ಪ್ರದೇಶದಲ್ಲಿ ಬಿಜೆಪಿ ಹಿನ್ನಡೆ ಅನುಭವಿಸಿತ್ತು. ನಂತರ ಅಲ್ಲಿ ಬಿಜೆಪಿ ನಾಯಕರು ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಿದ್ದರು. ಮತಾಂತರದ ವಿಷಯವನ್ನು ಅಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಿದ್ದರು.

ಬುಡಕಟ್ಟು ಸಮುದಾಯಗಳ ಪರವಾಗಿ ತಾನು ಇದ್ದೇನೆ ಎಂಬ ಸಂದೇಶವನ್ನು ರವಾನಿಸುವ ಉದ್ದೇಶದಿಂದ ಬಿಜೆಪಿಯು ಸಾಯ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರುತ್ತಿದೆ ಎನ್ನಲಾಗಿದೆ. 'ನಮ್ಮ ಪ್ರಣಾಳಿಕೆಯಲ್ಲಿ ನೀಡಿದ್ದ ಎಲ್ಲ ಭರವಸೆಗಳನ್ನು ಈಡೇರಿಸಲಾಗುವುದು' ಎಂದು ಸಾಯ್ ಅವರು ತಮ್ಮ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಅಂತಿಮಗೊಂಡ ನಂತರ ನೀಡಿದ ಮೊದಲ ಪ್ರತಿಕ್ರಿಯೆಯಲ್ಲಿ ತಿಳಿಸಿದ್ದಾರೆ.

90 ಸದಸ್ಯ ಬಲದ ಛತ್ತೀಸಗಢ ವಿಧಾನಸಭೆಯಲ್ಲಿ ಬಿಜೆಪಿಯು 54 ಸ್ಥಾನಗಳನ್ನು ಗೆದ್ದುಕೊಂಡಿದೆ. ಕಾಂಗ್ರೆಸ್ 35 ಸ್ಥಾನ ಪಡೆದಿದೆ.



ಚಿಕ್ಕಬಳ್ಳಾಪುರ ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಅಮಾನಿಗೋಪಾಲ ಕೃಷ್ಣ ಕೆರೆಗೆ ಬಿದ್ದ ಕಾರನ್ನು ಕ್ರೇನ್ ಸಹಾಯದಿಂದ ಮೇಲಕ್ಕೆ ಎತ್ತಲಾಯಿತು

ಕಾರು ಕೆರೆಗೆ ಬಿದ್ದು ನಾಲ್ವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಅಮಾನಿ ಗೋಪಾಲಕೃಷ್ಣ ಕೆರೆಗೆ ಶನಿವಾರ ರಾತ್ರಿ ಕಾರು ಬಿದ್ದು ನಾಲ್ಕು ಮಂದಿ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಟ್ಯಾಗೂರು (21), ಪವನ್ (22), ಆರ್ಯನ್ (22), ವಸಂತ್ (21) ಮೃತರು. ಟ್ಯಾಗೂರು ಮತ್ತು ಆರ್ಯನ್ ಸಹೋದರ ಸಂಬಂಧಿಗಳಾಗಿದ್ದಾರೆ. ಆರ್ಯನ್ ಕುಟುಂಬ ಚಿಕ್ಕಬಳ್ಳಾಪುರದಲ್ಲಿ ವಾಸಿಸುತ್ತಿದ್ದರೆ, ಟ್ಯಾಗೂರು ಅವರ ಕುಟುಂಬ ಚಿಂತಾಮಣಿ ಪಟ್ಟಣದ ನೆಕ್ಕುಂದಿಪೇಟೆಯಲ್ಲಿ ನೆಲೆಸಿದೆ.

ಆರ್ಯನ್ ಬೆಂಗಳೂರಿನ ಕಾಲೇಜಿನಲ್ಲಿ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರೆ, ಉಳಿದ ಮೂವರು ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದರು. ಪವನ್ ಚಿಕ್ಕಬಳ್ಳಾಪುರ ಮೂಲದವರಾಗಿದ್ದು ಸದ್ಯ ಬೆಂಗಳೂರಿನ ಹೆಬ್ಬಾಳದಲ್ಲಿ ನೆಲೆಸಿದ್ದರು. ವಸಂತ್ ಅವರ ಕುಟುಂಬ ಚಿಕ್ಕಬಳ್ಳಾಪುರದ ಎಚ್.ಎಸ್. ಗಾರ್ಡನ್‌ನಲ್ಲಿ ನೆಲೆಸಿದೆ.

ಶನಿವಾರ ಸಂಜೆ ಆರ್ಯನ್ ಅವರ ಮನೆಗೆ ಉಳಿದ ಮೂವರು ಬಂದಿದ್ದಾರೆ. ಅಲ್ಲಿಂದ ಪವನ್ ಕಾರಿನಲ್ಲಿ ಎಲ್ಲರೂ ಮನೆಯಿಂದ ಹೊರ ಹೋಗಿದ್ದಾರೆ. ರಾತ್ರಿ 10ರ ಸುಮಾರಿನಲ್ಲಿ ಹೆದ್ದಾರಿಯಿಂದ ಎಚ್.ಎಸ್.ಗಾರ್ಡನ್ ರಸ್ತೆಗೆ ತಿರುವು ಪಡೆಯುವಾಗ ನಿಯಂತ್ರಣ ತಪ್ಪಿ ಕೆರೆಗೆ ಕಾರು ಉರುಳಿದೆ. ಪವನ್ ಕಾರು ಚಾಲನೆ ಮಾಡುತ್ತಿದ್ದರು.

'ಪವನ್ ಅತಿವೇಗ ಮತ್ತು ಅಜಾಗರೂಕತೆಯಿಂದ ಕಾರು ಚಲಾಯಿಸುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸದರಿ ಸ್ಥಳದಲ್ಲಿ ತಡೆಗೋಡೆ ನಿರ್ಮಿಸದೆ ಇರುವುದೂ ಸಹ ಅಪಘಾತಕ್ಕೆ ಕಾರಣವಾಗಿದೆ' ಎಂದು ಆರ್ಯನ್ ಅವರ ಪೋಷಕರು ಚಿಕ್ಕಬಳ್ಳಾಪುರ ಸಂಚಾರ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿಶೇಷ ಸ್ಥಾನಮಾನ ರದ್ದು: 'ಸುಪ್ರೀಂ' ತೀರ್ಪು ಇಂದು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ವಿವಾದಾತ್ಮಕ ನಿರ್ಧಾರದ ಸಾಂವಿಧಾನಿಕ ಸಿಂಧುತ್ವ ಕುರಿತು ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ಪ್ರಕಟಿಸಲಿದೆ. ಹೀಗಾಗಿ, ಕಾಶ್ಮೀರ ಕಣಿವೆಯಲ್ಲಿ ಶಾಂತಿ ಕಾಪಾಡಲು ಪೊಲೀಸ್ ಇಲಾಖೆ ವ್ಯಾಪಕ ಭದ್ರತಾ ವ್ಯವಸ್ಥೆ ಕೈಗೊಂಡಿದೆ.

ಇದೇ ವೇಳೆ, ಜಮ್ಮು ಮತ್ತು ಕಾಶ್ಮೀರದ ಗುಪ್ಕಾರ್ ಪಕ್ಷಗಳು (ಪಿಎಜಿಡಿ) ಸುಪ್ರೀಂ ಕೋರ್ಟ್‌ನಿಂದ ವಿಶೇಷ ಸ್ಥಾನಮಾನ ಪುನರ್‌ಸ್ಥಾಪಿಸುವ ಕುರಿತು ತೀರ್ಪು ಬರುವ ಭರವಸೆಯನ್ನು ವ್ಯಕ್ತಪಡಿಸಿವೆ. ಬಿಜೆಪಿಯು, 'ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಯಾವುದೇ ರಾಜಕೀಯ ಮಾಡಬಾರದು. ಪ್ರತಿಯೊಬ್ಬರೂ ತೀರ್ಪನ್ನು ಗೌರವಿಸಬೇಕು' ಎಂದು ಮನವಿ ಮಾಡಿದೆ.

> **ಬಿಜೆಪಿಯ ಕಾರ್ಯಸೂಚಿಯನ್ನು ತಳ್ಳಿಹಾಕುವುದಷ್ಟೇ ಅಲ್ಲ, ದೇಶದ ಸಂವಿಧಾನವನ್ನು ಕಾಪಾಡುವುದು, ದೇಶದ ಸಮಗ್ರತೆ ಮತ್ತು ಅಖಂಡತೆ ಎತ್ತಿಹಿಡಿಯುವುದು ಸುಪ್ರೀಂ ಕೋರ್ಟ್ ಜವಾಬ್ದಾರಿಯಾಗಿದೆ**
> **ಮೆಹಬೂಬಾ ಮುಫ್ತಿ,** ಪಿಡಿಪಿ ಅಧ್ಯಕ್ಷೆ

> **ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಇದು ರಾಜಕೀಯ ವಿಷಯವಾಗಿ ಉಳಿಯುವುದಿಲ್ಲವೆಂಬ ವಿಶ್ವಾಸವಿದೆ. ನಮ್ಮ ನ್ಯಾಯಾಂಗವೇ ಶ್ರೇಷ್ಠ, ತೀರ್ಪಿನ ಬಗ್ಗೆ ಯಾವುದೇ ರಾಜಕೀಯ ಮಾಡಬಾರದು**
> **ರವೀಂದರ್ ರೈನಾ,** ಬಿಜೆಪಿಯ ಜೆ-ಕೆ ಘಟಕದ ಮುಖ್ಯಸ್ಥ

'ಕಣಿವೆಯಲ್ಲಿ ಸದಾ ಶಾಂತಿ ಕಾಪಾಡಲು ನಾವು ಕರ್ತವ್ಯ ಬದ್ಧರಾಗಿದ್ದೇವೆ. ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಕಾಶ್ಮೀರದಲ್ಲಿ ಶಾಂತಿ ಕದಡದಂತೆ ನೋಡಿಕೊಳ್ಳುತ್ತೇವೆ' ಎಂದು ಕಾಶ್ಮೀರ ವಲಯದ ಪೊಲೀಸ್ ಮಹಾನಿರೀಕ್ಷಕ (ಐಜಿಪಿ) ವಿ.ಕೆ. ಬಿರ್ದಿ 'ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದರು.

ಸಿಜೆಐ ಡಿ.ವೈ. ಚಂದ್ರಚೂಡ್ ನೇತೃತ್ವದ, ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್. ಗವಾಯಿ ಮತ್ತು ಸೂರ್ಯಕಾಂತ್ ಅವರನ್ನೊಳಗೊಂಡ ಸಂವಿಧಾನ ಪೀಠವು ತೀರ್ಪು ಪ್ರಕಟಿಸಲಿದೆ. ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ 370ನೇ ವಿಧಿ ಅಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ 2019ರ ಆಗಸ್ಟ್ 5ರಂದು ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಪೀಠವು, ಸೆ. 5ರಂದು ತೀರ್ಪು ಕಾಯ್ದಿರಿಸಿತ್ತು.

ರಸ್ತೆ ಅಪಘಾತ 8 ಮಂದಿ ಸಾವು

ಬರೇಲಿ (ಪಿಟಿಐ): ಉತ್ತರ ಪ್ರದೇಶದ ಬರೇಲಿ–ನೈನಿತಾಲ್ ರಸ್ತೆಯಲ್ಲಿ ಶನಿವಾರ ತಡರಾತ್ರಿ ಟ್ರಕ್‌ಗೆ ಡಿಕ್ಕಿ ಹೊಡೆದ ಕಾರಿಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಕಾರಿನಲ್ಲಿದ್ದ ಮಗು ಸೇರಿದಂತೆ 8 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ.

ಭೋಜಿಪುರ ಬಳಿಯ ಗ್ರಾಮವೊಂದರ ಬಳಿ ಕಾರಿನ ಟೈರ್ ಪಂಕ್ಚರ್ ಆಗಿದ್ದರಿಂದಾಗಿ ಚಾಲಕನ ನಿಯಂತ್ರಣ ತಪ್ಪಿದ್ದು, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಯಿತು. ಪಕ್ಕದ ರಸ್ತೆಗೆ ಚಿಮ್ಮಿದ ಕಾರು ಎದುರುಗಡೆಯಿಂದ ಬರುತ್ತಿದ್ದ ಟ್ರಕ್‌ಗೂ ಡಿಕ್ಕಿಯಾಗಿದೆ. ಆಗ ಕಾರಿಗೆ ಬೆಂಕಿ ಹೊತ್ತಿಕೊಂಡಿತು ಎಂದು ಪೊಲೀಸರು ತಿಳಿಸಿದ್ದಾರೆ.

ಎನ್‌ಐಎ ದಾಳಿ: ಅಲಿ ಅಬ್ಬಾಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಸ್ (ಇಸ್ಲಾಮಿಕ್ ಸ್ಟೇಟ್) ಸಂಘಟನೆ ಜೊತೆ ನಂಟು ಹೊಂದಿ ಯುವಕರನ್ನು ಪ್ರಚೋದಿಸುತ್ತಿದ್ದ ಆರೋಪದಡಿ ಶನಿವಾರ ವಶಕ್ಕೆ ಪಡೆಯಲಾಗಿದ್ದ ಅಲಿ ಹಫೀಜ್ ಅಲಿಯಾಸ್ ಅಲಿ ಅಬ್ಬಾಸ್‌ನನ್ನು ಎನ್‌ಐಎ ಅಧಿಕಾರಿಗಳು ಭಾನುವಾರ ಬಿಟ್ಟು ಕಳುಹಿಸಿದ್ದಾರೆ.

ಪುಲಿಕೇಶಿನಗರದ ಮೋರ್ ರಸ್ತೆಯಲ್ಲಿರುವ ಅಲಿ ಅಬ್ಬಾಸ್ ಪೇಟಿವಾಲ್ ಮನೆ ಮೇಲೆ ದಾಳಿ ಮಾಡಿದ್ದ ಎನ್‌ಐಎ ಅಧಿಕಾರಿಗಳು, ಲ್ಯಾಪ್‌ಟಾಪ್, ಮೊಬೈಲ್ ಹಾಗೂ ₹ 16.42 ಲಕ್ಷ ನಗದು ಜಪ್ತಿ ಮಾಡಿದ್ದರು. ಮುಂಬೈ ಐಐಟಿ ಪದವೀಧರನಾದ ಅಲಿ ಅಬ್ಬಾಸ್ ಹಾಗೂ ವೈದ್ಯೆಯಾಗಿರುವ ಪತ್ನಿಯನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದರು.

ನಗರದಲ್ಲಿರುವ ಎನ್‌ಐಎ ಕಚೇರಿಯಲ್ಲಿ ಶನಿವಾರ ರಾತ್ರಿವರೆಗೂ ಅಲಿ ಅಬ್ಬಾಸ್‌ನನ್ನು ವಿಚಾರಣೆ ನಡೆಸಿದ್ದ ಅಧಿಕಾರಿಗಳು, ಹಲವು ಪ್ರಶ್ನೆಗಳನ್ನು ಕೇಳಿದ್ದರು. ಆದರೆ, ಸೂಕ್ತ ಪುರಾವೆಗಳು ಸಿಗದಿದ್ದರಿಂದ ಅಬ್ಬಾಸ್‌ನನ್ನು ಬಿಡುಗಡೆ ಮಾಡಿರುವುದಾಗಿ ಮೂಲಗಳು ಹೇಳಿವೆ.

ಭಾನುವಾರವೂ ಶೋಧ: ಪುಲಿಕೇಶಿ ನಗರದಲ್ಲಿರುವ ಮನೆಗೆ ಅಲಿ ಅಬ್ಬಾಸ್ ಹಾಗೂ ಪತ್ನಿ ವಾಪಸು ಬಂದಿದ್ದಾರೆ. ಅವರಿಬ್ಬರು ಎನ್‌ಐಎ ಅಧಿಕಾರಿಗಳ ನಿಗಾದಲ್ಲಿದ್ದಾರೆ. ಮನೆಗೆ ಭಾನುವಾರವೂ ಭೇಟಿ ನೀಡಿದ್ದ ಎನ್‌ಐಎ ಅಧಿಕಾರಿಗಳು, ಶೋಧ ಮುಂದುವರಿಸಿದರು. ಪುರಾವೆಗಳಿಗಾಗಿ ಹುಡುಕಾಟ ನಡೆಸಿದರು.

'ಐಎಸ್ ಜೊತೆ ನಂಟು ಹೊಂದಿ, ಯುವಕರನ್ನು ನೇಮಕ ಮಾಡುತ್ತಿದ್ದ ಆರೋಪದಡಿ ಮಹಾರಾಷ್ಟ್ರದಲ್ಲಿ 15 ಮಂದಿಯನ್ನು ಈಗಾಗಲೇ ಬಂಧಿಸಲಾಗಿದೆ. ಬಂಧಿತ ಆರೋಪಿಗಳ ಜೊತೆ ಅಲಿ ಅಬ್ಬಾಸ್ ಒಡನಾಟ ಹೊಂದಿದ್ದ ಮಾಹಿತಿ ಇದೆ. ಹೀಗಾಗಿ, ಅಬ್ಬಾಸ್ ಮನೆ ಮೇಲೆ ದಾಳಿ ಮಾಡಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಅಬ್ಬಾಸ್ ಬಳಿಯ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ಪರೀಕ್ಷೆಗೆಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅಬ್ಬಾಸ್ ಮೇಲಿನ ಆರೋಪಕ್ಕೆ ಸದ್ಯಕ್ಕೆ ಸೂಕ್ತ ಪುರಾವೆ ಸಿಕ್ಕಿಲ್ಲ. ಹಣದ ಬಗ್ಗೆ ದಾಖಲೆ ನೀಡುವುದಾಗಿ ಅಬ್ಬಾಸ್ ಹೇಳುತ್ತಿದ್ದಾನೆ. ಪ್ರಯೋಗಾಲಯದ ವರದಿ ಬಂದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ತಿಳಿಸಿವೆ.

ಆರೋಪಿ ಅಧಿಕಾರಿ ವಿರುದ್ಧ ಕ್ರಮಕ್ಕೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹಿಂದೇಟು

ಕಚೇರಿಗೆ ಹಾಜರಾಗದೇ ವೇತನ ಪಡೆದ ಅಧಿಕಾರಿ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕಚೇರಿಗೆ ಹಾಜರಾಗದಿದ್ದರೂ ಅಕ್ರಮವಾಗಿ 55 ದಿನಗಳ ವೇತನ ಪಡೆದಿರುವ ಆರೋಪದಡಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಉಪ ನಿಯಂತ್ರಕ ಸಿ. ಗೋವಿಂದಪ್ಪ ವಿರುದ್ಧ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುವ ತನಿಖಾ ವರದಿ ಹತ್ತು ತಿಂಗಳಿಂದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಾರ್ಯದರ್ಶಿ ಕಚೇರಿಯಲ್ಲೇ ಉಳಿದಿದೆ.

ಕಾನೂನು ಮಾಪನಶಾಸ್ತ್ರ ಇಲಾಖೆಯ ನಿಯಂತ್ರಕರ ಕಚೇರಿಯಲ್ಲಿ ಆಡಳಿತ ವಿಭಾಗದ ಉಪ ನಿಯಂತ್ರಕರ ಹುದ್ದೆಯಲ್ಲಿದ್ದ ಗೋವಿಂದಪ್ಪ 2021ರ ಏಪ್ರಿಲ್ 21ರಿಂದ ಜೂನ್ 14ರವರೆಗೂ ಕಚೇರಿಗೆ ಹಾಜರಾಗಿರಲಿಲ್ಲ. ನಂತರದ ದಿನಗಳಲ್ಲಿ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿ ವೇತನ ಪಡೆದಿರುವುದು ಪ್ರಾಥಮಿಕ ವಿಚಾರಣೆಯಲ್ಲಿ ದೃಢಪಟ್ಟಿದೆ. ಇಲಾಖೆಯ ನಿಯಂತ್ರಕರು ಮುಂದಿನ ಕ್ರಮಕ್ಕಾಗಿ 2023ರ ಜನವರಿ 1 ರಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಾರ್ಯದರ್ಶಿಗೆ ಕಡತ ಸಲ್ಲಿಸಿದ್ದು, ಈವರೆಗೆ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ.

ಸಿ.ಎಸ್, ಲೋಕಾಯುಕ್ತರಿಗೆ ದೂರು

'ಗೋವಿಂದಪ್ಪ ಅವರು ಕಚೇರಿಗೆ ಹಾಜರಾಗದೇ 55 ದಿನಗಳ ಅವಧಿಯ ವೇತನವನ್ನು ಅಕ್ರಮವಾಗಿ ಪಡೆದುಕೊಂಡು, ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದರೂ ಅವರ ವಿರುದ್ಧ ಕ್ರಮ ಜರುಗಿಸದೇ ರಕ್ಷಿಸಲಾಗುತ್ತಿದೆ' ಎಂದು ಆರೋಪಿಸಿ ಟಿ. ಚೇತನ್ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಕಡತ ಸೋರಿಕೆಯಲ್ಲೂ ಭಾಗಿ

ಕಾನೂನು ಮಾಪನಶಾಸ್ತ್ರ ಇಲಾಖೆಯ ಕೆಲವು ಅಧಿಕಾರಿಗಳಿಗೆ ಸಂಬಂಧಿಸಿದ ಗೋಪ್ಯ ಕಡತಗಳನ್ನು ಖಾಸಗಿ ವ್ಯಕ್ತಿಯೊಬ್ಬರಿಗೆ ಸೋರಿಕೆ ಮಾಡಿದ್ದ ಆರೋಪದಡಿ ಉಪ ನಿಯಂತ್ರಕ ಸಿ. ಗೋವಿಂದಪ್ಪ ವಿರುದ್ಧ ಇಲಾಖಾ ವಿಚಾರಣೆಯೂ ನಡೆಯುತ್ತಿದೆ. ಈ ಪ್ರಕರಣದಲ್ಲಿ ಅಮಾನತು ಕೂಡ ಮಾಡಲಾಗಿತ್ತು. ಇತ್ತೀಚೆಗಷ್ಟೇ ಅಮಾನತು ಆದೇಶ ಹಿಂಪಡೆದು, ಮೈಸೂರು ಉಪ ನಿಯಂತ್ರಕರ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಈಗ ಪುನಃ ನಿಯಂತ್ರಕರ ಕಚೇರಿಯ ಆಡಳಿತ ವಿಭಾಗದ ಉಪ ನಿಯಂತ್ರಕರ ಹುದ್ದೆಗೇ ನಿಯೋಜಿಸಲಾಗಿದೆ.

ಪ್ರಜಾವಾಣಿ ವಿಶೇಷ

55 ದಿನ ಗೈರು ಹಾಜರಾಗಿದ್ದ ಅಧಿಕಾರಿ, 2021ರ ಏಪ್ರಿಲ್ 21ರಿಂದ 24ರವರೆಗಿನ ಅವಧಿಗೆ ಮೂರು ದಿನಗಳ ಆಕಸ್ಮಿಕ ರಜೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು. ಇಲಾಖೆಯ ಆಗಿನ ನಿಯಂತ್ರಕರು ಪರಿಶೀಲಿಸಿದಾಗ ಗೋವಿಂದಪ್ಪ 55 ದಿನಗಳು ಕೆಲಸಕ್ಕೆ ಹಾಜರಾಗಿಲ್ಲ ಎಂಬುದು ಗಮನಕ್ಕೆ ಬಂದಿತ್ತು. ಗೈರಾದ ಪೂರ್ಣ ಅವಧಿಗೂ ಪರಿವರ್ತಿತ ರಜೆ ಮಂಜೂರು ಮಾಡುವಂತೆ ನಿಯಂತ್ರಕರು ಕಡತದಲ್ಲಿ ಸೂಚಿಸಿದ್ದರು.

> **ಪ್ರಕರಣ ಈವರೆಗೂ ನನ್ನ ಗಮನಕ್ಕೆ ಬಂದಿಲ್ಲ. ತಕ್ಷಣವೇ ಕಡತವನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು**
> **ಜಿ.ಸಿ. ಪ್ರಕಾಶ್,** ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

ಸ್ವತಃ ಆಡಳಿತ ವಿಭಾಗದ ಉಪ ನಿಯಂತ್ರಕರ ಹುದ್ದೆಯಲ್ಲಿದ್ದ ಗೋವಿಂದಪ್ಪ ಅವರು ನಿಯಂತ್ರಕರ ಸೂಚನೆಯನ್ನು ಒಪ್ಪಿಕೊಂಡು 55 ದಿನ ರಜೆ ಮಂಜೂರಾತಿಗೆ ಕಡತವನ್ನು ವರ್ಗಾಯಿಸಿದ್ದರು. ಮಧ್ಯದಲ್ಲೇ ನಿಯಂತ್ರಕರ ಹುದ್ದೆಯಲ್ಲಿದ್ದ ಕೆಎಎಸ್ ಅಧಿಕಾರಿ ವಿ. ಪಾತರಾಜು ಅವರ ವರ್ಗಾವಣೆ ಆಗಿತ್ತು. ಆ ಹುದ್ದೆಗೆ ಕೆಎಎಸ್ ಅಧಿಕಾರಿ ರೂಪಾ ಅವರನ್ನು ನೇಮಿಸಲಾಗಿತ್ತು. ನಿಯಂತ್ರಕರ ಹುದ್ದೆಗೆ ಹೊಸ ಅಧಿಕಾರಿ ಬರುತ್ತಿದ್ದಂತೆಯೇ ರಜೆ ಮಂಜೂರಾತಿಯ ಕಡತವನ್ನು ಅರ್ಧಕ್ಕೆ ಮೊಟಕುಗೊಳಿಸಿ, ಹಾಜರಾತಿ ಕಡತದಲ್ಲಿ 55 ದಿನಗಳಿಗೂ ಸಹಿ ಮಾಡಿ ವೇತನ ಪಡೆದಿದ್ದಾರೆ ಎಂಬ ಆರೋಪವಿದೆ.

ಗೈರಿಗೆ ಸಾಕ್ಷ್ಯ: ಗೋವಿಂದಪ್ಪ ಕರ್ತವ್ಯಕ್ಕೆ ಹಾಜರಾಗದೆಯೂ ಅಕ್ರಮವಾಗಿ ವೇತನ ಪಡೆದಿರುವ ಕುರಿತು ಇಲಾಖೆಯ ನಿಯಂತ್ರಕರಿಗೆ ಟಿ. ಚೇತನ್ ಎಂಬುವವರು ದೂರು ಸಲ್ಲಿಸಿದ್ದರು. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕಿ–2 ಹುದ್ದೆಯಲ್ಲಿದ್ದ ಸುಜಾತಾ ಹೊಸಮನಿ ಅವರನ್ನು ದೂರಿನ ಕುರಿತು ತನಿಖೆಗಾಗಿ ನೇಮಿಸಲಾಗಿತ್ತು. ಸಮಗ್ರ ದಾಖಲೆಗಳನ್ನು ಪರಿಶೀಲಿಸಿ, ಉಪ ನಿಯಂತ್ರಕರ ಕಚೇರಿಯ ಅಧಿಕಾರಿಗಳ ಹೇಳಿಕೆಯನ್ನು ದಾಖಲಿಸಿ, ಕಾನೂನು ಮಾಪನಶಾಸ್ತ್ರ ಇಲಾಖೆ ನಿಯಂತ್ರಕರ ಕಚೇರಿಗೆ ವರದಿ ಸಲ್ಲಿಸಿದ್ದರು.

'2021ರ ಏಪ್ರಿಲ್ 21ರಿಂದ ಜೂನ್ 14ರ ಅವಧಿಯಲ್ಲಿ ಗೋವಿಂದಪ್ಪ ಅವರು ನಿಯಂತ್ರಕರ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಯಾವುದೇ ಕಡತಗಳನ್ನು ನಿರ್ವಹಿಸಿಲ್ಲ ಮತ್ತು ಯಾವುದೇ ಸಭೆಗಳಿಗೆ ಹಾಜರಾಗಿರುವುದಿಲ್ಲ' ಎಂಬ ಉಲ್ಲೇಖ ವರದಿಯಲ್ಲಿದೆ. ಗೋವಿಂದಪ್ಪ ಅವರು ಹಾಜರಾತಿಗೆ ಸಹಿ ಮಾಡದೇ ಖಾಲಿ ಉಳಿಸಿದ್ದ ಮತ್ತು ನಂತರದಲ್ಲಿ ಸಹಿ ಮಾಡಿದ ದೃಢೀಕೃತ ನಕಲು ಪ್ರತಿಗಳನ್ನೂ ದೂರುದಾರರು ಸಲ್ಲಿಸಿದ್ದು, ವರದಿಯೊಂದಿಗೆ ಲಗತ್ತಿಸಲಾಗಿದೆ. ತನಿಖಾ ವರದಿಯ ಪ್ರತಿ ಮತ್ತು ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್ • ಡಾಲ್ಫಿನ್ ಅಕ್ವಾಟಿಕ್ಸ್‌ಗೆ ರನ್ನರ್ ಅಪ್ ಸ್ಥಾನ

ಬಿಎಸಿ ಮುಡಿಗೆ ಚಾಂಪಿಯನ್ ಕಿರೀಟ

ಪ್ರಜಾವಾಣಿ ವಾರ್ತೆ

ಗುಂಪು–3ರ ಬಾಲಕರ ವಿಭಾಗದ ವೈಯಕ್ತಿಕ ಚಾಂಪಿಯನ್ ನಿಖಿಲ್ ತೇಜ್ ರೆಡ್ಡಿ (ಎಡಚಿತ್ರ). ಗುಂಪು–2ರ ಬಾಲಕಿಯರ ವಿಭಾಗದ ವೈಯಕ್ತಿಕ ಚಾಂಪಿಯನ್ ತಿಸ್ಯಾ ಸೋನಾರ್ ಕೋಚ್ ಶ್ರೀಶ ರೆಡ್ಡಿ ಜೊತೆ

ಉಡುಪಿ: ಆರಂಭದ ದಿನದಿಂದಲೇ ಎಲ್ಲ ವಿಭಾಗಗಳಲ್ಲೂ ಆಧಿಪತ್ಯ ಸ್ಥಾಪಿಸಿದ್ದ ಬೆಂಗಳೂರಿನ ಬಸವನಗುಡಿ ಈಜುಕೇಂದ್ರ (ಬಿಎಸಿ) ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಬೆಂಗಳೂರಿನ ಡಾಲ್ಫಿನ್ ಅಕ್ವಾಟಿಕ್ಸ್ ತಂಡ ರನ್ನರ್ ಅಪ್ ಸ್ಥಾನ ತನ್ನದಾಗಿಸಿಕೊಂಡಿತು.

ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ಅಜ್ಜರಕಾಡು ಈಜು ಕೊಳದಲ್ಲಿ ಭಾನುವಾರ ಮುಕ್ತಾಯಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಬಿಎಸಿ 1007 ಪಾಯಿಂಟ್ ಕಲೆ ಹಾಕಿತು.

7 ಕೂಟ ದಾಖಲೆಗಳು ನಿರ್ಮಾಣವಾದ ಸ್ಪರ್ಧೆಗಳಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್ 360 ಪಾಯಿಂಟ್ಸ್ ಗಳಿಸಿತು. ಈ ಕ್ಲಬ್‌ನ ಮೂವರು ವೈಯಕ್ತಿಕ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು. ಮೂರನೇ ಸ್ಥಾನ ಗಳಿಸಿದ ಡಿಕೆವಿ ಈಜುಕೇಂದ್ರ 213 ಪಾಯಿಂಟ್ಸ್ ಪಡೆದುಕೊಂಡಿತು. 192 ಪಾಯಿಂಟ್‌ಗಳೊಂದಿಗೆ ನೆಟ್ಟಕಲ್ಲಪ್ಪ ಈಜುಕೇಂದ್ರ ನಾಲ್ಕನೇ ಸ್ಥಾನ ಗಳಿಸಿತು.

ಕೊನೆಯ ದಿನದ ಫಲಿತಾಂಶಗಳು: ಗುಂಪು–1: 25 ಮೀಟರ್ಸ್ ಫ್ರೀಸ್ಟೈಲ್: ಬಾಲಕರು: ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಡಾಲ್ಫಿನ್ ಅಕ್ವಾಟಿಕ್ಸ್)–1, ಚಿಂತನ್ ಎಸ್.ಶೆಟ್ಟಿ (ಮಂಗಳಾ ಈಜು ಕ್ಲಬ್)–2, ಶ್ರೇಯಸ್ ಮಂಜುನಾಥ್ (ಬಿಎಸಿ)–3. ಕಾಲ: 11.80ಸೆ; ಬಾಲಕಿಯರು: ನೈಶಾ ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)–1, ಸಾಕ್ಷಿ ದ್ಯಾಮಣ್ಣವರ (ಡಾಲ್ಫಿನ್ ಅಕ್ವಾಟಿಕ್ಸ್)–2, ಹಿತೈಷಿ ವಿ (ವಿಜಯನಗರ ಈಜುಕೇಂದ್ರ)–3. ಕಾಲ: 13.60ಸೆ. 50 ಮೀ ಬ್ರೆಸ್ಟ್ ಸ್ಟ್ರೋಕ್: ಬಾಲಕರು: ಸೂರ್ಯ ಜೋಯಪ್ಪ (ಬಿಎಸಿ)–1, ವಿಶಾಖನ್ ಸರವಣನ್ (ಬಿಎಸಿ)–2, ಸುಯೋಗ್ ಗೌಡ (ನೆಟ್ಟಕಲ್ಲಪ್ಪ ಈಜುಕೇಂದ್ರ)–3. ಕಾಲ: 31.07ಸೆ; ಬಾಲಕಿಯರು: ಪ್ರತೀಕ್ಷಾ ಶೆಣೈ (ಪುತ್ತೂರು ಈಜು ಕ್ಲಬ್)–1, ಜಗಶ್ರೀ ಪೂಂಜ (ಬಿಎಸಿ)–2, ಆರಾಧನಾ ಗೌಡ (ಡಾಲ್ಫಿನ್ ಅಕ್ವಾಟಿಕ್ಸ್)–3. ಕಾಲ:36.75ಸೆ. 100 ಮೀ ಫ್ರೀಸ್ಟೈಲ್; ಬಾಲಕರು: ಚಿಂತನ್ ಎಸ್.ಶೆಟ್ಟಿ (ಮಂಗಳಾ ಈಜು ಕೇಂದ್ರ)–1, ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಡಾಲ್ಫಿನ್ ಅಕ್ವಾಟಿಕ್ಸ್)–2, ಶ್ರೇಯಸ್ ಮಂಜುನಾಥ್ (ಬಿಎಸಿ)–3. ಕಾಲ: 53.34ಸೆ; ಬಾಲಕಿಯರು: ನೈಶಾ ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)–1, ಜಗಶ್ರೀ ಪೂಂಜ (ಬಿಎಸಿ)–2, ಸಾಕ್ಷಿ ದ್ಯಾಮಣ್ಣವರ (ಡಾಲ್ಫಿನ್ ಅಕ್ವಾಟಿಕ್ಸ್)–3. ಕಾಲ: 1ನಿ 01.92ಸೆ. 4x50 ಮೀ ಮೆಡ್ಲೆ: ಬಾಲಕರು:ಬಿಎಸಿ 'ಎ'–1, ಬಿಎಸಿ 'ಬಿ'–2, ಡಾಲ್ಫಿನ್ ಅಕ್ವಾಟಿಕ್ಸ್–3. ಕಾಲ:1ನಿ 50.05ಸೆ (ಕೂಟ ದಾಖಲೆ: ಹಿಂದಿನ ದಾಖಲೆ: ಬಿಎಸಿ 1ನಿ 50.80ಸೆ; 2022). **ಗುಂಪು–2:** 25 ಮೀ ಫ್ರೀಸ್ಟೈಲ್: ಬಾಲಕರು: ಸಾತ್ವಿಕ್ ನಾಯಕ್ ಸುಜೀರ್ (ಡಾಲ್ಫಿನ್ ಅಕ್ವಾಟಿಕ್ಸ್)–1, ದಕ್ಷ್ ಮಟ್ಟ (ಬಿಎಸಿ)–2, ವಫಿ ಅಬ್ದುಲ್ ಹಕೀಮ್ (ಬಿಎಸಿ)–3. ಕಾಲ:12.43 ಸೆ; ಬಾಲಕಿಯರು: ಚರಿತಾ ಫಣೀಂದ್ರನಾಥ್ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)–1, ತ್ರಿಶಾ ಸಿಂಧು (ಡಿಕೆವಿ ಈಜುಕೇಂದ್ರ)–2, ತಿಸ್ಯಾ ಸೋನಾರ್ (ಪಿಎಂ ಈಜುಕೇಂದ್ರ)–3. ಕಾಲ: 13.61ಸೆ; 50 ಮೀ ಬ್ರೆಸ್ಟ್ ಸ್ಟ್ರೋಕ್: ಬಾಲಕರು: ದಕ್ಷ್ ಮಟ್ಟ–1, ಸಪ್ತಾಶ್ವ ಬ್ಯಾನರ್ಜಿ–2, ಯಶ್ ಪಾಲ್–3 (ಮೂವರೂ ಬಿಎಸಿ). ಕಾಲ:32.37ಸೆ; ಬಾಲಕಿಯರು: ಗಗನಾ ಸಿ.ಎಂ (ಗ್ಲೋಬಲ್ ಈಜುಕೇಂದ್ರ)–1, ಹಿಯಾ ಮನ್‌ಚಂದಾ (ಡಾಲ್ಫಿನ್ ಅಕ್ವಾಟಿಕ್ಸ್)–2, ನಾಗಸಾಕ್ಷಿ ಎಂ (ಬಿಎಸಿ)–3. ಕಾಲ:37.14ಸೆ. 100 ಮೀ ಫ್ರೀಸ್ಟೈಲ್: ಬಾಲಕರು: ಸಾತ್ವಿಕ್ ನಾಯಕ್ ಸುಜೀರ್ (ಡಾಲ್ಫಿನ್ ಅಕ್ವಾಟಿಕ್ಸ್)–1, ಖುಷಿತ್ ರಂಗನ್ (ಬಿಎಸಿ)–2, ಅನೀಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜುಕೇಂದ್ರ)–3. ಕಾಲ:56.76ಸೆ. ಬಾಲಕಿಯರು: ತಿಸ್ಯಾ ಸೋನಾರ್ (ಪಿಎಂ ಈಜುಕೇಂದ್ರ)–1, ಚರಿತಾ ಫಣೀಂದ್ರನಾಥ್ (ಎಲೀಟ್ ಕ್ರೀಡಾ ಅಕಾಡೆಮಿ)–2, ತ್ರಿಶಾ ಸಿಂಧು (ಡಿಕೆವಿ ಈಜುಕೇಂದ್ರ)–3. ಕಾಲ:1ನಿ02.01ಸೆ. 200 ಮೀ ಬ್ಯಾಕ್‌ಸ್ಟ್ರೋಕ್: ಬಾಲಕರು: ಸಮರ್ಥ್ ಗೌಡ (ಬಿಎಸಿ)–1, ಸಾತ್ವಿಕ್ ನಾಯಕ್ ಸುಜೀರ್ (ಡಾಲ್ಫಿನ್ ಅಕ್ವಾಟಿಕ್ಸ್)–2, ಅಭಿಮನ್ಯು ನಂಬಿಯಾರ್ (ಡಾಲ್ಫಿನ್ ಅಕ್ವಾಟಿಕ್ಸ್)–3. ಕಾಲ:2ನಿ16.92ಸೆ; ಬಾಲಕಿಯರು: ತಾನ್ಯಾ ಎಂ.ಎನ್ (ಬಿಎಸಿ)–1, ತನ್ಮಯಿ ಧರ್ಮೇಶ್ (ಗ್ಲೋಬಲ್ ಈಜುಕೇಂದ್ರ)–2, ಅದಿತಿ ವಿನಾಯಕ್ ರೇಳೇಕರ್ (ಬಿಎಸಿ)–3. ಕಾಲ:2ನಿ 29.01ಸೆ. 4x50ಮೀ ಮೆಡ್ಲೆ: ಬಾಲಕರು: ಬಿಎಸಿ 'ಎ'–1, ಡಾಲ್ಫಿನ್ ಅಕ್ವಾಟಿಕ್ಸ್–2, ಬಿಎಸಿ 'ಬಿ'–3. ಕಾಲ: 1ನಿ58.15ಸೆ. **ಗುಂಪು–3:** 50 ಮೀ ಬ್ರೆಸ್ಟ್ ಸ್ಟ್ರೋಕ್: ಬಾಲಕರು: ರಾಮಪ್ರಕಾಶ್ (ಗ್ಲೋಬಲ್ ಈಜುಕೇಂದ್ರ)–1, ಮೊಹಮ್ಮದ್ ಅಮಾನ್ ಸಮೀರ್ (ಬೆಂಗಳೂರು ಈಜು ಸಂಶೋಧನಾ ಕೇಂದ್ರ)–2, ಅವ್ಯಕ್ತ್ ಮೋಹನ್ (ಬಿಎಸಿ)–3. ಕಾಲ: 40.21ಸೆ; ಬಾಲಕಿಯರು: ಮಾನ್ಯಾ ಆರ್.ವಾಧ್ವ (ಪಿಎಂ ಈಜುಕೇಂದ್ರ)–1, ಇಂಚರಾ ಎಚ್.ಆರ್ (ನೆಟ್ಟಕಲ್ಲಪ್ಪ ಈಜುಕೇಂದ್ರ)–2, ಸಿರಿ ಪ್ರೀತಂ (ಏಕಲವ್ಯ ಕ್ರೀಡಾ ಅಕಾಡೆಮಿ)–3. ಕಾಲ: 40.75ಸೆ; 100 ಮೀ ಫ್ರೀಸ್ಟೈಲ್: ಬಾಲಕರು: ನಿಖಿಲ್ ತೇಜ್ ರೆಡ್ಡಿ (ಬಿಎಸಿ)–1, ರೋಣಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)–2, ವ್ಯಾಸ್ ವಿಜಯ್ (ಡಿಕೆವಿ ಈಜುಕೇಂದ್ರ)–3. ಕಾಲ:1ನಿ 05.49ಸೆ; ಬಾಲಕಿಯರು: ಸಮನ್ವಿ ವಿ. (ಡಿಕೆವಿ ಈಜುಕೇಂದ್ರ)–1, ಮಾನ್ಯ ಆರ್. ವಾಧ್ವ (ಪಿಎಂ ಈಜುಕೇಂದ್ರ)–2, ದಿಶಾ ಹೊಂಡಿ (ಅಬಾ ಕ್ಲಬ್, ಬೆಳಗಾವಿ)–3. ಕಾಲ: 1ನಿ 07.43ಸೆ. 4x50ಮೀ ಮೆಡ್ಲೆ: ಬಾಲಕರು: ಬಿಎಸಿ 'ಎ'–1, ಬಿಎಸಿ 'ಬಿ'–2, ನೆಟ್ಟಕಲ್ಲಪ್ಪ ಈಜುಕೇಂದ್ರ–3. ಕಾಲ: 2ನಿ24.03ಸೆ.

ವೈಯಕ್ತಿಕ ಚಾಂಪಿಯನ್ನರು

ಗುಂಪು	ವಿಭಾಗ	ಈಜುಪಟು	ಕ್ಲಬ್	ಪಾಯಿಂಟ್ಸ್
ಒಂದು	ಬಾಲಕಿ	ನೈಶಾ ಶೆಟ್ಟಿ	ಡಾಲ್ಫಿನ್	45
ಒಂದು	ಬಾಲಕ	ಅಲೆಸ್ಟರ್ ರೇಗೊ	ಡಾಲ್ಫಿನ್	40
ಎರಡು	ಬಾಲಕ	ಶರಣ್ ಎಸ್	ಪಿಎಂಎಸ್‌ಸಿ	38
ಎರಡು	ಬಾಲಕ	ಸಾತ್ವಿಕ್ ನಾಯಕ್	ಡಾಲ್ಫಿನ್	38
ಎರಡು	ಬಾಲಕಿ	ತಿಸ್ಯಾ ಸೋನಾರ್	ಪಿಎಂಎಸ್‌ಸಿ	36
ಮೂರು	ಬಾಲಕ	ನಿಖಿಲ್ ತೇಜ್	ಬಿಎಸಿ	36
ಮೂರು	ಬಾಲಕ	ರೋನಿತ್ ಅರುಣ್	ಬಿಎಸ್‌ಎ	36
ಮೂರು	ಬಾಲಕಿ	ಸುಮನ್ವಿ ವಿ	ಡಿಕೆವಿ	35

ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡ ಇಟಲಿಯ ಸರ್ ಸಿಕೋಮಾ ಪೆರುಗಿಯಾ ತಂಡದ ಆಟಗಾರರ ಸಂಭ್ರಮ. –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್

ಇಟಲಿಯ ಪೆರುಗಿಯಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಟಲಿಯ ಸರ್ ಸಿಕೋಮಾ ಪೆರುಗಿಯಾ ತಂಡ ಫೈನಲ್‌ನಲ್ಲಿ 3–0 ನೇರ ಸೆಟ್‌ಗಳಿಂದ ಬ್ರೆಜಿಲ್‌ನ ಇತಾಂಬೆ ಮಿನಾಸ್ ತಂಡವನ್ನು ಸೋಲಿಸಿ ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್ ಷಿಪ್‌ನಲ್ಲಿ ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಈ ಪಂದ್ಯದಲ್ಲಿ ಪೆರುಗಿಯಾ ತಂಡ 25–13, 25–21, 25–19 ರಲ್ಲಿ ಗೆಲುವನ್ನು ಪಡೆಯಿತು. ಈ ಪಂದ್ಯಾವಳಿಯಲ್ಲಿ ಒಂದೂ ಸೆಟ್ ಕಳೆದುಕೊಳ್ಳದೇ ಪೆರುಗಿಯಾ ತಂಡ ಚಾಂಪಿಯನ್ ಆಗಿರುವುದು ವಿಶೇಷ.

ಈ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಉಳಿಸಿಕೊಂಡ ಮೂರನೇ ತಂಡ ಎಂಬ ಹೆಗ್ಗಳಿಕೆಯೂ ಇಟಲಿಯ ಕ್ಲಬ್‌ನದ್ದಾಯಿತು. ಇಟಲಿಯ ಇನ್ನೊಂದು ತಂಡ ಟ್ರೆಂಟಿನೊ (2009, 2012) ಮತ್ತು ಬ್ರೆಜಿಲ್‌ನ ಸಡಾ ಕ್ರೂಝೈರೊ ವೋಲಿ (2015, 2016) ಈ ಮೊದಲು ಈ ಸಾಧನೆಗೆ ಪಾತ್ರವಾಗಿದ್ದವು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಜಪಾನ್‌ನ ಸುಂಟೋರಿ ಸನ್‌ಬರ್ಡ್ಸ್ ತಂಡ ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿ 17–25, 23–25, 25–21, 25–19, 15–12 ರಿಂದ ಟರ್ಕಿಯ ಹಾಲ್ಕ್‌ಬ್ಯಾಂಕ್ ಸ್ಪೋರ್ ಕುಲುಬು ತಂಡವನ್ನು ಸೋಲಿಸಿತ್ತು.

ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಜಯ

ಮಹಿಳಾ ಟಿ20 ಕ್ರಿಕೆಟ್: ಶ್ರೇಯಾಂಕಾ ಉತ್ತಮ ಬೌಲಿಂಗ್

ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತದ ಶ್ರೇಯಾಂಕಾ ಪಾಟೀಲ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಬೌಲರ್‌ಗಳ ಉತ್ತಮ ಪ್ರದರ್ಶನದ ನಂತರ, ಅನುಭವಿ ಆಟಗಾರ್ತಿ ಸ್ಮೃತಿ ಮಂದಾನಾ (48, 48ಎ) ಉಪಯುಕ್ತ ಆಟವಾಡಿ, ಭಾರತ ತಂಡ ಭಾನುವಾರ ನಡೆದ ಮೂರನೇ ಹಾಗೂ ಅಂತಿಮ ಮಹಿಳಾ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಲು ನೆರವಾದರು. ಆ ಮೂಲಕ ಸರಣಿಯಲ್ಲಿ ಒಂದು ಪಂದ್ಯ ಗೆದ್ದ ಸಮಾಧಾನ ಆತಿಥೇಯರದ್ದಾಯಿತು.

ಇಂಗ್ಲೆಂಡ್ ವನಿತೆಯರು 2–1 ರಿಂದ ಸರಣಿ ಗೆದ್ದುಕೊಂಡರು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡವನ್ನು ಭಾರತದ ಬೌಲರ್‌ಗಳು 126 ರನ್‌ಗಳಿಗೆ ನಿಯಂತ್ರಿಸಿದರು. ಮಧ್ಯಮ ವೇಗಿ ರೇಣುಕಾ ಸಿಂಗ್ ಆರಂಭದಲ್ಲಿ ಎರಡು ವಿಕೆಟ್ ಪಡೆದರೆ, ಸ್ಪಿನ್ನರ್‌ಗಳಾದ ಶೈಕಾ ಇಶಾಖ್ (22ಕ್ಕೆ3) ಮತ್ತು ಕನ್ನಡತಿ ಶ್ರೇಯಾಂಕಾ ಪಾಟೀಲ (19ಕ್ಕೆ3) ಅವರು ನಂತರದ ಹಂತದಲ್ಲಿ ಪ್ರವಾಸಿ ತಂಡದ ಕುಸಿತಕ್ಕೆ ಕಾರಣರಾದರು. ಶ್ರೇಯಾಂಕಾ ಪಾಟೀಲ 'ಪಂದ್ಯದ ಆಟಗಾರ್ತಿ' ಗೌರವಕ್ಕೆ ಪಾತ್ರರಾದರು.

ಇಂಗ್ಲೆಂಡ್ ತಂಡದ ಕಡೆ ನಾಯಕಿ ಹೀದರ್ ನೈಟ್ ಮಾತ್ರ ದಿಟ್ಟ ಆಟವಾಡಿ 52 ರನ್ (42 ಎಸೆತ) ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರುಗಳಲ್ಲಿ 126 (ಹೀದರ್ ನೈಟ್ 52, ಆ್ಯಮಿ ಜೋನ್ಸ್ 25; ರೇಣುಕಾ ಸಿಂಗ್ 25ಕ್ಕೆ2, ಅಮನ್‌ಜೋತ್ ಕೌರ್ 25ಕ್ಕೆ2, ಸೈಕಾ ಇಶಾಖ್ 22ಕ್ಕೆ3, ಶ್ರೇಯಾಂಕಾ ಪಾಟೀಲ 19ಕ್ಕೆ3); **ಭಾರತ:** 19 ಓವರುಗಳಲ್ಲಿ 5 ವಿಕೆಟ್‌ಗೆ 127 (ಸ್ಮೃತಿ ಮಂದಾನಾ 48, ಜೆಮಿಮಾ ರಾಡ್ರಿಗಸ್ 29; ಫ್ರೇಯಾ ಕೆಂಪ್ 24ಕ್ಕೆ2, ಸೋಫಿ ಎಕ್ಲೆಸ್ಟೋನ್ 40ಕ್ಕೆ2).

ಫಲಿತಾಂಶ: ಭಾರತಕ್ಕೆ ಐದು ವಿಕೆಟ್ ಜಯ.

ಬೆಂಗಳೂರಿನ ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ ಜೂನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದ ಮಲ್ಲೇಶ್ವರಂ ಈಜು ಕ್ಲಬ್ ತಂಡ.

ಜೂನಿಯರ್ ವಾಟರ್‌ಪೋಲೊ: ಮಲ್ಲೇಶ್ವರಂ ಈಜು ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರಂ ಈಜು ಕ್ಲಬ್ ತಂಡ, ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ ಜೂನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು. ಬಾಲಕಿಯರ ವಿಭಾಗದಲ್ಲಿ ಬಸವನಗುಡಿ ಈಜು ಕೇಂದ್ರ ಚಾಂಪಿಯನ್ ಪಟ್ಟ ಪಡೆಯಿತು.

ಕರ್ನಾಟಕ ಈಜು ಸಂಸ್ಥೆ ಆಶ್ರಯದಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಬಸವನಗುಡಿ ಈಜು ಕೇಂದ್ರ ಎರಡನೇ ಸ್ಥಾನ ಮತ್ತು ನೆಟ್ಟಕಲ್ಲಪ್ಪ ಈಜು ಕೇಂದ್ರ ಮೂರನೇ ಸ್ಥಾನ ಪಡೆದವು.

ಬಾಲಕಿಯರ ವಿಭಾಗದಲ್ಲಿ ನೆಟ್ಟಕಲ್ಲಪ್ಪ ಈಜು ಕೇಂದ್ರ ಎರಡನೇ ಸ್ಥಾನ ಮತ್ತು ಮಲ್ಲೇಶ್ವರಂ ಸ್ವಿಮ್ಮಿಂಗ್ ಕ್ಲಬ್ ಮೂರನೇ ಸ್ಥಾನ ಪಡೆಯಿತು.

ಬಾಲಕರ ವಿಭಾಗದಲ್ಲಿ ಮಲ್ಲೇಶ್ವರಂ ಈಜು ಕೇಂದ್ರದ ನಿಹಾರ್ ರಾಜೇಶ್ 'ಶ್ರೇಷ್ಠ ಆಟಗಾರ' ಪ್ರಶಸ್ತಿಗೆ ಪಾತ್ರರಾದರೆ, ಬಾಲಕಿಯರ ವಿಭಾಗದಲ್ಲಿ ಬಸವನಗುಡಿ ಈಜು ಕೇಂದ್ರದ ಪ್ರಚೇತಾ ಆರ್.ರಾವ್ 'ಶ್ರೇಷ್ಠ ಆಟಗಾರ್ತಿ' ಗೌರವ ಪಡೆದರು.

ಮಳೆ ಪಾಲಾದ ಮೊದಲ ಟಿ20 ಪಂದ್ಯ

ಭಾರತ– ದಕ್ಷಿಣ ಆಫ್ರಿಕಾ: ಒಂದೂ ಎಸೆತ ಸಾಧ್ಯವಾಗದೇ ರದ್ದು

ಡರ್ಬನ್ (ಪಿಟಿಐ): ನಿರಂತರ ಮಳೆಯಿಂದಾಗಿ ದಕ್ಷಿಣ ಆಫ್ರಿಕಾ ಮತ್ತು ಭಾರತ ನಡುವಣ ಭಾನುವಾರ ಮೊದಲ ಟಿ20 ಪಂದ್ಯ ಕಿಂಗ್ಸ್‌ಮೀಡ್‌ನಲ್ಲಿ ಒಂದೂ ಎಸೆತ ಸಾಧ್ಯವಾಗದೇ ರದ್ದುಗೊಂಡಿತು. ಟಾಸ್ ಕೂಡ ಸಾಧ್ಯವಾಗಲಿಲ್ಲ. ಟಿ20 ವಿಶ್ವಕಪ್‌ಗೆ ಮೊದಲು ತಂಡದಲ್ಲಿ ಸೂಕ್ತ ಸಂಯೋಜನೆ ಕಂಡುಕೊಳ್ಳುವ ಪ್ರಯತ್ನಕ್ಕೆ ಇದರಿಂದ ಹಿನ್ನಡೆಯಾಯಿತು.

ಭಾರತ ತಂಡಕ್ಕೆ ಇನ್ನು ವಿಶ್ವಕಪ್‌ಗೆ ಮೊದಲು ಐದು ಟಿ20 ಪಂದ್ಯಗಳಷ್ಟೇ ಉಳಿದಿವೆ. ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಪಂದ್ಯಗಳು ಮತ್ತು ಜನವರಿಯಲ್ಲಿ ತವರಿನಲ್ಲಿ ಅಫ್ಗಾನಿಸ್ತಾನ ವಿರುದ್ಧ ಮೂರು ಪಂದ್ಯಗಳ ಸರಣಿ ಆಡಲು ಬಾಕಿಯಿದೆ. ಟಿ20 ವಿಶ್ವಕಪ್ ಜೂನ್‌ನಲ್ಲಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಿಗದಿಯಾಗಿದೆ. ಟಿ20 ಮೊದಲು ಐಪಿಎಲ್ ಆಡಲು ಇದೆ. ಭಾರತತಂಡದ ಚಿಂತಕರ ಚಾವಡಿ ಇದೀಗ 15 ಮಂದಿಯ ತಂಡವನ್ನು ಆರಿಸಲು ಲೀಗ್ ಕಡೆಯೂ ಗಮನಹರಿಸಬೇಕಾಗಿದೆ.

'ಇನ್ನು ಟಿ20 ವಿಶ್ವಕಪ್‌ಗೆ ಮೊದಲು ಕೆಲವಷ್ಟೇ ಪಂದ್ಯಗಳು ಆಡಲು ಉಳಿದಿವೆ. ಆದರೆ ಐಪಿಎಲ್‌ನಲ್ಲಿ 14 ಲೀಗ್ ಪಂದ್ಯಗಳೂ ಇರುತ್ತವೆ' ಎಂದು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಶನಿವಾರ ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.

ಮೊದಲ ಬಾರಿ ತಂಡದೊಡನೆ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿದ್ದ ರಿಂಕು ಸಿಂಗ್, ಜೀತೇಶ್ ಶರ್ಮಾ, ಅರ್ಷದೀಪ್ ಸಿಂಗ್ ಅವರು ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಕಾತರದಿಂದ ಇದ್ದರು. ಅವರು ಮಂಗಳವಾರ ಗೆಬೆಹರಾದ (ಪೋರ್ಟ್ ಎಲಿಜಬೆತ್) ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ನಡೆಯುವ ಎರಡನೇ ಪಂದ್ಯದವರೆಗೆ ಕಾಯಬೇಕಾಗಿದೆ.

ತವರಿನಲ್ಲೇ ಉಳಿದ ಚಾಹರ್

ನವದೆಹಲಿ (ಪಿಟಿಐ): ಭಾರತ ತಂಡದ ಮಧ್ಯಮ ವೇಗಿ ದೀಪಕ್ ಚಾಹರ್ ಅವರು ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಭಾನುವಾರ ಮೊದಲ ಟಿ20 ಪಂದ್ಯದ ವೇಳೆಯೂ ತಂಡವನ್ನು ಸೇರಿಕೊಂಡಿರಲಿಲ್ಲ. ವೈಯಕ್ತಿಕ ಕಾರಣಗಳಿಂದ ಅವರು ಇನ್ನೂ ತವರಿನಲ್ಲೇ ಉಳಿದಿದ್ದಾರೆ.

ಚಾಹರ್ ಅವರ ಕುಟುಂಬ ಸದಸ್ಯರೊಬ್ಬರು ಅಸ್ವಸ್ಥರಾಗಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಹೀಗಾಗಿ ಅವರು ಮನೆಯಲ್ಲೇ ಉಳಿದಿದ್ದಾರೆ ಎಂದು ಹೇಳಲಾಗಿದೆ. ಚಾಹರ್ ಅವರು ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯ ಐದನೇ ಪಂದ್ಯದಲ್ಲೂ (ಬೆಂಗಳೂರು) ಆಡಿರಲಿಲ್ಲ. ಹೀಗಾಗಿ ಅವರು ದಕ್ಷಿಣ ಆಫ್ರಿಕಾದ ಸರಣಿಯಲ್ಲಿ ಆಡುವುದು ಅನುಮಾನ ಎನ್ನಲಾಗುತ್ತಿದೆ.

'ಕುಟುಂಬದ ವರ್ಗದ ಒಬ್ಬರನ್ನು ತುರ್ತಾಗಿ ಆಸ್ಪತ್ರೆಗೆ ದಾಖಲಿಸಬೇಕಾದ ಕಾರಣ ದೀಪಕ್ ಅವರು ದರ್ಬಾನ್‌ನಲ್ಲಿರುವ ತಂಡವನ್ನು ಸೇರಿಕೊಂಡಿಲ್ಲ. ಅವರು ಬಿಸಿಸಿಐನಿಂದ ಒಪ್ಪಿಗೆ ಪಡೆದಿದ್ದಾರೆ. ಕುಟುಂಬ ಸದಸ್ಯರ ಆರೋಗ್ಯದ ಸ್ಥಿತಿಯ ಮೇಲೆ ಅವರು ತಂಡವನ್ನು ಸೇರಿಕೊಳ್ಳುತ್ತಾರೊ ಇಲ್ಲವೊ ಎಂಬುದು ನಿರ್ಧಾರವಾಗಲಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ವೆಸ್ಟ್ ಇಂಡೀಸ್‌ಗೆ ಸರಣಿ ಜಯ

ಬ್ರಿಜ್‌ಟೌನ್ (ಎಪಿ): ವೆಸ್ಟ್ ಇಂಡೀಸ್ ತಂಡವು ಶನಿವಾರ ನಡೆದ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 4 ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಸರಣಿಯನ್ನೂ ಆತಿಥೇಯರು 2–1 ರಿಂದ ಗೆದ್ದುಕೊಂಡರು.

ಮಳೆಯಿಂದ 40 ಓವರುಗಳಿಗೆ ಮೊಟಕುಗೊಂಡ ಪಂದ್ಯದಲ್ಲಿ ಇಂಗ್ಲೆಂಡ್ 9 ವಿಕೆಟ್‌ಗೆ 206 ರನ್ ಗಳಿಸಿತು. ಮಳೆ ಮತ್ತೆ ಶುರುವಾದ ಪರಿಣಾಮ ಡಕ್‌ವರ್ತ್ ಲೂಯಿಸ್ ನಿಯಮದಡಿ ವಿಂಡೀಸ್ ತಂಡದ ಗುರಿಯನ್ನು ನಂತರ 33 ಓವರುಗಳಲ್ಲಿ 188 ರನ್‌ಗಳಿಗೆ ಪರಿಷ್ಕೃತಗೊಳಿಸಲಾಯಿತು. ಆತಿಥೇಯರು 14 ಎಸೆತಗಳು ಉಳಿದಿರುವಂತೆ 6 ವಿಕೆಟ್‌ಗೆ 191 ರನ್ ಹೊಡೆದರು.

ಅಶ್ವಿನಿ– ತನಿಶಾ ಜೋಡಿಗೆ ಪ್ರಶಸ್ತಿ

ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದ್ದರು.

ಗುವಾಹಟಿ (ಪಿಟಿಐ): ಭಾರತದ ಮಹಿಳಾ ಡಬಲ್ಸ್ ಜೋಡಿಯಾದ ಅಶ್ವಿನಿ ಪೊನ್ನಪ್ಪ- ತನಿಶಾ ಕ್ರಾಸ್ಟೊ, ಭಾನುವಾರ ಗುವಾಹಟಿ ಮಾಸ್ಟರ್ಸ್‌ನಲ್ಲಿ ಚೀನಾ ತೈಪೆಯ ಸುಂಗ್ ಶುವೊ ಯುನ್ ಮತ್ತು ಯು ಚಿಯೆನ್ ಹುಯಿ ಜೋಡಿಯನ್ನು ನೇರ ಆಟಗಳಿಂದ ಸೋಲಿಸಿ ಎರಡನೇ ಸಲ ಸೂಪರ್ 100 ಮಟ್ಟದ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಎರಡನೇ ಶ್ರೇಯಾಂಕದ ಭಾರತದ ಜೋಡಿ ಫೈನಲ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ 81ನೇ ಸ್ಥಾನದಲ್ಲಿರುವ ಜೋಡಿಯನ್ನು 21–13, 21–19 ರಲ್ಲಿ ಪರಾಭವಗೊಳಿಸಲು 40 ನಿಮಿಷಗಳನ್ನಷ್ಟೇ ತೆಗೆದುಕೊಂಡಿತು.

ಇವರಿಬ್ಬರು ಕಳೆದ ವಾರ ಲಖನೌದಲ್ಲಿ ನಡೆದ ಸೈಯ್ಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದ್ದರು.

ಪ್ರೊ ಕಬಡ್ಡಿ ಲೀಗ್: ತಮಿಳು ತಲೈವಾಸ್ ಪರಾಭವ

ವಾರಿಯರ್ಸ್‌ಗೆ ಒಲಿದ ಗೆಲುವು

• ಕೆ.ಎಸ್. ಸುನಿಲ್

ತಮಿಳು ತಲೈವಾಸ್ ಮತ್ತು ಬೆಂಗಾಲ್ ವಾರಿಯರ್ಸ್ ತಂಡಗಳ ನಡುವೆ ಪೈಪೋಟಿ

ಬೆಂಗಳೂರು: ನಾಯಕ ಮಣಿಂದರ್ ಸಿಂಗ್ ಮತ್ತು ಶುಭಂ ಶಿಂಧೆ ಅವರ ಉತ್ತಮ ರೈಡಿಂಗ್ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡ, ಭಾನುವಾರ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 48–38ರಿಂದ ತಮಿಳು ತಲೈವಾಸ್ ತಂಡವನ್ನು ಮಣಿಸಿತು. ಇದು ವಾರಿಯರ್ಸ್ ತಂಡಕ್ಕೆ ಎರಡನೇ ಗೆಲುವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆಗೆ 27–21 ರಲ್ಲಿ ಮುನ್ನಡೆಯಲ್ಲಿದ್ದ ವಾರಿಯರ್ಸ್ ತಂಡ ಉತ್ತರಾರ್ಧದಲ್ಲೂ ಉತ್ತಮ ಪ್ರದರ್ಶನ ತೋರಿತು. ಮಣಿಂದರ್ ಸಿಂಗ್ ತಮ್ಮ ತಂಡಕ್ಕೆ 16 ಪಾಯಿಂಟ್ಸ್ ಗಳಿಸಿಕೊಟ್ಟರು. ಅದರಲ್ಲಿ 13 ರೈಡ್‌ನಿಂದಲೇ ಬಂತು. ಮತ್ತೊಬ್ಬ ಆಟಗಾರ ಶುಭಂ ಶಿಂಧೆ ಅವರು 11 ಅಂಕಗಳನ್ನು ಸಂಪಾದಿಸಿದರು. ಪಂದ್ಯದ ಕೊನೆ ಕೆಲವು ನಿಮಿಷಗಳಲ್ಲಿ ವಾರಿಯರ್ಸ್ ತಂಡದ ಮುನ್ನಡೆ ಹೆಚ್ಚುತ್ತಾ ಹೋಯಿತು.

ವಾರಿಯರ್ಸ್ ಎರಡು ಬಾರಿ ಹಾಗೂ ತಲೈವಾಸ್ ಮೂರು ಬಾರಿ ಆಲೌಟ್ ಆಯಿತು. ತಲೈವಾಸ್ ತಂಡದ ನರೇಂದ್ರ ಹೋಶಿಯಾರ್ ಅವರು ಉತ್ತಮ ಪ್ರದರ್ಶನ ನೀಡಿ 13 ಪಾಯಿಂಟ್ಸ್ ಕಲೆ ಹಾಕಿದರು. ಇದರಲ್ಲಿ 9 ರೈಡ್‌ನಿಂದ ಬಂತು. ಅಜಿಂಕ್ಯ ಪವಾರ್ ಅವರು 8 ಪಾಯಿಂಟ್ ಗಳಿಸಿದರು.

ಅಹಮದಾಬಾದ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ತಲೈವಾಸ್ ತಂಡವು 42–31ರಿಂದ ದಬಾಂಗ್ ಡೆಲ್ಲಿ ವಿರುದ್ಧ ಗೆಲುವು ಸಾಧಿಸಿತ್ತು. ಬೆಂಗಾಲ್ ವಾರಿಯರ್ಸ್ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಗಳ ನಡುವೆ ಶುಕ್ರವಾರ ನಡೆದ ಪಂದ್ಯ 28–28ರಲ್ಲಿ ಸಮಬಲಗೊಂಡಿತ್ತು. ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು ಬೆಂಗಾಲ್ ವಾರಿಯರ್ಸ್ ತಂಡವು 32–30 ರಿಂದ ಸೋಲಿಸಿತ್ತು.

ಸ್ಟೀಲರ್ಸ್‌ಗೆ ಗೆಲುವು: ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 35–33 ಪಾಯಿಂಟ್ಸ್‌ಗಳಿಂದ ದಬಾಂಗ್ ಡೆಲ್ಲಿ ತಂಡವನ್ನು ಸೋಲಿಸಿತು. ಸಿದ್ಧಾರ್ಥ್ ದೇಸಾಯಿ (10), ಆಶಿಷ್ (7) ಸ್ಟೀಲರ್ಸ್ ಗೆಲುವಿನಲ್ಲಿ ಮಿಂಚಿದರು. ದಬಾಂಗ್ ತಂಡದ ನವೀನ್ ಕುಮಾರ್ 16 ಪಾಯಿಂಟ್ಸ್ ಕಲೆ ಹಾಕಿದರು.

ಇಂದಿನ ಪಂದ್ಯಗಳು

ಜೈಪುರ ಪಿಂಕ್ ಪ್ಯಾಂಥರ್ಸ್ –ಗುಜರಾತ್ ಜೈಂಟ್ಸ್ (ರಾತ್ರಿ 8); ಬೆಂಗಳೂರು ಬುಲ್ಸ್-ಯುಪಿ ಯೋಧಾಸ್ (ರಾತ್ರಿ 9)

ಕ್ರಿಕೆಟ್: ಪಾಕ್‌ಗೆ ಮಣಿದ ಭಾರತ

ದುಬೈ (ಪಿಟಿಐ): ಅಜಾನ್ ಅವೈಸ್ ಅವರ ಅಜೇಯ ಶತಕದ ಬಲದಿಂದ ಪಾಕಿಸ್ತಾನ ತಂಡವು ಎಸಿಸಿ 19 ವರ್ಷದೊಳಗಿನ ಪುರುಷರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಎಂಟು ವಿಕೆಟ್‌ಗಳಿಂದ ಭಾರತವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಆದರ್ಶ್ ಸಿಂಗ್ (62; 81ಎ, 4x4, 6x1), ನಾಯಕ ಉದಯ್ ಸಹಾರನ್ (60;98ಎ, 4x5) ಹಾಗೂ ಸಚಿನ್ ದಾಸ್ (58; 42ಎ, 4x2, 6x3) ಅವರ ಅರ್ಧ ಶತಕಗಳ ನೆರವಿನಿಂದ 50 ಓವರ್‌ಗಳಲ್ಲಿ ಒಂಬತ್ತು ವಿಕೆಟ್ ನಷ್ಟಕ್ಕೆ 259 ರನ್ ಗಳಿಸಿತು. ಪಾಕ್ ಪರ ಮೊಹಮ್ಮದ್ ಜೀಶಾನ್ 46ಕ್ಕೆ 4 ವಿಕೆಟ್ ಪಡೆದರು.

ಸವಾಲಿನ 260 ರನ್‌ಗಳ ಗುರಿಯನ್ನು ಪಾಕಿಸ್ತಾನ ತಂಡವು 47 ಓವರ್‌ಗಳಲ್ಲಿ ಎರಡು ವಿಕೆಟ್ ನಷ್ಟಕ್ಕೆ ತಲುಪಿತು. ಅಜಾನ್ ಅವೈಸ್ (ಔಟಾಗದೆ 105; 130ಎ, 4x10) ಗೆಲುವಿನ ರೂವಾರಿ ಎನಿಸಿದರೆ, ಶಾಹಜೇಬ್ ಖಾನ್ (63; 88ಎ, 4x4, 6x3) ಹಾಗೂ ನಾಯಕ ಸಾದ್ ಬೇಗ್ (ಔಟಾಗದೆ 68; 51ಎ) ಅವರೂ ಉಪಯುಕ್ತ ಕಾಣಿಕೆ ನೀಡಿದರು.

ಕೂಚ್ ಬಿಹಾರ್ ಟ್ರೋಫಿ: ಸಂಕಷ್ಟದಲ್ಲಿ ಕರ್ನಾಟಕ

ಮೈಸೂರು: ಕರ್ನಾಟಕದ ಎನ್.ಸಮರ್ಥ್ ಹಾಗೂ ಹಾರ್ದಿಕ್ ರಾಜ್ ಬೌಲಿಂಗ್ ದಾಳಿಗೆ ತತ್ತರಿಸಿದ ಉತ್ತರಪ್ರದೇಶ ತಂಡ, ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 177 ರನ್‌ಗೆ ಆಲೌಟ್ ಆಯಿತು. ಆದರೆ ಗೆಲುವಿಗೆ 183 ರನ್ ಗೆಲುವಿನ ಗುರಿಯನ್ನು ಬೆನ್ನತ್ತಿದ ಆತಿಥೇಯ ತಂಡ 35 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಸಮರ್ಥ್ 4 ವಿಕೆಟ್ ಪಡೆದರೆ, ಹಾರ್ದಿಕ್ 3 ವಿಕೆಟ್ ಗಳಿಸಿದರು. ಹಾರ್ದಿಕ್, ಕರ್ನಾಟಕದ ಮೊದಲ ಇನಿಂಗ್ಸ್‌ನಲ್ಲಿ ಅರ್ಧ ಶತಕ ಗಳಿಸಿದ್ದರು. ಕಾವ್ಯ ಥಿಯೊಟಿಯಾ (48) ಹಾಗೂ ಶುಭಂ ಮಿಶ್ರಾ (31) ಅವರು ಉತ್ತರ ಪ್ರದೇಶಕ್ಕೆ ಆಸರೆಯಾದರು.

ಗೆಲುವಿಗೆ ಸಾಧಾರಣ ಗುರಿ ಬೆಂಬತ್ತಿದ ರಾಜ್ಯ ತಂಡಕ್ಕೆ ಶುಭಂ ಮಿಶ್ರಾ ಕಾಡಿದರು. ಕೃಶಿವ್ ಬಜಾಜ್, ಮಾಧವ್ ಧಾರವಾಡಕರ್, ಸಮರ್ಥ್ ಹಾಗೂ ಕಾರ್ತಿಕೇಯ ಅವರ ವಿಕೆಟ್‌ಗಳನ್ನು ಪಡೆದು ಆರಂಭಿಕ ಆಘಾತ ನೀಡಿದರು. ದಿನದಾಟದ ಅಂತ್ಯಕ್ಕೆ ಸಮಿತ್ ದ್ರಾವಿಡ್ (ಔಟಾಗದೇ 4) ಹಾಗೂ ಧ್ರುವ್ ಪ್ರಭಾಕರ್ (ಔಟಾಗದೇ 0) ಕ್ರೀಸ್‌ನಲ್ಲಿದ್ದರು.

ಸಂಕ್ಷಿಪ್ತ ಸ್ಕೋರು: ಉತ್ತರ ಪ್ರದೇಶ ಮೊದಲ ಇನಿಂಗ್ಸ್: 77 ಓವರ್‌ಗಳಲ್ಲಿ 239. ಕರ್ನಾಟಕ ಮೊದಲ ಇನಿಂಗ್ಸ್ 78 ಓವರ್‌ಗಳಲ್ಲಿ 234. ಉತ್ತರ ಪ್ರದೇಶ 2ನೇ ಇನಿಂಗ್ಸ್: 97.3 ಓವರ್‌ಗಳಲ್ಲಿ 177 (ಕಾವ್ಯ ಥಿಯೊಟಿಯಾ 48. ಎನ್.ಸಮರ್ಥ್ 22ಕ್ಕೆ 4, ಹಾರ್ದಿಕ್ ರಾಜ್ 37ಕ್ಕೆ 3. ಕರ್ನಾಟಕ 2ನೇ ಇನಿಂಗ್ಸ್ 13 ಓವರ್‌ಗಳಲ್ಲಿ 5 ವಿಕೆಟ್‌ಗೆ 33 (ಪ್ರಖರ್ ಚತುರ್ವೇದಿ 12, ಶುಭಂ ಮಿಶ್ರಾ 9ಕ್ಕೆ4.

ಸಂಕ್ಷಿಪ್ತ ಸುದ್ದಿ

ಬಾಲ್ ಬ್ಯಾಡ್ಮಿಂಟನ್: ದಕ್ಷಿಣ ಕನ್ನಡಕ್ಕೆ ಪ್ರಶಸ್ತಿ

ಹೊಸಪೇಟೆ (ವಿಜಯನಗರ): ದಕ್ಷಿಣ ಕನ್ನಡ ಜಿಲ್ಲಾ ತಂಡಗಳು (ಮೂಡುಬಿದಿರೆಯ ಆಳ್ವಾಸ್ ಕಾಲೇಜು) ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಜ್ಯ ಪದವಿಪೂರ್ವ ಕಾಲೇಜುಗಳ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಬಾಲಕರ ಮತ್ತು ಬಾಲಕಿಯರ ಎರಡೂ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿವೆ.

ಬಾಲಕರ ವಿಭಾಗದಲ್ಲಿ ದಕ್ಷಿಣ ಕನ್ನಡ 2–0ಯಿಂದ ಚಿಕ್ಕಮಗಳೂರು ಜಿಲ್ಲೆಯನ್ನು ಸೋಲಿಸಿದರೆ, ಬಾಲಕಿಯರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇದೇ ಅಂತರದಿಂದ ಉತ್ತರ ಕನ್ನಡ ಜಿಲ್ಲೆಯನ್ನು ಸೋಲಿಸಿತು.

ಟಿಟಿ: ತನಿಷ್ಕಾಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ ಅವರು ಹರಿಯಾಣದ ಪಂಚಕುಲಾದಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಬೆಳ್ಳಿ ಗೆದ್ದರು.

ಫೈನಲ್ ಪಂದ್ಯದಲ್ಲಿ ತನಿಷ್ಕಾ 9-11, 5-11, 6-11 ರಿಂದ ಪಶ್ಚಿಮ ಬಂಗಾಲದ ಅಂಕೋಲಿಕಾ ಚಕ್ರವರ್ತಿ ಎದುರು ಸೋತು ರನ್ನರ್ ಅಪ್ ಆದರು.

ಯು.ಪಿ ವಾರಿಯರ್ಸ್ ಆಟಗಾರ್ತಿ, ಬೆಂಗಳೂರಿನ ವೃಂದಾ ದಿನೇಶ್ ಸಂಭ್ರಮ

'ಪೋಷಕರಿಗೆ ಕನಸಿನ ಕಾರು ಉಡುಗೊರೆ'

ವೃಂದಾ ದಿನೇಶ್

ಮುಂಬೈ (ಪಿಟಿಐ): ಬೆಂಗಳೂರಿನ ಯುವ ಬ್ಯಾಟರ್ ವೃಂದಾ ದಿನೇಶ್ ಅವರ ಪಾಲಿಗೆ ಶನಿವಾರ ಮಹಿಳಾ ಪ್ರೀಮಿಯರ್ ಲೀಗ್ ಬಿಡ್ಡಿಂಗ್ ಸ್ಮರಣೀಯ. ರಾಷ್ಟ್ರೀಯ ತಂಡಕ್ಕೆ ಇನ್ನೂ ಆಡುವ ಮೊದಲೇ ಅವರು ₹1.30 ಕೋಟಿಗೆ ಯು.ಪಿ ವಾರಿಯರ್ಸ್ ಪಾಲಾಗಿದ್ದಾರೆ. ಈಗ ತಂದೆ–ತಾಯಿಗೆ ಉಡುಗೊರೆಯಾಗಿ ಕಾರನ್ನು ನೀಡಲು ಅವರು ಬಯಸಿದ್ದಾರೆ.

ತಂದೆ–ತಾಯಿ ಮೇಲೆ ತುಂಬಾ ಅಕ್ಕರೆ ಹೊಂದಿರುವ ವೃಂದಾ, ಬೆಂಗಳೂರಿನಲ್ಲಿರುವ ತಾಯಿಗೆ ಭಾವನೆ ತುಂಬಿ ಮಾತು ಹೊರಬರಲಿಕ್ಕಿಲ್ಲ ಎಂಬ ಕಾರಣದಿಂದ ವಿಡಿಯೊ ಕಾಲ್ ಮಾಡಲು ಹೋಗಿರಲಿಲ್ಲ.

'ಅವರಿಗೆ (ತಾಯಿಗೆ) ಭಾವನೆ ತಡೆಯಲಾಗದೇ ಕಣ್ಣುತುಂಬಿ ಬರಬಹುದು ಎಂದೆನಿಸಿತು. ಅವರಿಗೆ ಭಾವನೆ ತಡೆಯಲಾಗದು ಎಂಬ ಕಾರಣದಿಂದ ವಿಡಿಯೊ ಕಾಲ್ ಮಾಡ ಲಿಲ್ಲ. ನಾನು ಮೊಬೈಲ್ ಕರೆಯಷ್ಟೇ ಮಾಡಿದೆ. ಅವರ ಗಂಟಲು ತುಂಬಿಬಂದು ಧ್ವನಿ ಕ್ಷೀಣವಾಗಿತ್ತು' ಎಂದು 22 ವರ್ಷದ ಆಟಗಾರ್ತಿ ಹೇಳಿದರು. ಯುಪಿ ವಾರಿಯರ್ಸ್ ಏರ್ಪಡಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

ಬಲಗೈ ಬ್ಯಾಟರ್ ವೃಂದಾ ಅವರು ಮಹಿಳಾ 23 ವರ್ಷದೊಳಗಿನವರ ಟಿ20 ಟ್ರೋಫಿ ಟೂರ್ನಿಯಲ್ಲಿ ಆಡಲು ಕರ್ನಾಟಕ ತಂಡದ ಜೊತೆ ಛತ್ತೀಸಗಢದ ರಾಯಪುರದಲ್ಲಿ ಇದ್ದಾರೆ.

ಭಾರತದ ಆಟಗಾರ್ತಿಯರ ಪೈಕಿ ಕಾಶ್ವಿ ಗೌತಮ್ ಬಿಟ್ಟರೆ ಅತಿ ಹೆಚ್ಚು ಮೊತ್ತಕ್ಕೆ ಫ್ರಾಂಚೈಸಿ ಪಾಲಾದ ಎರಡನೇ ಆಟಗಾರ್ತಿ ಎಂಬ ಹಿರಿಮೆ ವೃಂದಾ ಅವರದಾಯಿತು. ಕಾಶ್ವಿ ₹2ಕೋಟಿ ಮೊತ್ತಕ್ಕೆ ಗುಜರಾತ್ ಜೈಂಟ್ಸ್ ಪಾಲಾಗಿದ್ದರು.

'ಪೋಷಕರು ಏನೂ ನಿರೀಕ್ಷೆ ಇಟ್ಟುಕೊಳ್ಳದೇ ಮಕ್ಕಳಿಗಾಗಿ ಸಾಕಷ್ಟು ತ್ಯಾಗ ಮಾಡಿರುತ್ತಾರೆ. ಆದರೆ ಅವರ ಮೊಗದಲ್ಲಿ ಮೂಡುವ 1000 ವ್ಯಾಟ್ ನಗುವಿನ ಮೌಲ್ಯವನ್ನು ಅವರ ತ್ಯಾಗವನ್ನರಿತ ಮಕ್ಕಳು ತಿಳಿದೇ ಇರುತ್ತಾರೆ' ಎಂದರು.

'ಅವರಿಗೆ ನನ್ನಿಂದ ತುಂಬಾ ಖುಷಿಯಾಗಿದೆ. ಅವರಿಗೆ ಹೆಮ್ಮೆ ಮೂಡಿಸಬೇಕೆಂದು ಬಯಸಿದ್ದೇನೆ. ಅವರು ಕಂಡಿದ್ದ ಕನಸಿನ ಕಾರನ್ನು ಉಡುಗೊರೆಯಾಗಿ ನೀಡುತ್ತೇನೆ. ಈಗ ನನ್ನ ಮುಂದಿರುವ ಮೊದಲ ಗುರಿಯೇ ಅದು. ನಂತರದ್ದೆಲ್ಲಾ ಆಮೇಲೆ' ಎಂದು ವೃಂದಾ ಹೇಳಿದರು.

'ಒತ್ತಡವಿಲ್ಲ; ಒಳ್ಳೆಯ ಆಟ ಆಡುವೆ'

ದೊಡ್ಡ ಮೊತ್ತಕ್ಕೆ ತಂಡವೊಂದರ ಪಾಲಾದಾಗ, ಕ್ರಿಕೆಟಿಗರ ಮೇಲೆ ಒತ್ತಡ ಬಿದ್ದು, ಅದು ಅವರ ಪ್ರದರ್ಶನದ ಮೇಲೆ ಪರಿಣಾಮ ಬೀರಿದ ನಿದರ್ಶನಗಳಿವೆ.

'ಈ ಮೊತ್ತ ದೊಡ್ಡದು. ಆದರೆ ಅದು ನನ್ನ ಕೈಲಿರಲಿಲ್ಲ. ನಾನು ತಂಡಕ್ಕೆ ಆಯ್ಕೆಯಾಗಿದ್ದೇನೆ. ನನ್ನಿಂದಾದಷ್ಟು ಒಳ್ಳೆಯ ಆಟ ಆಡುವೆ. ಈ ಮೊತ್ತ ನನ್ನ ಆಟದ ಮೇಲೆ ಹೆಚ್ಚಿನ ವ್ಯತ್ಯಾಸ ಮಾಡಲಿಕ್ಕಿಲ್ಲ. ಆಡುವುದಷ್ಟೇ ನನ್ನ ಕೆಲಸ' ಎಂದು ವೃಂದಾ ಹೇಳಿದರು.

ನಾಯಕಿ ಅಲಿಸಾ ಹೀಲಿ ಜೊತೆ ಇನಿಂಗ್ಸ್ ಆರಂಭಿಸಬೇಕೆಂದು ತಮ್ಮ ಆಸೆಗಳಲ್ಲೊಂದು ಎಂದು ಅವರು ಹೇಳಿದರು. 'ತಂತ್ರಗಾರಿಕೆ ಮತ್ತು ನಾಯಕತ್ವದ ಕೌಶಲಗಳಿಗೆ ಹೆಸರಾಗಿರುವ ಅಲಿಸಾ ತಮ್ಮ ಮೆಚ್ಚಿನ ಆಟಗಾರ್ತಿ ಎಂದು ವೃಂದಾ ಹೇಳಿದರು. 'ಅವರ ಜೊತೆ ಬ್ಯಾಟಿಂಗ್ ಆರಂಭಿಸುವುದು ಕನಸು ನನಸಾದ ಹಾಗೆ' ಎಂದಿದ್ದಾರೆ.

ಆರ್‌ಸಿಬಿ ಸೇರುವ ಆಸೆ: ಆದರೆ ತಾವು ಬೆಂಗಳೂರಿನವರಾಗಿರುವ ಕಾರಣ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆಡಬೇಕೆಂಬ ಆಸೆ ಮನಸ್ಸಿನೊಳಗಿತ್ತು ಎಂದು ಅವರು ಒಪ್ಪಿಕೊಂಡರು. ಆದರೆ, ಯುಪಿ ವಾರಿಯರ್ಸ್ ಕೊಂಡುಕೊಂಡಿದ್ದರಿಂದ ಸಂತಸವಾಗಿದೆ ಎಂದರು.

ವಿಜಯ್ ಹಜಾರೆ ಟ್ರೋಫಿ ಕ್ವಾರ್ಟರ್‌ಫೈನಲ್ ಇಂದು

ಮಯಂಕ್ ಬಳಗಕ್ಕೆ ವಿದರ್ಭ ಸವಾಲು

ಮಯಂಕ್ ಅಗರವಾಲ್

ರಾಜ್‌ಕೋಟ್: ಕರ್ನಾಟಕ ತಂಡವು ಸೋಮವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಬೆಂಗಳೂರಿನ ಕರುಣ್ ನಾಯರ್ ಅವರನ್ನು ಒಳಗೊಂಡಿರುವ ವಿದರ್ಭ ತಂಡವನ್ನು ಎದುರಿಸಲಿದೆ.

ಕರ್ನಾಟಕ ತಂಡವು ಸಿ ಗುಂಪಿನಲ್ಲಿ ಕೇವಲ ಹರಿಯಾಣ ವಿರುದ್ಧ ಮಾತ್ರ ಸೋತಿತ್ತು. ಉಳಿದೆಲ್ಲಾ ಪಂದ್ಯಗಳಲ್ಲಿ ಜಯಿಸಿ ಎಂಟರ ಘಟ್ಟ ತಲುಪಿದೆ. ಆದರೆ ಗುಂಪು ಹಂತದಲ್ಲಿ ರನ್‌ಗಳ ಹೊಳೆ ಹರಿಸಿದ್ದ ದೇವದತ್ತ ಪಡಿಕ್ಕಲ್ ಮತ್ತು ಭರವಸೆಯ ವೇಗಿ ವಿದ್ವತ್ ಕಾವೇರಪ್ಪ ಅವರು ಭಾರತ ಎ ತಂಡದೊಂದಿಗೆ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿದ್ದಾರೆ. ಆದ್ದರಿಂದ ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ಆರ್. ಸಮರ್ಥ್ ಅವರ ಮೇಲೆಯೇ ಹೆಚ್ಚಿನ ನಿರೀಕ್ಷೆ ಇದೆ. ಗುಂಪು ಹಂತದ ಮೊದಲ ಪಂದ್ಯದಲ್ಲಿ ಇವರಿಬ್ಬರೂ ಮಿಂಚಿದ್ದರು. ಆದರೆ ನಂತರದ ಪಂದ್ಯಗಳಲ್ಲಿ ಅವರಿಂದ ನಿರೀಕ್ಷಿತ ಆಟ ಮೂಡಿಬಂದಿಲ್ಲ.

ಅನುಭವಿ ಮಯಂಕ್ ಅಗರವಾಲ್ ಅವರ ಮೇಲೆ ಮಧ್ಯಮ ಕ್ರಮಾಂಕವನ್ನು ಗಟ್ಟಿಗೊಳಿಸುವ ಹೊಣೆ ಇದೆ. ಯುವ ಆಟಗಾರರಾದ ಅಭಿನವ್ ಮನೋಹರ್, ನಿಕಿನ್ ಜೋಸ್, ವಿಕೆಟ್‌ಕೀಪರ್ ಬ್ಯಾಟರ್ ಬಿ.ಆರ್. ಶರತ್ ಮತ್ತು ಕೃಷ್ಣನ್ ಶ್ರೀಜಿತ್ ಅವರಿಗೆ ತಮ್ಮ ಪ್ರತಿಭೆ ತೋರ್ಪಡಿಸಲು ಅವಕಾಶ ಒದಗಲಿದೆ. ಮಧ್ಯಮವೇಗಿ ವಾಸುಕಿ ಕೌಶಿಕ್, ವೈಶಾಖ ವಿಜಯಕುಮಾರ್, ಸ್ಪಿನ್ನರ್ ಕೆ ಗೌತಮ್ ಅವರ ಮೇಲೆಯೂ ನಿರೀಕ್ಷೆಯ ಭಾರವಿದೆ.

ಈ ಹಿಂದೆಯೂ ನಾಕ್‌ಔಟ್ ಹಂತಗಳಲ್ಲಿ ಎದುರಾಳಿ ತಂಡಗಳಿಗೆ ಆಘಾತ ನೀಡುವಲ್ಲಿ ಯಶಸ್ವಿಯಾಗಿದ್ದ ವಿದರ್ಭ ತಂಡದಲ್ಲಿ ಈ ಬಾರಿ ಕರ್ನಾಟಕ ಕರುಣ್ ನಾಯರ್ ಇದ್ದಾರೆ. ಭಾರತ ತಂಡದಲ್ಲಿಯೂ ಆಡಿರುವ ಅನುಭವಿ ಕರುಣ್ ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಬಾರಿಸಿದ್ದರು. ಇದೇ ಮೊದಲ ಬಾರಿಗೆ ಅವರು 'ತವರಿನ ತಂಡ'ವನ್ನು ಎದುರಿಸಲಿದ್ದಾರೆ. ಅನುಭವಿ ಬೌಲರ್ ಉಮೇಶ್ ಯಾದವ್ ಮತ್ತು ರಜನೀಶ್ ಗುರ್ಬಾನಿ ಅವರನ್ನು ಎದುರಿಸುವ ಸವಾಲು ಕರ್ನಾಟಕದ ಬ್ಯಾಟರ್‌ಗಳ ಮುಂದಿದೆ.

ಇನ್ನುಳಿದ ಕ್ವಾರ್ಟರ್‌ಫೈನಲ್‌ಗಳು

ಹರಿಯಾಣ–ಬಂಗಾಳ; ರಾಜಸ್ಥಾನ–ಕೇರಳ; ಮುಂಬೈ–ತಮಿಳುನಾಡು

ಪಂದ್ಯಗಳ ಆರಂಭ: ಬೆಳಿಗ್ಗೆ 9